ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜೂನ್ 24 ಶನಿವಾರ 2023

ಸಂಪುಟ: 44 | ಸಂಚಿಕೆ: 69 | ಪುಟಗಳು: 12 | ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com





ಮಾನಸ ಗಂಗೋತ್ರಿಯಲ್ಲಿ ಬಾಬಾ ಸಾಹೇಬರ 132ನೇ ಜನ್ಮದಿನಾಚರಣೆ

ಅಂಬೇಡ್ಕರ್ ವಿಚಾರಧಾರೆ, ಚಿಂತನೆ ಮನೆ-ಮನೆಗೆ ತಲುಪಿಸಿ

-ಸಚಿವ ಸತೀಶ್ ಜಾರಕಿಹೊಳಿ

ಮೈಸೂರು, ಜೂ.22(ಜಿಎ)- ದೇಶದಲ್ಲಿ ಅಂಬೇಡ್ಕರ್ ಅವರ ವಿಚಾರಧಾರೆ ಕುರಿತಂತೆ ಅತೀ ಹೆಚ್ಚು ಕಾರ್ಯಕ್ರಮಗಳು ನಡೆಯುತ್ತವೆ. ಆದರೆ ಅವರ ವಿಚಾರವನ್ನು ಮನೆ ಮನೆ ತಲುಪಿಸುವಲ್ಲಿ ನಾವು ವಿಫಲರಾಗಿದ್ದೇವೆ. ಪ್ರಾಮಾಣಿಕವಾಗಿ ಇದನ್ನು ತಲುಪಿಸುವ ಕಾರ್ಯವಾಗಬೇಕು. ಅವರ ವಿಚಾರ ಮತ್ತು ಚಿಂತನೆಗಳು ನಮ್ಮ ರಕ್ತದಲ್ಲಿ ಇರಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಕರೆ ನೀಡಿದರು.

ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಸಂಶೋಧನಾ ವಿದ್ಯಾರ್ಥಿ ವೇದಿಕೆ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 132ನೇ ಜನ್ಮ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಕಾರ್ಯಕ್ರಮದಲ್ಲಿ ಅನೇಕ ವಿಷಯಗಳ ಬಗ್ಗೆ ಬೆಳಕು ಚೆಲ್ಲಲಾಗಿದ್ದು, ಚರ್ಚೆ ಮಾಡಲು ಉತ್ತಮ ವೇದಿಕೆಯಾಗಿದೆ. ದೇಶದಲ್ಲೇ ಅತೀ ಹೆಚ್ಚು ಕಾರ್ಯಕ್ರಮ ಆಗುವುದು ಅಂಬೇಡ್ಕರ್ ಅವರದ್ದು, ಅದರಲ್ಲಿ ಅವರ ಚಿಂತನೆ ಇರುತ್ತದೆ. ಅಂಬೇಡ್ಕರ್ ಅವರು ಸಂವಿಧಾನಕ್ಕೆ ಮಾತ್ರ ಸೀಮಿತರಲ್ಲ. ಮಹಿಳೆಯರು ಮತ್ತು

> “ದಲಿತ ವರ್ಗಕ್ಕೆ ಕೆಳಮಟ್ಟದ ಕೆಲಸವನ್ನು ಸೀಮಿತ ಮಾಡಿದ್ದಾರೆ. ಆದರೆ, ಅದರಲ್ಲಿ ಕೆಲವರು ವೈದ್ಯರಾಗುತ್ತಿದ್ದಾರೆ. ಹೀಗೆ ಉನ್ನತ ಸ್ಥಾನಗಳನ್ನು ಪಡೆದುಕೊಳ್ಳಿ, ಅಂಬೇಡ್ಕರ್ ಅವರ ವಿಚಾರಗಳ ಬಗ್ಗೆ ಬೆಳಕು ಚೆಲ್ಲೋಣ. ನಿಮ್ಮ ಜೊತೆ ಮತ್ತೊಬ್ಬರನ್ನು ಬೆಳಸಿದರೆ, ಅಂಬೇಡ್ಕರ್ ಅವರ ಆಶಯ ಪೂರ್ಣವಾಗುತ್ತದೆ.
> -ಸತೀಶ್ ಜಾರಕಿಹೊಳಿ

ಮಕ್ಕಳಿಗೆ ವಿಶೇಷ ಕೊಡುಗೆಗಳನ್ನು ನೀಡಿದ್ದಾರೆ. ಅವರ ಈ ಎಲ್ಲಾ ವಿಚಾರಗಳ ಬಗ್ಗೆ ಹೆಮ್ಮೆ ಇರಬೇಕು ಎಂದರು.

ಮಹಾತ್ಮ ಗಾಂಧಿ, ಜವಾಹರ ಲಾಲ್ ನೆಹರು ಮತ್ತು ಅಂಬೇಡ್ಕರ್ ಅವರನ್ನು ಇತಿಹಾಸದಿಂದ ದೂರ ಇಡಬೇಕು ಎಂದು ಕೆಲವರು ಮುಂದಾಗಿದ್ದಾರೆ. ಆದರೆ, ಅದು ಅಸಾಧ್ಯದ ಮಾತಾಗಿದ್ದು, ಭೂಮಿ ಇರುವವರೆಗೂ ಅಂಬೇಡ್ಕರ್ ಇರುತ್ತಾರೆ. ಕಳೆದ ಹತ್ತು ವರ್ಷದಲ್ಲಿ ಪಠ್ಯ ಪುಸ್ತಕ ಪರಿಷ್ಕರಣೆ ಮತ್ತು ನೂತನ ಶಿಕ್ಷಣ ನೀತಿಯಿಂದ ನಮ್ಮ ಹಕ್ಕುಗಳನ್ನು ಕಸಿದುಕೊಳ್ಳುವ ಕಾರ್ಯವಾಗಿದೆ. ಮನುಸ್ಮೃತಿ ಮತ್ತೆ ಬಂದರೆ ಇತಿಹಾಸದಿಂದ ಇವರು ದೂರ ಆಗಲಿದ್ದಾರೆ. ಆದರೆ, ಸದ್ಯ ಅಂಬೇಡ್ಕರ್ ಅವರ ವಿಚಾರಧಾರೆಯನ್ನು ನಂಬಿಕೊಂಡವರು ಇತಿಹಾಸವನ್ನು ಉಳಿಸುತ್ತಿದ್ದಾರೆ. ಅದಕ್ಕಾಗಿ ಶಾಲಾ-ಕಾಲೇಜು ಮತ್ತು ವಿವಿಯಲ್ಲಿ ಅಂಬೇಡ್ಕರ್ ಅವರ ಬಗ್ಗೆ ತಿಳಿಸುವ ವಿಚಾರ ಸಂಕಿರಣಗಳಾಗಬೇಕು ಎಂದು ಸಲಹೆ ನೀಡಿದರು.



ಧರ್ಮ ಮತ್ತು ಜಾತಿ ಆಧಾರದ ಮೇಲೆ ಶೋಷಣೆಗಳಾಗಿವೆ. ಹೊಸ ತಂತ್ರಜ್ಞಾನಕ್ಕೆ ಬದಲಾಗಬೇಕು. ನಾವು ಮಾತ್ರ ವಿದ್ಯಾವಂತವರು ಮತ್ತು ಶ್ರೀಮಂತರಾದರೆ ಸಾಲಲ್ಲ. ನಮ್ಮ ಅಕ್ಕ ಪಕ್ಕದವರೂ ಬೆಳೆಯಬೇಕು. ಉರಿಗೌಡ, ನಂಜೇಗೌಡ ಅವರು ಇತಿಹಾಸದಲ್ಲಿ ಇರಲಿಲ್ಲ. ಆದರೂ ಅವರು ಬಾಹುಬಲಿ ಚಿತ್ರದಂತೆ ಸದ್ದು ಮಾಡಿದ್ದಾರೆ. ಆದರೆ, ದಲಿತರಿಗೆ ಶಿಕ್ಷಣ ಕಲಿಸಿದ ತಲಕಾಡು ರಂಗೇಗೌಡ ಅವರ ಬಗ್ಗೆ ಸದ್ದೇ ಇಲ್ಲ. ಅವರು ದಲಿತರನ್ನು ಪೋಷಿಸಿದರು ಎಂಬ ಕಾರಣಕ್ಕೆ ಅವರ ಹೆಸರನ್ನು ದೂರ ಮಾಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಮಾತ್ರ ದಲಿತರು ಎಂಬ ಗೊಂದಲವಿದೆ ಆದರೆ, ನಿಜವಾಗಿಯೂ ದಲಿತ ಅಂದರೆ ಯಾವ ಸಮುದಾಯದಲ್ಲಿ ಶೋಷಿತರು ಇದ್ದಾರೋ ಅವರೆಲ್ಲರೂ ದಲಿತರೇ, ಇಂತಹವರ ಪರವಾಗಿ ಅಂಬೇಡ್ಕರ್, ಬಸವಣ್ಣ ಹೋರಾಟ ಮಾಡಿದರು. ಅಂಬೇಡ್ಕರ್ ಅವರು ಕೊನೆಯಲ್ಲಿ ಎಲ್ಲಾ ಧರ್ಮದ ಬಗ್ಗೆ ವಿಮರ್ಶೆ ಮಾಡಿ ಬೌದ್ಧ ಧರ್ಮವನ್ನು ಆಯ್ಕೆ ಮಾಡಿಕೊಂಡರು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಎಂಎಲ್‌ಸಿ ನಾಗರಾಜ್ ಯಾದವ್, ಲೇಖಕಿ ದು.ಸರಸ್ವತಿ, ಕುಲಸಚಿವೆ ವಿ.ಆರ್.ಶೈಲಜಾ, ಕುವೆಂಪು ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ವಿಜಯ ಕುಮಾರಿ ಎಸ್.ಕರಿಕಲ್ ಉಪಸ್ಥಿತರಿದ್ದರು.

ಸಮಾನವಾಗಿ ನೋಡುವ ಶಾಸ್ತ್ರ ಕೃತಿ ಇಲ್ಲ...

ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಪ್ರಗತಿ ಪರ ಚಿಂತಕ ಮತ್ತು ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ಪುರುಷೋತ್ತಮ ಬಿಳಿಮಲೆ, 2011ರ ಜನಗಣತಿಯ ಪ್ರಕಾರ ದೇಶದಲ್ಲಿ 19,568 ತಾಯಿ ನುಡಿಗಳ ಭಾಷೆಗಳಿವೆ. ಅದರಲ್ಲಿ ಅಂಗೀಕರಿಸಿರುವುದು 22 ಭಾಷೆಗಳು. ಅವುಗಳಲ್ಲಿ ಉತ್ತರ ಭಾರತದ 18 ಇದ್ದರೆ, ದಕ್ಷಿಣ ಭಾರತದ 4 ಭಾಷೆಗಳು ಮಾತ್ರ ಇವೆ. ನಮ್ಮ ಭಾಷೆಯನ್ನು ಸೇರಿಸಿ ಎಂದು ಕೊಡವ, ತುಳು ಸೇರಿದಂತೆ 97 ಭಾಷೆಯವರು ಕೇಂದ್ರ ಸರ್ಕಾರದ ಮುಂದೆ ಮನವಿ ಮಾಡಿದ್ದಾರೆ ಎಂದರು.

ಯುನಿಸ್ಕೋ ಪ್ರಕಾರ ಭಾರತದಲ್ಲಿ 172 ಭಾಷೆಗಳು ಅಳಿವಿನಂಚಿನಲ್ಲಿವೆ. ಅದರಲ್ಲಿ 102 ಭಾಷೆಗಳು 30 ವರ್ಷಗಳ ನಂತರ ಹಾಗೂ ಸುಮಾರು 70 ಭಾಷೆಗಳು 25 ವರ್ಷದಲ್ಲಿ ನಾಶವಾಗುತ್ತವೆ ಎಂದು ತಿಳಿಸಿದ್ದು, ಇಷ್ಟು ಭಾಷೆಗಳು ದೇಶದಲ್ಲಿವೆ ಎಂದು ಅಧಿಕೃತವಾಗಿದೆ. ಅಂದರೆ ಅಷ್ಟು ಸಂಸ್ಕೃತಿಗಳು ನಮ್ಮಲ್ಲಿವೆ ಎಂದರ್ಥ. ಇಷ್ಟು ಭಾಷೆ ಸಂಸ್ಕೃತಿ ಇದ್ದರೂ ಈ ದೇಶದಲ್ಲಿ ಸಮಾನವಾಗಿ ನೋಡುವ ಶಾಸ್ತ್ರ, ಕೃತಿಗಳಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಮೆರಿಕಾದ ಟೆಸ್ಲಾ ಕಂಪನಿ ಉದ್ಯಮ ಸ್ಥಾಪಿಸಲು ಎಲ್ಲಾ ರೀತಿ ಸಹಕಾರ

ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಭರವಸೆ



ಬೆಂಗಳೂರು, ಜ.23 (ಕೆಎಂಶಿ)- ಎಲೆಕ್ಟ್ರಿಕ್ ಕಾರುಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಅಮೆರಿಕದ ಟೆಸ್ಲಾ ಕಂಪನಿಯು ರಾಜ್ಯದಲ್ಲಿ ಉತ್ಪಾದನಾ ಘಟಕ ಸ್ಥಾಪಿಸುವ ಬಗ್ಗೆ ಪರಿಗಣಿಸಬೇಕು. ಕಂಪನಿ ಘಟಕ ಸ್ಥಾಪಿಸಲು ನಿರ್ಧರಿಸಿದರೆ ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡಲಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂಬಿ ಪಾಟೀಲ್ ಕೋರಿದ್ದಾರೆ.

ಟೆಸ್ಲಾ ಕಂಪನಿಯು ತನ್ನ ಉದ್ಯಮವನ್ನು ಭಾರತದಲ್ಲಿ ವಿಸ್ತರಿಸಲು ಇಷ್ಟಪಡುವುದಾದರೆ ಕರ್ನಾಟಕ ರಾಜ್ಯವು ಅದಕ್ಕೆ ಪ್ರಶಸ್ತ ತಾಣವಾಗಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ. ಈ ಕಂಪನಿಯು ಎಲೆಕ್ಟ್ರಿಕ್ ಕಾರುಗಳ ಜೊತೆಗೆ ಸೌರಫಲಕಗಳು ಮತ್ತಿತರ ಪರ್ಯಾಯ ಇಂಧನ ಉತ್ಪನ್ನಗಳನ್ನು ತಯಾರಿಸುತ್ತದೆ. ಅಲ್ಲದೇ, ಸ್ಪೇಸ್-ಎಕ್ಸ್ ಕಂಪನಿ ಮೂಲಕ ಉಪಗ್ರಹ ಅಂತರ್ಜಾಲ ಸೇವೆ (ಸ್ಟಾರ್‌ಲಿಂಕ್) ಒದಗಿಸುತ್ತಿದೆ. ಈ ಕಂಪನಿಗಳನ್ನು ಮುನ್ನಡೆಸುತ್ತಿರುವ ಉದ್ಯಮಿ ಎಲಾನ್ ಮಸ್ಕ್ ಅವರು ಕರ್ನಾಟಕದಲ್ಲಿ ಯಾವುದೇ ಉದ್ಯಮ ಸ್ಥಾಪಿಸುವುದಾದರೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು.

ಜೂ.24ರಿಂದ ಭಗವದ್ಗೀತಾ ಅಭಿಯಾನ

ಮೈಸೂರು, ಜೂ.22- ನಗರದ ಅಗ್ರಹಾರದಲ್ಲಿರುವ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ ಶ್ರೀ ಉತ್ತರಾದಿ ಮಠದಲ್ಲಿ ಜೂ.24ರಿಂದ 28ರವರೆಗೆ ಸಂಜೆ 6.30ರಿಂದ 7.30ರವರೆಗೆ ನಾಡಿನ ಸುಪ್ರಸಿದ್ಧ ಪ್ರವಚನಕಾರರಾದ ಪಂ.ಶ್ರೀ ಶ್ರೀಕಾಂತಾಚಾರ್ಯ ಮುಕ್ಕುಂದಿ ಅವರಿಂದ ಏಳನೇ ತಿಂಗಳ ಪ್ರವಚನ 'ಭಗವದ್ಗೀತೆ ಪ್ರವಚನ-ಅಧ್ಯಾಯ 10' ಕುರಿತಾಗಿ ಪ್ರವಚನವನ್ನು ಆಯೋಜಿಸಲಾಗಿದೆ. ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಗುರುಗಳ ಅನುಗ್ರಹವನ್ನು ಪಡೆಯಬೇಕೆಂದು ಮಠದ ಪತ್ರಿಕಾ ಪ್ರತಿನಿಧಿ ವಿದ್ವಾನ್ ಸಿ.ವಿ.ಶ್ರೀನಿವಾಸ ರಾವ್ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ. ಮಾಹಿತಿಗೆ ಮೊಬೈಲ್ 9448147459 ಸಂಪರ್ಕಿಸಬಹುದು.

ಕೆ.ಹೆಚ್.ಮುನಿಯಪ್ಪ-ಪಿಯೂಷ್ ಗೋಯೆಲ್ ಭೇಟಿ

ಹೆಚ್ಚುವರಿ ಅಕ್ಕಿ ಪೂರೈಕೆಗೆ ಕೇಂದ್ರ ನಿರಾಕರಣೆ

ವಿಳಂಬ ಆದ್ರೂ ಅಕ್ಕಿ ಕೊಟ್ಟೇ ಕೊಡುತ್ತೇವೆ

ನವದೆಹಲಿ/ಬೆಂಗಳೂರು, ಜೂ.23- ಕಾಂಗ್ರೆಸ್ ಗ್ಯಾರಂಟಿಗಳಲ್ಲಿ ಒಂದಾದ ಕುಟುಂಬದ ಪ್ರತಿ ಸದಸ್ಯರಿಗೆ 10 ಕೆಜಿ ಅಕ್ಕಿ ಒದಗಿಸುವ 'ಅನ್ನಭಾಗ್ಯ' ಯೋಜನೆ ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದೆ. ಜುಲೈ 1 ರಂದು ಯೋಜನೆ ಚಾಲನೆಗೊಳಿಸಲು ಸರ್ಕಾರ ಉದ್ದೇಶಿಸಿತ್ತು. ಆದರೆ, ಕೇಂದ್ರ ಸರ್ಕಾರ ಹೆಚ್ಚುವರಿ ಅಕ್ಕಿ ಪೂರೈಕೆಗೆ ನಿರಾಕರಿಸಿದ್ದು, ಯೋಜನೆ ವಿಳಂಬವಾಗುವ ಸಾಧ್ಯತೆ ಹೆಚ್ಚಾಗಿದೆ.

ಈ ಸಂಬಂಧ ಆಹಾರ ಸಚಿವ ಕೆ.ಹೆಚ್. ಮುನಿಯಪ್ಪ, ಇಂದು ಕೇಂದ್ರ ಆಹಾರ ಸಚಿವ ಪಿಯೂಷ್ ಗೋಯೆಲ್ ಅವರನ್ನು ಭೇಟಿ ಮಾಡಿದ್ದು, ಅಕ್ಕಿ ಪೂರೈಕೆ ಸಂಬಂಧ ಮಾತುಕತೆ ನಡೆಸಿದ್ದಾರೆ.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಹೆಚ್. ಮುನಿಯಪ್ಪ, ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಒದಗಿಸಲು 1.35 ಲಕ್ಷ ಮೆಟ್ರಿಕ್ ಟನ್ ಅಕ್ಕಿ ನೀಡುವಂತೆ ಕೇಂದ್ರ ಸಚಿವರಿಗೆ ಮನವಿ ಮಾಡಲಾಯಿತು. ಆದರೆ, ಸಚಿವರು 300 ಲಕ್ಷ



ಟನ್ ಅಕ್ಕಿಯನ್ನು ಇತರೆ ವಿವಿಧ ಯೋಜನೆಗಳಿಗೆ ಮೀಸಲಿಡಲಾಗಿದ್ದು, ಆದ್ದರಿಂದ ರಾಜ್ಯಕ್ಕೆ ಅಕ್ಕಿ ನೀಡಲು ಸಾಧ್ಯವಾಗುವುದಿಲ್ಲ ಎಂದು ಹಾರಿಕೆಯ ಉತ್ತರ ನೀಡಿದ್ದಾರೆ. ಇದರಲ್ಲಿ ರಾಜಕೀಯ ದುರುದ್ದೇಶ ಎದ್ದು ಕಾಣುತ್ತಿದೆ ಎಂದು ಆರೋಪಿಸಿದರು.

ಎಷ್ಟೇ ಕಷ್ಟವಾದರೂ ಉಚಿತವಾಗಿ ಅಕ್ಕಿ ಕೊಡುತ್ತೇವೆ. ನಮ್ಮದೇ ಆದ ದಾರಿ ಕಂಡುಕೊಳ್ಳುತ್ತೇವೆ. ಏಜೆನ್ಸಿಗಳ ಮೂಲಕ ಅಕ್ಕಿ ಖರೀದಿಗೆ ಪ್ರಯತ್ನ ಮಾಡುತ್ತೇವೆ. ಈ ಬಗ್ಗೆ ಈ ವಾರದಲ್ಲಿ ತೀರ್ಮಾನವಾಗಲಿದೆ. ವಿಳಂಬ ಆದರೂ ಅಕ್ಕಿ ಕೊಟ್ಟೇ ಕೊಡುತ್ತೇವೆ ಎಂದು ಮುನಿಯಪ್ಪ ಹೇಳಿದರು.

ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್ ಖರೀದಿ ಪ್ರಕ್ರಿಯೆಗೆ ಚಾಲನೆ

ಮೈಸೂರು, ಜೂ.23(ಎಸ್‌ಪಿಎನ್)- 2023-24ನೇ ಸಾಲಿನ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ ಉಚಿತವಾಗಿ ಒದಗಿಸಲಾಗುತ್ತಿರುವ 'ಶೂ ಮತ್ತು ಸಾಕ್ಸ್' ಖರೀದಿಸುವ ಪ್ರಕ್ರಿಯೆಗೆ ಶಾಲಾ ಶಿಕ್ಷಣ ಇಲಾಖೆ ಚಾಲನೆ ನೀಡಿದೆ.

1ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಶಾಲೆಗಳ ಎಲ್ಲಾ ಮಕ್ಕಳಿಗೆ ಶೂ ಮತ್ತು ಸಾಕ್ಸ್ ಗಳನ್ನು ವಿತರಣೆ ಮಾಡಲು ತಾಲೂಕುವಾರು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನೇರವಾಗಿ ಕೆ-2 ಮುಖಾಂತರ ಸಂಬಂಧಿಸಿದ ಬಿಇಓಗಳಿಗೆ ನಿಗದಿತ ಲೆಕ್ಕ ಶೀರ್ಷಿಕೆಯಡಿ ಅನುದಾನವನ್ನು ಬಿಡುಗಡೆಯಾಗಿದ್ದು, ಸರ್ಕಾರ ನೀಡಿರುವ 19 ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಮನವಿ ಸೂಚಿಸಲಾಗಿದೆ. 'ಶೂ ಮತ್ತು ಸಾಕ್ಸ್'ಗಳ ಖರೀದಿ ಪ್ರಕ್ರಿಯೆ ಪ್ರಾರಂಭಿಸುವ ಮುನ್ನ ಆಯಾ ಶಾಲೆಯ ಎಸ್‌ಡಿಎಂಸಿಯು ಅನುಮೋದಿತ ಸಮಿತಿಯನ್ನು ರಚಿಸಿ, ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಬೇಕು.

ಸಮಿತಿ ಅಧ್ಯಕ್ಷರನ್ನು ನೇಮಿಸಿ, ಶಾಲಾ ಮುಖ್ಯಶಿಕ್ಷಕರು ಸದಸ್ಯ ಕಾರ್ಯದರ್ಶಿ, ಎಸ್‌ಡಿಎಂಸಿ ನಾಮ ನಿರ್ದೇಶಿತ ಮೂವರು ಸದಸ್ಯರು ಇದರಲ್ಲಿ ಕಡ್ಡಾಯವಾಗಿ ಇಬ್ಬರು ಮಹಿಳಾ ಸದಸ್ಯರನ್ನು ಆಯ್ಕೆ ಮಾಡುವಂತೆ ಸೂಚಿಸಲಾಗಿದೆ. 1ರಿಂದ 5ನೇ ತರಗತಿ ವಿದ್ಯಾರ್ಥಿಗಳಿಗೆ ತಲಾ 265 ರೂ., 6ರಿಂದ 8ನೇ ತರಗತಿ ಪ್ರತಿ ವಿದ್ಯಾರ್ಥಿಗೆ 295 ರೂ. 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ತಲಾ 325 ರೂ.ಗಳನ್ನು ನಿಗದಿಪಡಿಸಿದ್ದು, ಆಯಾ ಜಿಲ್ಲೆಯ ಶೂ ಮತ್ತು ಸಾಕ್ಸ್ ಖರೀದಿ ಕುರಿತು ಡಿಡಿಪಿಐ ನೇತೃತ್ವದಲ್ಲಿ ಮೇಲ್ವಿಚಾರಣೆ ಮಾಡತಕ್ಕದ್ದು. ಅದೇ ರೀತಿ ಜಿಲ್ಲಾ ಹಂತದಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು ಪಡೆದು ಉಳಿಕೆ/ಕೊರತೆಯಾಗುವ ಅನುದಾನವನ್ನು ಆಯಾ ವಲಯ ಬಿಇಓಗಳಿಂದ ಹಿಂಪಡೆದು ಕೊರತೆಯಾಗುವ ಜಿಲ್ಲೆಗಳಿಗೆ ಮರು ಹೊಂದಾಣಿಕೆ ಮಾಡುವಂತೆ ಸೂಚಿಸಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತರಾದ ಡಾ.ಆರ್.ವಿಶಾಲ್ ಸೂಚಿಸಿದ್ದಾರೆ.

ಪಂಚಮಸಾಲಿ ಸಮುದಾಯ ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡಿಸಲು ಶಿಫಾರಸು

● ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ● ಬಜೆಟ್ ಅಧಿವೇಶನ ನಂತರ ಕಾನೂನು ಹಾಗೂ ಸಂವಿಧಾನ ತಜ್ಞರೊಂದಿಗೆ ಚರ್ಚಿಸಿ ನಿರ್ಧಾರ



ಬೆಂಗಳೂರು, ಜೂನ್ 23(ಕೆಎಂಶಿ)- ಪಂಚಮಸಾಲಿ ಸಮುದಾಯವನ್ನು ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡಲು ಶಿಫಾರಸ್ಸು ಮಾಡುವ ಬಗ್ಗೆ ಬಜೆಟ್ ಅಧಿವೇಶನದ ನಂತರ ಕಾನೂನು ಹಾಗೂ ಸಂವಿಧಾನ ತಜ್ಞರೊಂದಿಗೆ ಸಭೆ ಕರೆದು ಸಂವಿಧಾನಾತ್ಮಕ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಪಂಚಮಸಾಲಿ ಸಮುದಾಯವನ್ನು ರಾಜ್ಯ 2ಎ ಪಟ್ಟಿಗೆ ಹಾಗೂ ಕೇಂದ್ರ ಸರ್ಕಾರದ ಒಬಿಸಿ ಮೀಸಲಾತಿಗೆ ಸೇರಿಸಲು ಜಯ ಮೃತ್ಯುಂಜಯ ಸ್ವಾಮೀಜಿ ಅವರ ನೇತೃತ್ವದಲ್ಲಿ ಪಂಚಮಸಾಲಿ ಶಾಸಕರ ನಿಯೋಗವು ಇಂದು ಅವರನ್ನು ಭೇಟಿ ಮಾಡಿ ಮನವಿ ಮಾಡಿತು. ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿದಲ್ಲಿ ಅವರೂ ಮುಖ್ಯ ವಾಹಿನಿಗೆ ಬರಲು ಅನುಕೂಲವಾಗುತ್ತದೆ ಎಂದು ಸ್ವಾಮೀಜಿ ತಿಳಿಸಿದರು.

ಹಿಂದಿನ ಸರ್ಕಾರ ಮೀಸಲಾತಿ ವಿಚಾರದಲ್ಲಿ ತರಾತುರಿಯಲ್ಲಿ ನಿರ್ಧಾರ ಕೈಗೊಂಡು ಗೊಂದಲ ಸೃಷ್ಟಿಸಿದೆ. ಮೂಗಿಗೆ ತುಪ್ಪ ಸವರುವ ಬದಲು ಹಣೆಗೆ ತುಪ್ಪ ಸವರಿದೆ ಎಂದ ಮುಖ್ಯಮಂತ್ರಿಗಳು, ಮೀಸಲಾತಿ ವಿಚಾರವಾಗಿ ಆತುರದ ನಿರ್ಧಾರ ಸಲ್ಲದು. ಸಂವಿಧಾನಾತ್ಮಕ ಹಾಗೂ ಕಾನೂನಿನ ಚೌಕಟ್ಟಿನಲ್ಲಿ ತೀರ್ಮಾನ ಮಾಡಬೇಕು. ಹಾಗಾಗಿ ಸಭೆ ಕರೆದು ಕೂಲಂಕುಷವಾಗಿ ಚರ್ಚಿಸಲಾಗುವುದು ಎಂದರು. ಮುಖ್ಯಮಂತ್ರಿಗಳ ಮಾತಿಗೆ ಪ್ರತಿಕ್ರಿಯಿಸಿದ ಶಾಸಕ ವಿನಯ್ ಕುಲಕರ್ಣಿ, ಮುಸ್ಲಿಂ ಸಮುದಾಯದ ಪಾಲಿನ ಮೀಸಲಾತಿಯನ್ನು ಕಿತ್ತುಕೊಟ್ಟಿದ್ದನ್ನು ನಾವುಗಳು ಅವತ್ತೇ ವಿರೋಧಿಸಿದ್ದೆವು ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.6.2023 ಶನಿವಾರ, ಮಳೆ ನಕ್ಷತ್ರ: ಆರಿದ್ರಾ 22.06.2023 ರಿಂದ 7.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ-ಪ್ರಾಯೋಜಿತ ಕಾರ್ಯಕ್ರಮ 6.40 ಹಾಡು ಹೇಳಿದ ಕಥೆ, ಪ್ರಸ್ತುತಿ- ಡಾ. ಮೈಸೂರ್ ಉಮೇಶ್, 7.15ಭಾವಗೀತೆಗಳು- ಸುಪ್ರಿಯಾ ಆಚಾರ್ಯ, ರತ್ನಮಾಲಾ ಪ್ರಕಾಶ್, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ-ಬಾನುಲಿ ಸರಣಿ, ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ಡಾ. ವಿ. ದೊರೆಸ್ವಾಮಿ ಅಯ್ಯಂಗಾರ್-ಪಂಚ ವೀಣೆ, 11.00 “ಸ್ವರಾಜ್”-ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ತಾಥೆ

ಮಧ್ಯಾಹ್ನ: 12.30ದೇವರನಾಮ- ಸಿ.ಎಲ್. ನಾಗಶ್ರೀ, 1.00ಪ್ರಗತಿ ಪಥ-ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ-ಡಾ.ಎ.ಡಿ. ಶ್ರೀನಿವಾಸನ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ-ನಂದಗೋಕುಲ, ಪ್ರಸ್ತುತಿ- ಕೆ.ಬಿ. ಮೀನಾ, 4.00 ನಾಟಕ-ಕೊನೆ ಅರಿಯದ ಪಯಣ, ರಚನೆ-ಅಲಕಾ ಕಟ್ಟೆಮನೆ, ನಿರ್ಮಾಣ-ಶ್ರೀನಿವಾಸ ಪ್ರಸಾದ್, 4.30 ನೆನಪಿನಂಗಳ-ಸಾಹಿತಿ ಸಿದ್ಧಲಿಂಗಯ್ಯ ಅವರೊಂದಿಗೆ ಡಾ. ಮೈಸೂರು ಉಮೇಶ್ ಅವರು ನಡೆಸಿದ ಸಂವಾದ, ಪ್ರಸ್ತುತಿ-ಎಸ್. ಲಕ್ಷ್ಮೀನಾರಾಯಣ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ-ತೋರಣ ಹೂರಣ, ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ- ಎನ್. ಕೇಶವಮೂರ್ತಿ, ಡಾ. ಮೈಸೂರು ಉಮೇಶ್, ಆರ್. ಲೋಕೇಶ್ವರಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ದೇವಶೀಶ್ ದೇಯ್ - ಗಾಯನ

■ **ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್, ಗ್ಯಾಸ್ಟ್ರೋಎಂಟರಾಲಜಿ ವಿಭಾಗ :** ಎನ್‌ಎಎಫ್‌ಎಲ್‌ಡಿ/ಎನ್‌ಎಎಸ್‌ಎಚ್ ಕುರಿತು ಜಾಗೃತಿ ಮೂಡಿಸಲು ವಾಕಥಾನ್, ಅತಿಥಿಗಳು : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಸ್ಥಳ: ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗ, ಬೆಳಗ್ಗೆ 6ಕ್ಕೆ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** 81ನೇ ಜಯಂತ್ಯುತ್ಸವ-2023, 19ನೇ ಬ್ರಹ್ಮರಥೋತ್ಸವ, ಬೆಳಗ್ಗೆ 9 ಗಂಟೆಗೆ ಸುಬ್ರಹ್ಮಣ್ಯ ಹೋಮ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಸಹಜ ಸಮೃದ್ಧಿ :** ಮೈಸೂರು ಹಲಸಿನ ಹಬ್ಬ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10 ರಿಂದ.

■ **ಶ್ರೀ ಶಿವಪಾದ ಗುರುಸೇವಾ ನಂದಿಧ್ವಜ ಸಂಘ :** 87ನೇ ವಾರ್ಷಿಕೋತ್ಸವ ಹಾಗೂ ನೂತನ ನಂದಿಧ್ವಜದ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ, ಸಮ್ಮುಖ : ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಶಾಸಕರಾದ ಟಿ.ಎಸ್. ಶ್ರೀವತ್ಸ, ಗಣೇಶ್ ಪ್ರಸಾದ್, ಮುಖಂಡ ಪ್ರದೀಪ್ ಕುಮಾರ್, ಪಾಲಿಕೆ ಸದಸ್ಯರಾದ ಸೌಮ್ಯ ಉಮೇಶ್, ಬಿ.ವಿ. ಮಂಜುನಾಥ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆರ್. ಅಂಕಯ್ಯ, ಸ್ಥಳ: ಸಂಘದ ಮುಂಭಾಗ, ಬಸವೇಶ್ವರ ರಸ್ತೆ, ಅಗ್ರಹಾರ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು :** ಸಂಶೋಧನಾ ವಿಧಾನ ಕುರಿತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಕರ್ನಲ್ ಪ್ರೊ. ವೈ.ಎಸ್. ಸಿದ್ದೇಗೌಡ, ಅಧ್ಯಕ್ಷತೆ : ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ. ಡಿ. ಆನಂದ್, ಗೌರವ ಅತಿಥಿಗಳು : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲ ಪ್ರೊ. ಎಂ.ಪಿ. ವಿಜಯೇಂದ್ರ ಕುಮಾರ್, ಸ್ಥಳ: ಸುವರ್ಣ ಮಹೋತ್ಸವ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಎಟಿಎಂಇ ಇಂಜಿನಿಯರಿಂಗ್ ಕಾಲೇಜು :** ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು : ವಿಟಿಯು ಕುಲಸಚಿವ ಡಾ. ಟಿ.ಎನ್. ಶ್ರೀನಿವಾಸ, ಡಿಎಕ್ಸ್‌ಸಿ ಟೆಕ್ನಾಲಜಿ ಡೆಲಿವರಿ ಮ್ಯಾನೇಜರ್ ನಟೇಶ್ ಪಾಲಹಳ್ಳಿ, ಅಧ್ಯಕ್ಷತೆ : ಕಾಲೇಜು ಕಾರ್ಯದರ್ಶಿ ಕೆ. ಶಿವಶಂಕರ್, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ.ಎ.ಕೆ. ಮೂರ್ತಿ, ಸ್ಥಳ:ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ.

■ **ವನಿತಾ ಸದನ, ಕೃಷ್ಣಮೂರ್ತಿಪುರಂ, ಹಿರಣ್ಯಯಿ ಪ್ರತಿಷ್ಠಾನ, ಕಾವೇರಿ ಬಳಗ :** ಹೆಲನ್ ಕೆಲರ್ ಜನ್ಮ ದಿನಾಚರಣೆ ಮತ್ತು ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಸುಶೀಲಾಬಾಯಿ ನಾಗೇಶ್‌ರಾವ್ ಟ್ರಸ್ಟ್ ಅಧ್ಯಕ್ಷ ಬಿ.ಆರ್. ರವಿ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಪ್ರಧಾನ ಭಾಷಣ : ಸಂಖ್ಯಾಶಾಸ್ತ್ರಜ್ಞ ಎಸ್.ಜಿ. ಸೀತಾರಾಂ, ಪುರಸ್ಕಾರ ಪ್ರದಾನ : ಶ್ರೀನಿವಾಸರಾವ್, ಬಹುಮಾನ ವಿತರಣೆ : ಶ್ರೀಮತಿ ಶಿವಮ್ಮ, ಸ್ಥಳ: ವನಿತಾ ಸದನ ಪ್ರೌಢಶಾಲಾ ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ

■ **ಜೆಎಸ್‌ಎಸ್ ಪ್ರೌಢಶಾಲೆ :** ವಿದ್ಯಾರ್ಥಿ ಸಂಘದ ಉದ್ಘಾಟನೆ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಉದ್ಘಾಟನೆ : ಕೆ.ಕೆ. ದೇವಾನಂದ ವರಪ್ರಸಾದ್, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಡಾ. ಪಿನ್ನಪಾಟಿ ಪದ್ಮನಾಭನ್ ಚಾರಿಟೆಬಲ್ ಫೌಂಡೇಷನ್ ಮತ್ತು ನಿತ್ಯ ಅನ್ನದಾನ ಚಾರಿಟೆಬಲ್ ಟ್ರಸ್ಟ್ :** 100 ಬಡ ರೋಗಿಗಳಿಗೆ ಉಚಿತ ದೃಷ್ಟಿದಾನ (ಕನ್ನಡಕ) ವಿತರಣಾ ಸಮಾರಂಭ, ಅಧ್ಯಕ್ಷತೆ : ಫೌಂಡೇಷನ್ ಅಧ್ಯಕ್ಷ ಡಾ. ಪಿ. ಪದ್ಮನಾಭನ್, ಉದ್ಘಾಟನೆ : ಮೇಯರ್ ಶಿವಕುಮಾರ್, ಮುಖ್ಯ ಅತಿಥಿಗಳು : ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ಜಿ.ಡಿ. ಹರೀಶ್‌ಗೌಡ, ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಕೆ.ಆರ್. ಆಸ್ಪತ್ರೆ ಡೀನ್ ಮತ್ತು ಅಧೀಕ್ಷಕಿ ಡಾ. ದಾಕ್ಷಾಯಿಣಿ, ಡಾ. ಮದನ್‌ಲಾಲ್, ಎಸ್.ಕೆ. ದಿನೇಶ್, ಶ್ರೀಮತಿ ಎ. ವಿಜಯಲಕ್ಷ್ಮಿ, ಆರ್.ಪಿ. ರವಿಶಂಕರ್, ಸ್ಥಳ: ಪುರಭವನ, ಬೆಳಗ್ಗೆ 11ಕ್ಕೆ

■ **ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜನತಾ ಸೇನಾ ದಳ :** ಬುದ್ಧ, ಬಸವೇಶ್ವರ, ಅಂಬೇಡ್ಕರ್, ಡಾ. ಶಿವಕುಮಾರ ಸ್ವಾಮೀಜಿ ಜಯಂತಿ, ಕರ್ನಾಟಕ ಸಂಯುಕ್ತ ರಂಗದ ಜಾಗೃತಿ ಟ್ರಸ್ಟ್ ಉದ್ಘಾಟನೆ, ಉದ್ಘಾಟನೆ : ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಡಾ. ಮಹೇಶ್ ಜೋಶಿ, ಟಿ.ಎನ್. ಕನಕರಾಜು, ಬಿ.ಆರ್. ಹಿರೇಮಠ, ಸ್ಥಳ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11.30ಕ್ಕೆ.

■ **ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ :** ವಿಜ್ಞಾನ ಕಲಿಕಾ ಸ್ಪಂದನ ಶಿಬಿರದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಎಸ್.ಎನ್. ಹೆಗ್ಡೆ, ಮುಖ್ಯ ಅತಿಥಿಗಳು: ಪ್ರೊ.ಎಂ.ಎ.ಶ್ರೀಧರ್, ಅಧ್ಯಕ್ಷತೆ:ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ. ಪಿ.ವೆಂಕಟರಾಮಯ್ಯ, ಸ್ಥಳ: ಐನ್‌ಸ್ಟೈನ್ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 12ಕ್ಕೆ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ಸ್ವಾಸ್ಥ್ಯ ಕಾರ್ಯಕ್ರಮ-3, ನಿವೃತ್ತ ಪ್ರಾಂಶುಪಾಲರಾದ ಡಾ. ಪಿ. ಲತಾ ಅವರಿಂದ ಆಯುರ್ವೇದದ ಪ್ರಸ್ತುತತೆ ಕುರಿತು ಉಪನ್ಯಾಸ, ಉಪಸ್ಥಿತರು : ಯೋಗ ಶಿಕ್ಷಕಿ ಕಾಂಚನ ಗಂಗಾ, ಸ್ಥಳ: ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಸಂಜೆ 4ಕ್ಕೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ವಿದ್ವತ್-2023, ರಾಜ್ಯ ಮಟ್ಟದ ಅಂತರ ಕಾಲೇಜು ಬಿಸ್‌ಟೆಕ್ ಎಕ್ಸ್ಟ್ರಾವೆಗಾಂಜ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು :ಡಾ. ಚೈತ್ರಾ ಭರತ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಪ್ರಿನ್ಸಿಪಾಲ್ ಡಾ. ಎಸ್. ಮರಿಗೌಡ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಸಂಜೆ 4.30ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು : ಗೃಹಿಣಿ ಅನಿತಾ ಅಶೋಕ್, ಸ್ಥಳ: ಸುರುಚಿ ರಂಗ ಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ.

■ **ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ :** ಸಂಜೆ 4ಕ್ಕೆ ಸ್ನೇಹ ಮಿಲನ, ಸಂಘದ ನವೀಕೃತ ವಿದ್ಯಾರ್ಥಿ ನಿಲಯ ಹಾಗೂ ಅತಿಥಿ ಗೃಹ ಲೋಕಾರ್ಪಣೆ, ಸಂಜೆ 5ಕ್ಕೆ ಭಾವಮಿಲನ, ಉದ್ಘಾಟನೆ: ಆಧ್ಯಾತ್ಮಿಕ ಚಿಂತಕ ಶಂಕರ್ ದೇವನೂರು, ಕೃತಿ ಬಿಡುಗಡೆ: ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ, ಕೃತಿ ಪರಿಚಯ: ಪ್ರಾಧ್ಯಾಪಕ ರಾಮಚಂದ್ರ ಭಟ್, ಪ್ರಕಾಶಕರ ನುಡಿ: ಸಾಹಿತಿ ಮಹೇಶ್ ಆರ್.ನಾಯಕ್, ಲೇಖಕರ ಮಾತು: ಡಾ.ನಾರಾಯಣ್ ಹೆಗಡೆ, ಡಾ.ಶಿಲ್ಪಾ ಹೆಗಡೆ ಮತ್ತು ತಂಡದವರಿಂದ ಸಂಗೀತ ಸಂಜೆ, ಸ್ಥಳ: ಯೋಗ ಸಂಸ್ಕೃತಿ ಭವನ, ಕುವೆಂಪುನಗರ.

■ **ಗುರುವಂದನಾ ಸಮಾರಂಭ ಸಮಿತಿ, ಮೈಸೂರು ಮತ್ತು ನಗರ ನಾಗರಿಕ ಭಕ್ತವೃಂದ :** ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನದ ಶ್ರೀ ಶ್ರೀ 108 ಶ್ರೀ ರಘುಭೂಷಣತೀರ್ಥ ಶ್ರೀಪಾದಂಗಳವರ ಕರಕಮಲ ಸಂಜಾತ ನೂತನ ಪೀಠಾಧಿಪತಿಗಳಾದ ಶ್ರೀ 108 ಶ್ರೀ ಅಕ್ಷೋಭ್ಯ ರಾಮಪ್ರಿಯತೀರ್ಥ ಶ್ರೀಪಾದಂಗಳವರ ಮೈಸೂರು ಮಹಾನಗರ ಪುರಪ್ರವೇಶ ಮತ್ತು ಗುರುವಂದನಾ ಸಮಾರಂಭ, ಸಾನ್ನಿಧ್ಯ : ಶ್ರೀ ಅಕ್ಷೋಭ್ಯ ರಾಮಪ್ರಿಯತೀರ್ಥ ಶ್ರೀಪಾದಂಗಳವರು, ಉಪಸ್ಥಿತರು : ವಿದ್ವಾನ್ ಸಿ.ಎಚ್. ಬದರೀನಾಥಾಚಾರ್ಯ, ಡಾ. ಬೆ.ನಾ. ವಿಜಯೀಂದ್ರಾಚಾರ್ಯ, ಡಾ.ಡಿ.ಪಿ. ಮಧೂಸೂಧನಾಚಾರ್ಯ, ಅತಿಥಿಗಳು : ಅಬಕಾರಿ ಇಲಾಖೆ ಉಪ ಆಯುಕ್ತ ಡಾ. ಬಿ. ಮಾದೇಶ್, ಪ್ರಾಚಾರ್ಯ ಎಂ. ಮುತ್ತುರಾಜು, ಸ್ಥಳ: ಶ್ರೀ ಎಂ. ವೆಂಕಟಕೃಷ್ಣಯ್ಯ ಸಭಾಂಗಣ, ಶ್ರೀ ಶಾರದಾ ವಿಲಾಸ ಕಾನೂನು ಕಾಲೇಜು, ಸಂಜೆ 5ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಶ್ರೀ ಶ್ರೀಕಾಂತಾಚಾರ್ಯ ಮುಕ್ಕುಂದಿ ಅವರಿಂದ ಭಗವದ್ಗೀತೆ ಪ್ರವಚನ-ಅಧ್ಯಾಯ 10 ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್ :** ವಿದುಷಿ ಧನ್ಯಾ ದಿನೇಶ್ ಅವರಿಂದ ಗಾಯನ, ವಿದ್ವಾನ್ ಕೃತಿಕ್ ಕೌಶಿಕ್-ಪಿಟೀಲು, ವಿದ್ವಾನ್ ನಂದನ್ ಕಶ್ಯಪ್-ಮೃದಂಗ, ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6ಕ್ಕೆ.

■ **ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ :** ಶಿವಾನುಭವ ದಾಸೋಹ ಮಾಲಿಕೆಯ 302ನೇ ಕಾರ್ಯಕ್ರಮ, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಮಾತೆಂಬುದು ಜ್ಯೋತಿರ್ಲಿಂಗ ಕುರಿತು ಉಪನ್ಯಾಸ, ಅಧ್ಯಕ್ಷತೆ : ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಆರ್. ಮೂಗೇಶಪ್ಪ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸಂಜೆ 6ಕ್ಕೆ

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಪಂಡಿತ್ ಶ್ರೀ ಶ್ರೀಕಾಂತಾಚಾರ್ಯ ಮುಕ್ಕುಂದಿ ಅವರಿಂದ ಭಗವದ್ಗೀತೆ ಪ್ರವಚನ-ಅಧ್ಯಾಯ 10 ಕುರಿತು ಉಪನ್ಯಾಸ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30 ರಿಂದ.

■ **ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ :** ರಾಜ್ಯ ಮಟ್ಟದ ಕ್ರೀಡೋತ್ಸವ-2023, ಬೆಳಗ್ಗೆ 8.30ಕ್ಕೆ ಉದ್ಘಾಟನೆ : ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಸಂಜೆ 5.30ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ : ರಾಜ್ಯ ಯುವ ಸಬಲೀಕರಣ, ಕ್ರೀಡೆ ಮತ್ತು ಮಾಹಿತಿ ತಂತ್ರಜ್ಞಾನ ಸಮಿತಿ ಅಧ್ಯಕ್ಷ ಸಿ.ವಿ. ಮಲ್ಲಿಕಾರ್ಜುನ, ಬಹುಮಾನ ವಿತರಣೆ : ಶಾಸಕ ಜಿ.ಟಿ. ದೇವೇಗೌಡ, ಶ್ರೀಮತಿ ಲಲಿತಾ ಜಿ.ಟಿ. ದೇವೇಗೌಡ, ಸ್ಥಳ: ಮಹಾರಾಜ ಕಾಲೇಜು ಕ್ರೀಡಾಂಗಣ.

■ **ಅಂತರಂಗ ಬಹಿರಂಗ ರಂಗ ತಂಡ :** ಅಂತರಂಗ ಬಹಿರಂಗ ಹವ್ಯಾಸಿ ರಂಗ ತಂಡದ ಕಲಾವಿದರಿಂದ 'ಹಿಂಗ್ ಮಾಡಿದ್ರೆ ಹೆಂಗೆ' ನಾಟಕ ಪ್ರದರ್ಶನ, ನಿರ್ದೇಶನ : ಬಾಶ್ ರಾಘವೇಂದ್ರ, ಸಂಗೀತ : ಮೇಘನಾ ಹಳಿಯಾಳ, ಸ್ಥಳ: ಕಿರು ರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

■ **ಕೋಟೆ ತ್ರಿನೇಶ್ವರ ದೇವಸ್ಥಾನ :** ಗಿರಿಜಾ ಕಲ್ಯಾಣ ಮಹೋತ್ಸವ, ಸಂಜೆ 7.30ಕ್ಕೆ ಹೊರೆಯಲ್ಲಿ ವರಪೂಜಾ ಮಹೋತ್ಸವ, ಸ್ಥಳ: ದೇವಸ್ಥಾನ, ಕೋಟೆ ಆವರಣ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 24 ಶನಿವಾರ 2023

ಸಂಪುಟ: 44 | ಸಂಚಿಕೆ: 69 | ಪುಟಗಳು: 12


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೊದಲ ಆಷಾಢ ಶುಕ್ರವಾರದ ಪೂಜಾ ಮಹೋತ್ಸವ; ಚಾಮುಂಡಿಬೆಟ್ಟದಲ್ಲಿ ಭಕ್ತಸಾಗರ

ನಾಗಲಕ್ಷ್ಮಿ ಅಲಂಕಾರದಲ್ಲಿ ಕಂಗೊಳಿಸಿದ ಚಾಮುಂಡೇಶ್ವರಿ







ಮೈಸೂರು, ಜೂ.23(ಬಿಎಲ್‌ಯು)–ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಮೊದಲ ಆಷಾಢ ಶುಕ್ರವಾರದ ಭಕ್ತಿ–ಸಂಭ್ರಮ ಮನೆ ಮಾಡಿತ್ತು. ಆಷಾಢ ಮಾಸದಲ್ಲಿ ಶಕ್ತಿ ದೇವತೆಯ ದರ್ಶನ ಪಡೆದರೆ ಇಷ್ಟಾರ್ಥ ಸಿದ್ಧಿಸಲಿದೆ ಎಂಬ ಅಪಾರ ನಂಬಿಕೆ ಯಿಂದ ಸಹಸ್ರಾರು ಭಕ್ತರು ನಾಡ ದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು, ಧನ್ಯತಾ ಭಾವ ಮೆರೆದರು.

ಆಷಾಢ ಮಾಸದ ಮೊದಲ ಶುಕ್ರವಾರ ಮುಂಜಾನೆ ಯಿಂದಲೇ ಭಕ್ತರು ಚಾಮುಂಡಿಬೆಟ್ಟಕ್ಕೆ ಬಸ್ ಇಲ್ಲವೇ ಮೆಟ್ಟಿಲು ಹತ್ತಿ ಧಾವಿಸಿ, ಪ್ರತಿ ವರ್ಷದಂತೆ ಈ ಬಾರಿಯೂ ಶಕ್ತಿ ದೇವತೆಯ ದರ್ಶನ ಪಡೆದರು. ಮುಂಜಾನೆ 3.30ಕ್ಕೆ ಅರ್ಚಕ ವೃಂದ ಚಾಮುಂಡೇಶ್ವರಿ ದೇವಿಗೆ ರುದ್ರಾಭಿಷೇಕ, ಪಂಚಾಮೃತಾಭಿಷೇಕ, ಕುಂಕುಮಾರ್ಚನೆ ನೆರವೇರಿಸಿದರು. ಸುಮಾರು ಎರಡು ಗಂಟೆಗಳ ಕಾಲ ಮಂತ್ರ ಘೋಷಗಳ ಪಠಣದೊಂದಿಗೆ ದೇವಿಗೆ ಧಾರ್ಮಿಕ ಹಾಗೂ ಸಾಂಪ್ರ ದಾಯಿಕ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾ ಯಿತು. ತರುವಾಯ ದೇವಿಗೆ ಆಭರಣ ಹಾಗೂ ನಾನಾ ಪುಷ್ಪದಿಂದ ಅತ್ಯಾಕರ್ಷಕವಾಗಿ ಅಲಂಕರಿಸಲಾಯಿತು. ವಿಶೇಷವಾಗಿ ಚಾಮುಂಡೇಶ್ವರಿಗೆ ನಾಗಲಕ್ಷ್ಮಿ ಅಲಂಕಾರ ಮಾಡಲಾಗಿತ್ತು. ಸಾಂಪ್ರದಾಯಿಕ ಪೂಜಾ ಕಾರ್ಯದ ತರುವಾಯ ಮುಂಜಾನೆ 5.30 ಗಂಟೆಗೆ ಭಕ್ತರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು. ಶಕ್ತಿದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನಕ್ಕೆ ಸರಿರಾತ್ರಿಯಿಂದಲೇ ಸಹಸ್ರಾರು ಭಕ್ತರು ಸರದಿ ಸಾಲಿನಲ್ಲಿ ನಿಂತಿದ್ದರು. ಈ ವೇಳೆ ಸರ್ವಾಲಂಕಾರದಿಂದ ಕಂಗೊಳಿಸುತ್ತಿದ್ದ ದೇವಿಯನ್ನು ಕಣ್ತುಂಬಿಕೊಂಡ ಭಕ್ತರು, ಪುನೀತರಾಗಿ, ಭಕ್ತಿ ಸಮರ್ಪಿಸಿದರು. ದೇವಾಲಯದ ಪ್ರಾಂಗಣವನ್ನು ವಿವಿಧ ಪುಷ್ಪ ಹಾಗೂ ಹಣ್ಣುಗಳಿಂದ ಅಲಂಕರಿಸಲಾಗಿತ್ತು. ಮುಸುಕಿನ ಜೋಳ, ಕಿತ್ತಳೆ, ಕಲ್ಪವೃಕ್ಷ ಹಾಗೂ ಕಬ್ಬಿನಿಂದ ಮಾಡಿದ್ದ ವಿಶೇಷ ಅಲಂಕಾರವನ್ನು ಭಕ್ತರು ಕಣ್ತುಂಬಿಕೊಂಡರು. ಮಹಿಷಾಸುರ ವೃತ್ತದಿಂದ ದೇವಾಲಯದ ತನಕ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ದೇವಿಯ ದರ್ಶನ ಪಡೆಯಲು ನೂಕು ನುಗ್ಗಲು ಉಂಟಾಗದಂತೆ ಮಹಿಷಾಸುರ ಪ್ರತಿಮೆಯಿಂದ ದೇವಸ್ಥಾನದವರೆಗೆ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಪೊಲೀಸರು ಅತ್ಯಂತ ವ್ಯವಸ್ಥಿತವಾಗಿ ವ್ಯವಸ್ಥೆ ಮಾಡಿದ್ದರು. ಇದರಿಂದ ಯಾರೂ ಕೂಡ ನಾ ಮುಂದು, ತಾ ಮುಂದು ಎಂದು ನೂಕಾಡುವ ಪ್ರಮೇಯವೇ ಬರಲಿಲ್ಲ. ಅಲ್ಲದೆ ಈ ಬಾರಿ ಪಾಸ್ ವ್ಯವಸ್ಥೆ ಇಲ್ಲದ ಕಾರಣ ಭಕ್ತರು ಧರ್ಮ ದರ್ಶನ ಹಾಗೂ ಟಿಕೆಟ್ ವ್ಯವಸ್ಥೆಯಲ್ಲಿ ದೇವಸ್ಥಾನ ಪ್ರವೇಶಿಸಿದರು. ಚಾಲೆಂಜಿಂಗ್ ಸ್ಟಾರ್ ದರ್ಶನ್

● 6ನೇ ಪುಟಕ್ಕೆ

ರುಚಿಕಟ್ಟಾದ ನಾನಾ ಪ್ರಸಾದ ಸವಿದ ಭಕ್ತಾದಿಗಳು...

ಮೈಸೂರು, ಜೂ.23(ಬಿಎಲ್‌ಯು)– ಮೊದಲ ಆಷಾಢ ಶುಕ್ರವಾರವಾದ ಚಾಮುಂಡಿಬೆಟ್ಟದಲ್ಲಿ ನಾಡ ದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದವರಿಗೆಲ್ಲಾ ರುಚಿಕಟ್ಟಾದ ಪ್ರಸಾದ ಸವಿಯುವ ವ್ಯವಸ್ಥೆ ಮಾಡಲಾಗಿತ್ತು.

ಮೈಸೂರಿನ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿಯವರು ಸುಮಾರು 25 ಸಾವಿರ ಜನರಿಗೆ ಊಟ, ಉಪಾಹಾರದ ವ್ಯವಸ್ಥೆ ಮಾಡಿದ್ದರು. ಬಿಸಿಲು ಇಲ್ಲವೇ ಮಳೆಯಿಂದ ಭಕ್ತರಿಗೆ ತೊಂದರೆ ಆಗದಂತೆ ಬೆಟ್ಟದ ವಾಹನ ನಿಲ್ದಾಣದಲ್ಲಿ ದಾಸೋಹದ ವ್ಯವಸ್ಥೆ ಮಾಡಿದ್ದರು. ಬೆಳಗ್ಗೆ 6 ಗಂಟೆಯಿಂದ 9 ಗಂಟೆ ತನಕ ಉಪ್ಪಿಟ್ಟು ಹಾಗೂ ಕೇಸರಿ ಬಾತ್, ತರುವಾಯ ಸಂಜೆ 6 ಗಂಟೆ ವರೆಗೆ ಬಾಳೆ ಎಲೆ ಊಟ ಬಡಿಸಲಾಯಿತು. ಬಿಸಿಬೇಳೆ ಬಾತ್, ಮ್ಯಾಂಗೊ ಬರ್ಫಿ, ಕೋಸಂಬರಿ, ಬಿನೀಸ್ ಪಲ್ಯ, ಕೋಸಿನ ಪಲ್ಯ, ಅನ್ನ ಸಾಂಬಾರ್, ಹಪ್ಪಳ, ಮೊಸರು ಹಾಗೂ ಉಪ್ಪಿನಕಾಯಿ ಊಟದ ಮೆನುವಿನಲ್ಲಿತ್ತು.

ಮತ್ತೆ ಸಂಜೆ 6 ಗಂಟೆ ನಂತರ ಟೊಮೆಟೊ ಬಾತ್, ವೆಜಿಟೇಬಲ್ ಬಾತ್, ಕ್ಯಾಪ್ಸಿಕಮ್ ಬಾತ್ ಬಡಿಸಲಾಯಿತು. ಗಂಟೆ ಗಟ್ಟಲೆ ಸರದಿ ಸಾಲಿನಲ್ಲಿ ನಿಂತ ಭಕ್ತರು ದೇವರ ದರ್ಶನ ಪಡೆದ ನಂತರ ದಾಸೋಹದಲ್ಲಿ ರುಚಿ ರುಚಿಯಾದ ಭೋಜನ ಸವಿದರು.

ನಂಜನಗೂಡು ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ

ವಿಜೃಂಭಣೆಯ ಗಿರಿಜಾ ಕಲ್ಯಾಣ ಮಹೋತ್ಸವ



ನಂಜನಗೂಡು, ಜೂ.23– ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ ಪಡೆದಿರುವ ನಂಜನಗೂಡಿನ ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ ನಂಜುಂಡೇಶ್ವರ ಮತ್ತು ಪಾರ್ವತಿದೇವಿಯವರ ಗಿರಿಜಾ ಕಲ್ಯಾಣ ಮಹೋತ್ಸವ ಶುಕ್ರವಾರ ರಾತ್ರಿ ವಿಜೃಂಭಣೆಯಿಂದ ಜರುಗಿತು. ಸಾಮಾನ್ಯವಾಗಿ ಆಷಾಢಕ್ಕೆ ಮೊದಲು ನಂಜುಂಡೇಶ್ವರನ ಭಕ್ತರ ಮನೆಗಳಲ್ಲಿ ಮದುವೆಯ ಕಾಲ ಮುಗಿದು ಆಷಾಢಮಾಸದ ವಿರಾಮ ಆರಂಭವಾದಾಗ ಈ ಭಾಗದ ಭಕ್ತರ ಆರಾಧ್ಯ ದೈವ ಶ್ರೀಕಂಠೇಶ್ವರನಿಗೆ ವಿವಾಹದ ಸಂಭ್ರಮ. ಪ್ರತಿವರ್ಷ ಆಷಾಢ ಮಾಸದಲ್ಲಿ ಪ್ರಾರಂಭವಾಗುವ ಗಿರಿಜಾ ಕಲ್ಯಾಣ ಒಂದು ವಾರಗಳ ಕಾಲ ನಡೆಯುತ್ತದೆ. ಸಂಪ್ರದಾಯವನ್ನು ಮರೆತಿರುವ

● 9ನೇ ಪುಟಕ್ಕೆ

ಭ್ರಷ್ಟಾಚಾರಕ್ಕೆ ಅಂತ್ಯ ಹಾಡ್ತೇವೆ...

- ಕಮಿಷನ್ ದಂಧೆಗೂ ಅಂತ್ಯ ಹಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪೂರ್ಣ ವಿಶ್ವಾಸ
- ಗುತ್ತಿಗೆದಾರರ ಸಂಘ, ಕೈಗಾರಿಕೋದ್ಯಮಿಗಳ ಜೊತೆ ಸಭೆ
- ಗೃಹಜ್ಯೋತಿಗೂ ಮುನ್ನ ವಿದ್ಯುತ್ ದರ ಏರಿಕೆ ಆಗಿತ್ತು
- ವಿದ್ಯುತ್ ದರ ಏರಿಕೆ ಸಂಬಂಧ ಪರಿಶೀಲಿಸಿ ಕ್ರಮ ಕೈಗೊಳ್ಳುವ ಭರವಸೆ



ಬೆಂಗಳೂರು,ಜೂ.23 (ಕೆಎಂಶಿ)– ಕಾಮಗಾರಿ ಗುತ್ತಿಗೆ ನೀಡುವ ಸಂದರ್ಭದಲ್ಲಿ ಕಮಿಷನ್ ದಂಧೆ ಸೇರಿದಂತೆ ನಮ್ಮ ಆಡಳಿತದಲ್ಲಿ ಭ್ರಷ್ಟಾಚಾರಕ್ಕೆ ಕೊನೆ ಹಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ 'ಗೃಹ ಜ್ಯೋತಿ' ಯೋಜನೆಗೂ ವಿದ್ಯುತ್ ದರ ಏರಿಕೆಗೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟ ಪಡಿಸಿದ್ದಾರೆ. ರಾಜ್ಯ ಗುತ್ತಿಗೆದಾರರ ಸಂಘ ಹಾಗೂ ಕೈಗಾರಿಕೋದ್ಯಮಗಳ ಜೊತೆ ಪ್ರತ್ಯೇಕ ಸಭೆ ನಡೆಸಿದ ಮುಖ್ಯಮಂತ್ರಿಯವರು ಈ ಭರವಸೆಗಳನ್ನು ನೀಡಿದ್ದಾರೆ. ಬಿಜೆಪಿ ಸರ್ಕಾರ ಆರ್ಥಿಕ ಅಶಿಸ್ತು ಮತ್ತು ಕಮಿಷನ್ ಹಾವಳಿಯಿಂದ ಗುತ್ತಿಗೆದಾರರಿಗೆ ಸಮಸ್ಯೆಯಾಗಿದೆ. ಬಿಜೆಪಿ ಆಡಳಿತದಲ್ಲಿ ಹಳಿ ತಪ್ಪಿರುವ ಆರ್ಥಿಕತೆಯನ್ನು ಸರಿದಾರಿಗೆ ತರಲು ಕಸರತ್ತು ನಡೆಸಿದ್ದೇನೆ. ಇದಕ್ಕೆ ನನಗೆ ಒಂದಷ್ಟು ಸಮಯ ಬೇಕಾಗಿದೆ. ರಾಜ್ಯದಲ್ಲಿ ಕಮಿಷನ್ ಹಾವಳಿಗೆ ಕಡಿವಾಣ ಹಾಕಿ ಸ್ಥಳೀಯ ಗುತ್ತಿಗೆದಾರರ ಹಿತಕ್ಕೆ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳುವುದಾಗಿಯೂ ಮುಖ್ಯಮಂತ್ರಿಯವರು ಭರವಸೆ ನೀಡಿದ್ದಾರೆ. ಬಜೆಟ್ ಅಧಿವೇಶನದ ನಂತರ ಆರ್ಥಿಕ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿ, ನಿಮ್ಮ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುತ್ತೇನೆ.

ಹಿಂದಿನ ಸರ್ಕಾರ ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆದಿರುವ ಕಾಮಗಾರಿಗಳಿಗೆ 2000 ಕೋಟಿ ರೂ. ನಗರೋತ್ಥಾನ ಯೋಜನೆಯಡಿ 1500 ಕೋಟಿ, ನೀರಾವರಿ ಇಲಾಖೆಯಲ್ಲಿ 9000 ಸಾವಿರ ಕೋಟಿ ರೂ. ಬಾಕಿ

● 9ನೇ ಪುಟಕ್ಕೆ

ಬಿಜೆಪಿ ಆಡಳಿತ ಅವಧಿಯಲ್ಲಿ ಆರ್ಥಿಕತೆ ಹಳಿ ತಪ್ಪಿದೆ; ಸರಿಪಡಿಸಲು ಸಮಯಾವಕಾಶ ಬೇಕು

ಬೆಂಗಳೂರು, ಜೂನ್ 23 (ಕೆಎಂಶಿ)– ಬಿಜೆಪಿ ಸರ್ಕಾರದ ಆರ್ಥಿಕ ಅಶಿಸ್ತು ಮತ್ತು ಕಮಿಷನ್ ಹಾವಳಿಯಿಂದ ಗುತ್ತಿಗೆದಾರರಿಗೆ ಸಮಸ್ಯೆ ಆಗಿದೆ. ಬಿಜೆಪಿ ಹಳಿ ತಪ್ಪಿಸಿರುವ ಆರ್ಥಿಕತೆಯನ್ನು ಸರಿಯಾಗಿಸಲು ಸ್ವಲ್ಪ ಸಮಯಾವಕಾಶ ಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಕರ್ನಾಟಕ ರಾಜ್ಯ ಗುತ್ತಿಗೆಗಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಅವರ ನೇತೃತ್ವದ ನಿಯೋಗವು ತಮ್ಮನ್ನು ಭೇಟಿ ಮಾಡಿ, ಬಾಕಿ ಇರುವ ಬಿಲ್ಲುಗಳ ಪಾವತಿಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ ಸಂದರ್ಭದಲ್ಲಿ ಅವರು, ರಾಜ್ಯದಲ್ಲಿ ಕಮಿಷನ್ ಹಾವಳಿಗೆ ಕಡಿವಾಣ ಹಾಕಿ, ಸ್ಥಳೀಯ ಗುತ್ತಿಗೆದಾರರ ಹಿತಕ್ಕೆ ಧಕ್ಕೆ ಆಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಬಜೆಟ್ ಮಂಡನೆಯಾಗಬೇಕಿದೆ. ಬಜೆಟ್ ಅಧಿವೇಶನದ ನಂತರ ಬಿಬಿಎಂಪಿ ಹಾಗೂ ಆರ್ಥಿಕ ಇಲಾಖೆ ಕಾರ್ಯದರ್ಶಿಗಳ ಸಭೆ ಕರೆದು ಪರಿಶೀಲಿಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಬಿಬಿಎಂಪಿಯಲ್ಲಿ 2000 ಕೋಟಿ ರೂ.ಗಳು ಹಾಗೂ ನಗರೋತ್ಥಾನ ಯೋಜನೆಯಡಿ 1500 ಕೋಟಿ ರೂ.ಗಳು ಬಾಕಿ ಇರುವುದಾಗಿ ತಿಳಿಸಿದ ಕೆಂಪಣ್ಣ ಅವರು ತಡೆಹಿಡಿದಿರುವ ಮೊತ್ತವನ್ನು ಪರಿಶೀಲಿಸಿ ಬಿಡುಗಡೆ ಮಾಡಬೇಕು ಹಾಗೂ ನಿರಾಕ್ಷೇಪಣಾ ಪತ್ರವನ್ನು ಬಿಡುಗಡೆ ಮಾಡಬೇಕೆಂದು ಕೆಂಪಣ್ಣ ಮನವಿ ಮಾಡಿದರು. ಪದಾಧಿಕಾರಿಗಳಾದ ಆರ್.ಅಂಬಿಕಾಪತಿ, ಜಿ.ಎಂ. ರವೀಂದ್ರ, ಸಂಕಾಗೌಡ ಶಾನಿ, ನಾಗರಾಜ್, ಆರ್.ಮಂಜುನಾಥ್, ರಮೇಶ್ ಮೊದಲಾದವರು ಉಪಸ್ಥಿತರಿದ್ದರು.

ಕೌಟುಂಬಿಕ ಆಸ್ತಿ ವಿವಾದ; ಪುತ್ರಿಯೊಂದಿಗೆ ದಂಪತಿ ಆತ್ಮಹತ್ಯೆ

ಚಾಮರಾಜನಗರದ ಬೇಡರಪುರದಲ್ಲಿ ಮನ ಕಲಕುವ ಘಟನೆ

ಚಾಮರಾಜನಗರ, ಜೂ.23–ಪಿತ್ರಾರ್ಜಿತ ಆಸ್ತಿ ಹಂಚಿಕೆ ವಿವಾದದಿಂದಾಗಿ ಒಂದೇ ಕುಟುಂಬದ ಮೂವರು ಡೆತ್ ನೋಟ್ ಬರೆದಿಟ್ಟು ಸಾಮೂಹಿಕವಾಗಿ ನೇಣಿಗೆ ಶರಣಾದ ದಾರುಣ ಘಟನೆ ಚಾಮರಾಜನಗರ ತಾಲೂಕು ಬೇಡರಪುರ ಗ್ರಾಮದಿಂದ ವರದಿಯಾಗಿದೆ.

ಗ್ರಾಮದ ರೈತ ಮಹದೇವಸ್ವಾಮಿ (45), ಅವರ ಪತ್ನಿ ಸವಿತಾ(36) ಮತ್ತು ಪುತ್ರಿ ಸಿಂಚನಾ(14) ಆತ್ಮಹತ್ಯೆಗೆ ಶರಣಾದವರಾಗಿದ್ದು, 'ನಮ್ಮ ಸಾವಿಗೆ ತಾಯಿ ದೇವೀರಮ್ಮ, ಅಕ್ಕಂದಿರಾದ ಮಂಜುಳಾ, ಮಹದೇವಮ್ಮ, ಮಾವಂದಿರಾದ ಮಲ್ಲೇಶ್ ಮತ್ತು ಮಹದೇವಪುರ ಮೇಲಾಜಿಪುರ ಅವರುಗಳು ಕಾರಣರಾಗಿದ್ದು, ಅವರಿಗೆ ಶಿಕ್ಷೆಯಾಗಬೇಕು. ನಮ್ಮ ಆಸ್ತಿಯನ್ನು ಇವರಿಗೆ ಯಾವುದೇ ಕಾರಣಕ್ಕೂ ಕೊಡಬೇಡಿ' ಎಂದು ಡೆತ್ ನೋಟ್‌ನಲ್ಲಿ ಬರೆದಿದ್ದು, ಅದಕ್ಕೆ ಮೂವರೂ ಸಹಿ ಮಾಡಿದ್ದಾರೆ. ಅಲ್ಲದೇ ಸವಿತಾ ಅವರ ಮುಂಗೈನಲ್ಲಿ ಕೂಡ ನಮ್ಮ ಸಾವಿಗೆ ಇವರೇ ಕಾರಣ ಎಂದು ಮೇಲಿನ ಐವರ ಹೆಸರನ್ನು ಬರೆಯಲಾಗಿದೆ.



ಮಹದೇವಸ್ವಾಮಿ



ಸವಿತಾ

> **ಬೇಡರಪುರ ಗ್ರಾಮದಲ್ಲಿ ಒಂದೇ ಕುಟುಂಬದ ಮೂವರ ಶವಗಳು ಮನೆಯಲ್ಲಿ ಪತ್ತೆಯಾಗಿವೆ. ಡೆತ್ ನೋಟ್ ಸಿಕ್ಕಿದ್ದು, ಅದರಲ್ಲಿರುವ ಬರವಣಿಗೆ ಬಗ್ಗೆ ತನಿಖೆ ನಡೆಯುತ್ತಿದೆ. ಡೆತ್‌ನೋಟ್‌ನಲ್ಲಿ ಕುಟುಂಬ ಸದಸ್ಯರ ಹೆಸರುಗಳಿದ್ದು, ಈವರೆಗೂ ಯಾರನ್ನೂ ಬಂಧಿಸಿಲ್ಲ. ತನಿಖೆ ಪ್ರಗತಿಯಲ್ಲಿದೆ.**
>
> **–ಪದ್ಮಿನಿ ಸಾಹು, ಚಾಮರಾಜನಗರ ಜಿಲ್ಲಾ ಎಸ್ಪಿ**

ಶುಕ್ರವಾರ ಬೆಳಗ್ಗೆ 9 ಗಂಟೆ ಸುಮಾರಿನಲ್ಲಿ ಮಹದೇವಸ್ವಾಮಿ ಅವರನ್ನು ಭೇಟಿ ಮಾಡಲು ಗ್ರಾಮಸ್ಥರೊಬ್ಬರು ಅವರ ಮನೆಗೆ ತೆರಳಿದಾಗ ಸಾಮೂಹಿಕ ಆತ್ಮಹತ್ಯೆ ಪ್ರಕರಣ ಬೆಳಕಿಗೆ ಬಂದಿದೆ. ಮಹದೇವಸ್ವಾಮಿ ಮತ್ತು ಅವರ ಪುತ್ರಿ ಸಿಂಚನಾ ಮೃತದೇಹಗಳು ನೇಣು ಹಾಕಿದ ಸ್ಥಿತಿಯಲ್ಲಿದ್ದರೆ, ಸವಿತಾ ಮೃತದೇಹ ನೆಲದ ಮೇಲೆ ಬಿದ್ದಿತ್ತು. ಅವರ ಕತ್ತಿನಲ್ಲಿ ನೇಣು ಹಾಕಿಕೊಂಡು ಮೃತಪಟ್ಟ ಕುರುಹುಗಳು ಕಂಡು ಬಂದಿವೆ. ಸವಿತಾ ನೇಣಿಗೆ ಶರಣಾದ ನಂತರ ದೇಹವನ್ನು ಇಳಿಸಿ, ಮಹದೇವಸ್ವಾಮಿ ಮತ್ತು ಸಿಂಚನಾ ನೇಣು ಬಿಗಿದುಕೊಂಡಿರಬಹುದು ಎಂದು ಪೊಲೀಸರು ಅಭಿಪ್ರಾಯಪಟ್ಟಿದ್ದಾರೆ.



ವಿವರ: ರೈತ ಮಹದೇವಸ್ವಾಮಿ 5 ಎಕರೆ ತೋಟ, 2 ಎಕರೆ ಹೊಲ ಮತ್ತು ಮನೆಯನ್ನು ಪಿತ್ರಾರ್ಜಿತ ಆಸ್ತಿಯಾಗಿ ಹೊಂದಿದ್ದಾರೆ. ಇವರ ತಾಯಿ ದೇವೀರಮ್ಮ ಅವರು ಯಾವುದೋ ಕಾರಣಕ್ಕಾಗಿ ಇವರೊಂದಿಗೆ ವಾಸವಿಲ್ಲದೆ

● 9ನೇ ಪುಟಕ್ಕೆ

ಒಂದೆರಡು ತಿಂಗಳು ತಡವಾದರೂ 'ಅನ್ನಭಾಗ್ಯ' ಜಾರಿ ಮಾಡ್ತೇವೆ

- ಮೈಸೂರಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಪ್ರತಿಕ್ರಿಯೆ
- ತಡವಾದರೂ ನಮ್ಮ ಐದು ಗ್ಯಾರಂಟಿ ಯೋಜನೆಗಳು ಜಾರಿಯಾಗುವುದು ಖಚಿತ
- ಮೈಸೂರು–ಬೆಂಗಳೂರು ಹೆದ್ದಾರಿ ದೋಷ ನಿವಾರಣೆಗೆ ವೈಜ್ಞಾನಿಕ ಸುಧಾರಣೆ

ಮೈಸೂರು, ಜೂ. 23(ಆರ್‌ಕೆ)– ತಡವಾಗಿಯಾದರೂ 10 ಕೆಜಿ ಅಕ್ಕಿ ನೀಡುವ 'ಅನ್ನಭಾಗ್ಯ' ಯೋಜನೆಯನ್ನು ಜಾರಿ ಮಾಡುತ್ತೇವೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಏರ್ಪಡಿಸಿದ್ದ ಡಾ. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಂದೆರಡು ತಿಂಗಳು ವಿಳಂಬವಾಗಬಹುದು. ಅದರಿಂದ ಅಂತಹದ್ದೇನೂ ತೊಂದರೆ ಆಗುವುದಿಲ್ಲ. ಫಲಾನುಭವಿಗಳಿಗೆ ಉಚಿತ ಅಕ್ಕಿ ನೀಡುವ ಯೋಜನೆಗೆ ಹೆಚ್ಚುವರಿ ಅಕ್ಕಿಗಾಗಿ ಕೇಂದ್ರ ಸರ್ಕಾರಕ್ಕೆ ಬೇಡಿಕೆ ಇಟ್ಟಿದ್ದೇವೆ. ಆದರೆ ಕೇಂದ್ರ ನಿರಾಕರಿಸಿರುವುದರಿಂದ ಅನ್ನಭಾಗ್ಯ ಯೋಜನೆ ಜಾರಿ ವಿಳಂಬವಾಗಿದೆ ಎಂದರು. ಆದರೆ ಭರವಸೆ ನೀಡಿದಂತೆ ಬಡವರಿಗೆ ಅಕ್ಕಿ ನೀಡಲು ನಮಗೆ ಪರ್ಯಾಯ ಮಾರ್ಗಗಳಿವೆ. ಈ ಕೊರತೆ ನೀಗಿಸಲು ಬೇರೆ ಬೇರೆ ಫುಡ್‌ಗ್ರೈನ್‌ಗಳನ್ನೂ ಕೊಡಬಹುದು. ಈಗಾಗಲೇ ನಾವು 5 ಕೆಜಿ ಅಕ್ಕಿ ಕೊಡುತ್ತಿದ್ದೇವೆ. ಹೆಚ್ಚುವರಿ ಅಕ್ಕಿ ಕೊಡುವುದು ನಿಧಾನವಾದರೂ ಏನೂ ತೊಂದರೆ ಇಲ್ಲ. ನಮ್ಮ ಎಲ್ಲಾ ಐದೂ ಗ್ಯಾರಂಟಿ ಯೋಜನೆಗಳನ್ನು ಹಂತ ಹಂತವಾಗಿ ಜಾರಿಗೊಳಿಸುತ್ತೇವೆ ಎಂದು ತಿಳಿಸಿದರು. ಉಚಿತ ವಿದ್ಯುತ್ ನೀಡುವ 'ಗೃಹ ಜ್ಯೋತಿ', ಮಹಿಳೆಯರಿಗೆ ಉಚಿತ ಪ್ರಯಾಣದ 'ಶಕ್ತಿ' ಯೋಜನೆಗಳು ಈಗಾಗಲೇ ಜಾರಿಯಾಗಿವೆ. ಮಹಿಳೆಯರಿಗೆ ಮಾಸಿಕ 2000 ರೂ. ನೀಡುವ 'ಗೃಹಲಕ್ಷ್ಮಿ'ಗೆ ಇಷ್ಟರಲ್ಲೇ ಚಾಲನೆ ನೀಡುತ್ತೇವೆ. ಉಳಿದ ಯೋಜನೆ ಜಾರಿ ಮಾಡುವ ಬಗ್ಗೆ ಆತಂಕ ಬೇಡ



● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ಈ ಗಂಡು ಮಕ್ಕಳು ಕೆಪಾಸಿಟಿ ಇಲ್ಲಾಂದ್ರು ಯಾಕೆ ಕುಡಿತಾರೋ?

ಗಂಡ : ಹೆಣ್ಣು ಮಕ್ಕಳು ಚೆನ್ನಾಗಿ ಕಾಣ್ಸಲ್ಲ ಅಂದ್ರು, ಯಾಕೆ ಮೇಕಪ್ ಮಾಡ್ಕೊತಾರೋ?

ಮೈಸೂರು ಮಿತ್ರ

ಶನಿವಾರ, 24 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಜೀವನದಲ್ಲಿ ಎಲ್ಲಾ ಲಾಭಗಳನ್ನು ಒಮ್ಮೆಲೇ ಪಡೆಯಲು ಪ್ರಯತ್ನಿಸುವವನಿಗೆ ಏನೂ ದೊರೆಯದು –ಬೂಮ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆನೆ ಭಾರ ಆನೆಗೆ / ಸೊಳ್ಳೆ ಭಾರ ಸೊಳ್ಳೆಗೆ

ನಿಮ್ಮ ಪತ್ರಗಳು

ಹೊಸ ಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತಿರುವ ಉಚಿತ ಯೋಜನೆಗಳು

ಮಾನ್ಯರೆ,

ರಾಜ್ಯದಲ್ಲಿ ಮಹಿಳೆಯರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ಉಚಿತ ಪ್ರಯಾಣ ಪ್ರಾರಂಭವಾದ ಮೇಲೆ ಸಾಕಷ್ಟು ಸಮಸ್ಯೆಗಳು ತಲೆದೋರುತ್ತಿವೆ. ಬಸ್ಸುಗಳನ್ನು ಹತ್ತಲು ನಾ ಮುಂದು ತಾ ಮುಂದೆ ಎಂಬ ಸ್ಪರ್ಧೆ ಪ್ರಾರಂಭವಾಗಿ ಪುರುಷ ಪ್ರಯಾಣಿಕರಿಗೆ ಆಸನಗಳೇ ಸಿಗುತ್ತಿಲ್ಲ. ಕೆಲವು ಸ್ಥಳಗಳಲ್ಲಿ ಯಾವ ತರಹ ಜನ ಜಂಗುಳಿ ಇದೇ ಎಂದರೆ, ಮಹಿಳಾ ಪ್ರಯಾಣಿಕರು, ಬಸ್ಸುಗಳ ಬಾಗಿಲುಗಳನ್ನೇ ಕಿತ್ತು ಹಾಳು ಮಾಡಿದ್ದಾರೆ. ಸೀಟು ಹಿಡಿಯುವ ದಾವಂತದಿಂದ ಸಣ್ಣ ಪುಟ್ಟ ಮಕ್ಕಳನ್ನು ಕಿಟಕಿಗಳ ಮೂಲಕ ಬಸ್ಸುಗಳ ಒಳಗೆ ನುಗ್ಗಿಸುತ್ತಿದ್ದಾರೆ. ಈ ರಂಪಾಟದಿಂದ ಶಾಲಾ ಮಕ್ಕಳಿಗೆ ಬಸ್ಸು ಹತ್ತಲು ಬಹಳ ಕಷ್ಟವಾಗುತ್ತಿದೆ.

ಪ್ರಸಿದ್ದ ಯಾತ್ರಾ ಕ್ಷೇತ್ರಗಳಿಗೆ ಮಹಿಳೆಯರು ದೌಡಾಯಿಸುತ್ತಿರುವುದರಿಂದ, ಪುರುಷರು ಬಸ್ಸುಗಳಲ್ಲಿ ಸೀಟು ಸಿಗದೇ ಕಸಿವಿಸಿ ಅನುಭವಿಸಬೇಕಾಗಿದೆ. ಇನ್ನು ಇಂತಹ ಬಸ್ಸುಗಳ ಚಾಲಕ ಹಾಗೂ ನಿರ್ವಾಹಕರ ಕಥೆಯಂತೂ ದೇವರಿಗೆ ಪ್ರೀತಿ. ಇದುವರೆಗೂ ಸಂಸಾರವನ್ನು ಹೇಗೋ ತೂಗಿಸಿಕೊಂಡು ಹೋಗುತ್ತಿದ್ದ ಗಂಡಸರು, ತಮ್ಮ ಪತ್ನಿಯರ ಬಸ್ ಓಡಾಟದಿಂದ ಕಂಗೆಟ್ಟು, ಮನೆಯಲ್ಲಿ ತಾವೇ ಅಡುಗೆ ಮಾಡಬೇಕಾದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಪ್ರಯಾಣಿಕರಿಲ್ಲದೇ ಆಟೋಗಳು, ಟ್ಯಾಕ್ಸಿಗಳು ಹಾಗೂ ಇತರ ಖಾಸಗಿ ವಾಹನಗಳು ಭಣಭಣಗುಟ್ಟುತ್ತಿವೆ. ಏನೋ ಮಹಿಳೆಯರಿಗೆ ಒಳ್ಳೆಯದು ಮಾಡೋಣ ಎಂದು ಹೊರಟ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಇದರ ಬಿಸಿ ಅನುಭವಿಸಬೇಕಾಗಿದೆ.

ಇದರ ಬಗ್ಗೆ ಖಾರವಾಗಿ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಇದೇ ರೀತಿ ಮುಂದುವರೆದರೆ, ಈ ಯೋಜನೆಯನ್ನೇ ರದ್ದು ಪಡಿಸುವ ಎಚ್ಚರಿಕೆ ನೀಡಿದ್ದಾರೆ. ಇನ್ನು ಅತ್ತ ಗೃಹ ಜ್ಯೋತಿ ಯೋಜನೆಗೂ ಕೂಡ ಬಾಲ ಗ್ರಹ ಬಡಿದಿದ್ದು, ಸಂಬಂಧಪಟ್ಟ ಸೇವಾ ಸಿಂಧು ತತ್ರಾಂಶ ತೆರೆಯದೇ, ಗ್ರಾಹಕರು ಸಾಕಷ್ಟು ಕಿರಿಕಿರಿ ಅನುಭವಿಸಬೇಕಾಗಿದೆ. ಇನ್ನು ಅನ್ನಭಾಗ್ಯ ಯೋಜನೆಯಡಿ, ಕುಟುಂಬದ ಪ್ರತಿ ಸದಸ್ಯನಿಗೆ ಮಾಸಿಕ ಹತ್ತು ಕೆಜಿ ಅಕ್ಕಿ ನೀಡಲು ಮುಂದಾಗಿದ್ದ ರಾಜ್ಯ ಸರ್ಕಾರಕ್ಕೆ ಅಕ್ಕಿ ನೀಡಲಾಗುವುದಿಲ್ಲ ಎಂಬ ಕೇಂದ್ರ ಸರ್ಕಾರದ ಹೇಳಿಕೆ ಶಾಕ್ ನೀಡಿದೆ. ತೆಲಂಗಾಣ ರಾಜ್ಯ ಸಹಾ ರಾಜ್ಯದ ಅಕ್ಕಿ ಬೇಡಿಕೆಯನ್ನು ಪೂರೈಸಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ರಾಜ್ಯ ಸರ್ಕಾರವನ್ನು ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿಸಿದೆ. ಒಟ್ಟಿನಲ್ಲಿ ಉಚಿತ ಯೋಜನೆಗಳು ರಾಜ್ಯದಲ್ಲಿ ಹೊಸ ಹೊಸ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿರುವುದು ಬೇಸರದ ಸಂಗತಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಹಿರಿಯರೊಂದಿಗೆ ಮತ್ತೊಬ್ಬರಿಗೂ ದೇವಸ್ಥಾನಕ್ಕೆ ಪ್ರವೇಶ ಅವಕಾಶ ಕಲ್ಪಿಸಿ

ಮಾನ್ಯರೆ,

ರಾಜ್ಯದ ಮುಜರಾಯಿ ಇಲಾಖೆಗೆ ಒಳಪಡುವ ಚಾಮುಂಡಿ ಬೆಟ್ಟ, ಮಲೆ ಮಹದೇಶ್ವರ ಬೆಟ್ಟ, ನಂಜನಗೂಡು, ಸಿಗಂದೂರು, ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ಸೇರಿದಂತೆ ಅನೇಕ ದೇವಾಲಯಗಳಲ್ಲಿ 65 ವರ್ಷ ದಾಟಿದ ಹಿರಿಯ ನಾಗರಿಕರಿಗೆ ನೇರ ದರ್ಶನ ಸೌಲಭ್ಯ ಕಲ್ಪಿಸುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆದರೆ ಸಮಸ್ಯೆ ಇರುವುದು, 65 ವರ್ಷ ದಾಟಿದ ಯಾವುದೇ ಹಿರಿಯ ನಾಗರಿಕರೂ ಸಹ ದೇವಾಲಯಕ್ಕೆ ಹೋಗುವುದಿಲ್ಲ. ಸಾಮಾನ್ಯವಾಗಿ ಕುಟುಂಬ ಸಮೇತ ಹೋಗುತ್ತಾರೆ. 65 ವರ್ಷದ ನಾಗರಿಕರಿಗೆ 55 ರಿಂದ 60 ವರ್ಷದ ಪತ್ನಿ ಇದ್ದರೆ, ಪತ್ನಿ ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಮಾಡಬೇಕಾಗುತ್ತದೆ. ಇದರಿಂದ ಹಿರಿಯ ನಾಗರಿಕರಿಗೆ ಒಂದು ರೀತಿ ಮುಜುಗರ ಮತ್ತು ಹೆಂಡತಿ ದೇವರ ದರ್ಶನ ಮಾಡಿ ಬರುವ ತನಕ ಕಾಯುವ ತಾಳ್ಮೆಯು ಇರುವುದಿಲ್ಲ. ಇದೊಂದು ರೀತಿಯಲ್ಲಿ ಮಾನಸಿಕ ಹಿಂಸೆಯನ್ನು ಕೊಟ್ಟಂತೆ. ಇದಕ್ಕೆ ಪರಿಹಾರವೆಂದರೆ, 65 ವರ್ಷ ದಾಟಿದ ಹಿರಿಯ ನಾಗರಿಕರಿಗೆ ಅವರ ಜೊತೆಯಲ್ಲಿ ಬರುವ ಒಬ್ಬರಿಗೆ ನೇರ ದರ್ಶನ ಕಲ್ಪಿಸುವಂತೆ ಸರ್ಕಾರ ಆದೇಶವನ್ನು ಮಾಡಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಸಮರ್ಪಕ ಬಸ್ ಇಲ್ಲದೆ ವಿದ್ಯಾರ್ಥಿಗಳ ಪರದಾಟ




ಮಾನ್ಯರೆ,

ಉಚಿತ ಬಸ್ ಪ್ರಯಾಣ ಘೋಷಣೆಗೂ ಮುನ್ನ ಬಸ್ ನಿಲ್ದಾಣಗಳು ಖಾಲಿ ಖಾಲಿಯಾಗಿದ್ದವು. ಘೋಷಣೆಯಾದ ನಂತರ ಎಲ್ಲಾ ಬಸ್ ನಿಲ್ದಾಣಗಳಲ್ಲೂ ಮಹಿಳಾ ಪ್ರಯಾಣಿಕರ ದಂಡೇ ಕಾಣುತ್ತಿದೆ. ಪ್ರತಿದಿನ ಬೆಟ್ಟದಪುರ ಬಸ್ ನಿಲ್ದಾಣಕ್ಕೆ 70 ಗಾಡಿಗಳು ಬರುತ್ತಿತ್ತು. ಈಗ 35 ರಿಂದ 40 ಗಾಡಿಗಳು ಮಾತ್ರ ನಿಲ್ದಾಣಕ್ಕೆ ಬರುತ್ತಿವೆ.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಮಹಿಳೆಯರು ಅಪಾರ ಸಂಖ್ಯೆಯಲ್ಲಿ ಬಸ್‌ಗಾಗಿ ಕಾಯುವಂತಾಗಿದೆ. ಈ ಹಿಂದೆ ಬಸ್ ನಿಲ್ದಾಣಗಳಲ್ಲಿ ಜನ ಇಲ್ಲದೆ ಬಿಕೋ ಎನ್ನುತ್ತಿತ್ತು. ಹಿಂದೆ ಕೇವಲ ಕಾಲೇಜು ವಿದ್ಯಾರ್ಥಿನಿಯರು ಹಾಗೂ ಪುರುಷರು ಬೆರಳೆಣಿಕೆಯಷ್ಟು ಮಹಿಳೆಯರು ಕಾಣುತ್ತಿದ್ದರು. ಆದರೆ ಸರ್ಕಾರ ಮಹಿಳೆಯರಿಗೆ ಉಚಿತ ಪ್ರಯಾಣ ಘೋಷಣೆ ಮಾಡಿದ ನಂತರ ಭಾರಿ ಪ್ರಮಾಣದಲ್ಲಿ ಮಹಿಳೆಯರು ಪ್ರಯಾಣಿಸುತ್ತಿದ್ದಾರೆ. ಬಸ್‌ಗಳನ್ನು ಹೆಚ್ಚುವರಿಯಾಗಿ ಬಿಡಬೇಕಾದ ಸಾರಿಗೆ ಇಲಾಖೆ ಕೆಲವು ಬಸ್‌ಗಳನ್ನು ರದ್ದುಗೊಳಿಸಿ ಹೆಚ್ಚು ಕಲೆಕ್ಷನ್ ಬರುವ ಬಸ್‌ಗಳನ್ನು ಮಾತ್ರ ಓಡಿಸುತ್ತಿದ್ದಾರೆ. ಅದರಲ್ಲೂ ಗ್ರಾಮಾಂತರ ಪ್ರದೇಶದ ಬಸ್‌ಗಳು ಭಾರಿ ಪ್ರಮಾಣದಲ್ಲಿ ಕಡಿಮೆಯಾಗಿದ್ದು, ದುಡಿಯುವ ವರ್ಗದ ಜನರ ಪ್ರಯಾಣಕ್ಕೆ ಭಾರಿ ತೊಂದರೆಯಾಗಿದೆ. ಈ ಹಿಂದೆ ನಮಗೆ ಭಾರಿ ಪ್ರಮಾಣದಲ್ಲಿ ಬಸ್‌ಗಳು ಬರುತ್ತಿದ್ದು, ಕಾಲೇಜಿಗೆ ಬರಲು ಅನುಕೂಲವಾಗುತ್ತಿತ್ತು. ಆದರೆ ಇದೀಗ ಬಸ್‌ಗಳು ರದ್ದಾಗಿರುವುದರಿಂದ ನಾವು ಸರಿಯಾದ ಸಮಯಕ್ಕೆ ಕಾಲೇಜಿಗೆ ಮತ್ತು ಮನೆಗೆ ಹೋಗಲು ಆಗುತ್ತಿಲ್ಲ. ತಕ್ಷಣವೇ ಸರ್ಕಾರ ಹೆಚ್ಚುವರಿ ಬಸ್‌ಗಳನ್ನು ಬಿಟ್ಟು ದುಡಿಯುವ ವರ್ಗ ಹಾಗೂ ವಿದ್ಯಾರ್ಥಿಗಳ ಓದಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವಂತೆ ಮನವಿ ಮಾಡುತ್ತೇವೆ.

–ನೊಂದ ವಿದ್ಯಾರ್ಥಿಗಳು, ಬೆಟ್ಟದಪುರ, ಪಿರಿಯಾಪಟ್ಟಣ ತಾ.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು ಹರುಷಕ್ಕಿದೆ ದಾರಿ...



> ಜೀವನದ ಅತೀ ಮಧುರ ಕ್ಷಣಗಳನ್ನು ಕಳೆದುಕೊಳ್ಳುತ್ತೇವೆ. ಕೆಲಸವಿಲ್ಲದಾಗ ಹಣವಿಲ್ಲ ಎಂಬ ಕೊರತೆ, ಹಣ ಸಿಕ್ಕಿದಾಗ ಬಳಸದೇ ಉಳಿಸುವ ಹಂಬಲ. ಇಂತಹ ಮನೋಭಾವದಿಂದ ಆಯಾ ವಯೋಮಾನದಲ್ಲಿ ಅನುಭವಿಸಬೇಕಾದ ಅನೇಕ ಸುಖಗಳನ್ನು, ಮಧುರ ಕ್ಷಣಗಳನ್ನು ಕಳೆದುಕೊಂಡುಬಿಡುತ್ತೇವೆ.

ನಮ್ಮಲ್ಲಿ ಎಷ್ಟು ಜನರು ತಾವು ಸಂತೃಪ್ತರಾಗಿದ್ದೇವೆ ಎಂದು ಹೇಳಲು ಸಾಧ್ಯ. ನಮಗೆ ಆರೋಗ್ಯದ ಸಮಸ್ಯೆ ಇಲ್ಲ ಎಂದು ಎಷ್ಟು ಜನರು ಹೇಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಒತ್ತಡದಲ್ಲಿಯೇ ಜೀವನ ಮಾಡುವ ನಾವು, ಸಂತೃಪ್ತರಾಗಿದ್ದೇವೆ ಎಂದು ಹೇಳಿಕೊಳ್ಳಲು ಸಾಧ್ಯವೇ ಇಲ್ಲ ಎಂಬ ಸ್ಥಿತಿಗೆ ತಲುಪಿದ್ದೇವೆ. ಎಲ್ಲವೂ ಇದ್ದರೂ, ಏನೋ ಕೊರತೆ ಇದೆ ಎಂಬಂತಹ ಮನೋಭಾವ ಬೆಳೆಸಿಕೊಂಡಿದ್ದೇವೆ. ಕೈತುಂಬಾ ವೇತನ ಬಂದರೂ ಮತ್ತಷ್ಟು ಬೇಕಾಗಿತ್ತು, ನನ್ನ ಸ್ನೇಹಿತ ನನಗಿಂತ ಹೆಚ್ಚು ವೇತನ ಪಡೆಯುತ್ತಾನೆ ಎಂದೇ ಹಲಬುತ್ತೇವೆ. ಅನೇಕರು ಹಣವನ್ನು ಹೇಗೆ ಖರ್ಚು ಮಾಡಬೇಕೆಂಬ ಅರಿವಿಲ್ಲದೆ ಖರ್ಚು ಮಾಡುತ್ತಾರೆ. ಆದರೂ ವೇತನ ಇನ್ನೂ ಹೆಚ್ಚಾಗಿದ್ದರೆ ಚೆನ್ನಾಗಿತ್ತು ಎಂದೇ ಬಯಸುತ್ತಾರೆ.

ನನ್ನ ಪರಿಚಿತರೊಬ್ಬರಿಗೆ ಹತ್ತಾರು ಎಕರೆ ತೋಟವಿದೆ. ಅದು ಮೈಸೂರಿನಿಂದ ನಲವತ್ತು ಕಿಲೋಮೀಟರ್ ದೂರದಲ್ಲಿದೆ. ಬೇಕಾದಷ್ಟು ತೆಂಗಿನ ಮರಗಳಿವೆ. ಎಲ್ಲವೂ ಫಲ ನೀಡುತ್ತವೆ. ವರ್ಷಕ್ಕೆ ಎರಡೆರಡು ಬಾರಿ ಕಾಯಿ ಕಿತ್ತು ಮಾರಿ ಸಾಕಷ್ಟು ಹಣ ಗಳಿಸುತ್ತಾರೆ. ಆದರೆ ಅವರು ತೋಟಕ್ಕೆ ಭೇಟಿ ನೀಡುವುದು ತಿಂಗಳಲ್ಲಿ ಒಂದೆರಡು ದಿನ ಮಾತ್ರ. ತೋಟದಲ್ಲಿ ಒಂದಿಬ್ಬರು ಕೆಲಸಗಾರರಿದ್ದಾರೆ. ಅವರ ಕೊರಗು ಎಂದರೆ, ಮರದಿಂದ ಕಾಯಿ ಉದುರುತ್ತಲೇ ಇರುತ್ತವೆ. ಆದರೆ, ಅದರ ಲೆಕ್ಕವೇ ಸಿಗದೆ ನನಗೆ ನಷ್ಟವಾಗುತ್ತಿದೆ ಎಂದು. ವರ್ಷದಲ್ಲಿ ಸಾಕಷ್ಟು ತೆಂಗಿನಕಾಯಿ ಮಾರಿ ಹಣ ಗಳಿಸುವ ಅವರು ಕೆಲವು ತೆಂಗಿನ ಕಾಯಿಯ ಬಗ್ಗೆ ಚಿಂತಿಸುತ್ತಾರೆ. ನೀವೇ ಹೋಗಿ ಅಲ್ಲಿರಬಹುದಲ್ಲವೇ. ಆಗ ಈ ಚಿಂತೆಯೇ ಇರುವುದಿಲ್ಲವಲ್ಲಾ ಎಂದರೆ ಅದಕ್ಕೆ ಅವರು ಸಿದ್ಧರಿಲ್ಲ. ಹಾಗಿದ್ದ ಮೇಲೆ ಬರುತ್ತಿರುವ ಆದಾಯದಲ್ಲಿ ಸಂತೋಷವಾಗಿರಬಹುದಲ್ಲಾ ಎಂದರೆ ಆದರೂ.... ಎಂದೇ ಕೊರಗುತ್ತಾರೆ. ಇದು ನಮ್ಮ ಜಾಯಮಾನ. ಈ ಹಿಂದೆ ರೋಟಿ–ಕಪಡಾ–ಮಕಾನ್ (ಊಟ, ಬಟ್ಟೆ ಹಾಗೂ ಮನೆ) ಇದ್ದರೆ ಜೀವನ ನೆಮ್ಮದಿಯಾಗಿರುತ್ತದೆ ಎಂದು ಭಾವಿಸಲಾಗುತ್ತಿತ್ತು. ಆದರೆ ಈಗ ಇವೆಲ್ಲದರ ಜೊತೆಗೆ ಇತರೆ ಸೌಕರ್ಯವಿದ್ದರೂ ನಮಗೆ ಸಮಾಧಾನವಿಲ್ಲ. ಮತ್ತೇನೋ ಬೇಕಾಗಿತ್ತು ಎಂದೇ ಮನಸ್ಸು ಬಯಸಿ, ನೆಮ್ಮದಿ ಕಾಣದಂತಾಗಿರುತ್ತದೆ.

ಹಾಗಾದರೆ ಯಾವುದು ನೆಮ್ಮದಿ, ಯಾವುದು ಸಂತೋಷ, ಯಾವುದರಿಂದ ಸಂತೋಷ, ಎಂಬ ಬಗ್ಗೆ ಪ್ರಶ್ನೆ ಹಾಕಿಕೊಳ್ಳಬೇಕು. ಇತ್ತೀಚೆಗೆ ವಿಶ್ವಮಟ್ಟದಲ್ಲಿ ನಡೆದ ಒಂದು ಸಮೀಕ್ಷಾ ವರದಿಯನ್ನು ನೋಡಿದಾಗ ಹಲವಾರು ಕುತೂಹಲದ ವಿಷಯಗಳು ಕಂಡುಬಂದವು. ಅದರಲ್ಲಿ ಹೇಳಿರುವಂತೆ ಪ್ರಪಂಚದ ಜನಸಂಖ್ಯೆಯ ಸುಮಾರು 7.8 ಬಿಲಿಯನ್‌ಗಳು. ಈ ಸಂಖ್ಯೆಯನ್ನು, ಆ ಸಮೀಕ್ಷೆ ನೂರು ಜನರಿಗೆ ಸಂಬಂಧಿಸಿದಂತೆ ಪರಿವರ್ತಿಸಿದೆ. ಹೀಗೆ ಹೇಳಿದರೆ ಮಾತ್ರ ಸಾಮಾನ್ಯ ಜನರಿಗೆ ಅರ್ಥವಾಗುವುದು ಎಂಬ ಕಾರಣದಿಂದ ಹಾಗೆ ಮಾಡಿದೆ. ಅದರಂತೆ ಪ್ರಪಂಚದ ಪ್ರತಿ ನೂರು ಜನರಲ್ಲಿ 11 ಜನರು ಯುರೋಪಿಯನ್ನರು, 5 ಜನರು ಉತ್ತರ ಅಮೇರಿಕಾದವರು, 9 ಜನರು ದಕ್ಷಿಣ ಅಮೆರಿಕಾದವರು, 15 ಜನರು ಆಫ್ರಿಕನ್ನರು, ಉಳಿದ 60 ಜನರು ಏಷ್ಯಾ ಖಂಡದವರು. ಪ್ರತಿ ನೂರು ಜನರಲ್ಲಿ 49 ಜನರು ಹಳ್ಳಿಗಳಲ್ಲಿ ವಾಸಿಸಿದರೆ, 51 ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಪ್ರತಿ ನೂರು ಜನರಲ್ಲಿ 77 ಜನರು ಸ್ವಂತ ಮನೆಗಳಲ್ಲಿ ವಾಸಿಸಿದರೆ, 23 ಜನರಿಗೆ ನೆಲೆಯಿಲ್ಲ. ಪ್ರತಿ ನೂರು ಜನರಲ್ಲಿ 21 ಜನರು ಪೌಷ್ಟಿಕ ಆಹಾರ ಸೇವಿಸುತ್ತಾರೆ, 63 ಜನರು ಹೊಟ್ಟೆತುಂಬಾ ಊಟಮಾಡುತ್ತಾರೆ, 15 ಜನರು ಅಪೌಷ್ಟಿಕ ಆಹಾರ ಸೇವಿಸಿದರೆ, ಒಬ್ಬರು ಪ್ರತಿದಿನ ತಮ್ಮ ಕೊನೆಯ ಊಟ ಮಾಡುತ್ತಾರೆ, ಮರುದಿನದ ಊಟಕ್ಕೆ ಅವರು ಬದುಕಿರುವುದಿಲ್ಲ. ಪ್ರತಿ ನೂರು ಜನರಲ್ಲಿ 48 ಜನರು ಪ್ರತಿದಿನ 200 ರೂಪಾಯಿಗಳಿಗಿಂತ ಕಡಿಮೆ ಸಂಪಾದಿಸುತ್ತಾರೆ. ಪ್ರತಿ ನೂರು ಜನರಲ್ಲಿ 87 ಜನರಿಗೆ ಶುದ್ಧ ಕುಡಿಯುವ ನೀರು ದೊರಕಿದರೆ, 13 ಜನರಿಗೆ ಅಶುದ್ಧ ನೀರೇ ಗತಿ. ಪ್ರತಿ ನೂರು ಜನರಲ್ಲಿ 75 ಜನರ ಬಳಿ ಮೊಬೈಲ್ ಫೋನ್ ಇದ್ದರೆ, 25 ಜನರ ಬಳಿ ಇಲ್ಲ. ಪ್ರತಿ ನೂರು ಜನರಲ್ಲಿ 30 ಜನರಿಗೆ ಇಂಟರ್‌ನೆಟ್ ಸೌಲಭ್ಯ ಲಭಿಸಿದರೆ, 70 ಜನರಿಗೆ ಆನ್‌ಲೈನ್ ಸಂಪರ್ಕವಿಲ್ಲ. ಪ್ರತಿ ನೂರು ಜನರಲ್ಲಿ 26 ಜನರು 14 ವರ್ಷದೊಳಗೆ ಸಾವನ್ನಪ್ಪುತ್ತಾರೆ, 66 ಜನರು 15–64 ವರ್ಷ ಬದುಕುತ್ತಾರೆ, 8 ಜನರು ಮಾತ್ರ 65ಕ್ಕಿಂತ ಹೆಚ್ಚು ಕಾಲ ಬದುಕುತ್ತಾರೆ. ಅಂದರೆ ಪ್ರತಿ ನೂರು ಜನರಲ್ಲಿ 65 ಕ್ಕಿಂತ ಹೆಚ್ಚು ವಯಸ್ಸು ಬದುಕುವವರ ಸಂಖ್ಯೆ ಕೇವಲ 8.

ಈ ವರದಿಯ ಮುಕ್ತಾಯ ಹಂತದಲ್ಲಿ ಹೇಳುವುದೇನೆಂದರೆ ನಿಮಗೆ ಸ್ವಂತ ಮನೆಯಿದೆ, ಸಂತೃಪ್ತವಾದ ಊಟ ದೊರಕುತ್ತದೆ, ನಿಮ್ಮಲ್ಲಿ ಮೊಬೈಲ್ ಫೋನ್ ಇದೆ, ನೀವು ಇಂಟರ್‌ನೆಟ್‌ನಲ್ಲಿ ಬ್ರೌಸ್ ಮಾಡುತ್ತೀರಿ, ನೀವು ಕಾಲೇಜು ಶಿಕ್ಷಣ ಪಡೆದಿದ್ದೀರಿ ಎಂದರೆ ನೀವು ಶೇಕಡಾ 8ರ ಗುಂಪಿನಲ್ಲಿದ್ದೀರಿ ಎಂದು ಅರ್ಥ. ನೀವು 65 ವರ್ಷಕ್ಕಿಂತ ಹೆಚ್ಚಿನ ವಯೋಮಾನದವರಾಗಿದ್ದರೆ ನೀವು ನಿಮ್ಮ ಜೀವನದ ಬಗ್ಗೆ ಹೆಮ್ಮೆ ಪಡಬೇಕು. ನಿಮಗಿಂತ ಕಡಿಮೆ ಆಯುಷ್ಯದ ಅಂದರೆ 64 ವರ್ಷದೊಳಗಿನ ಶೇಕಡಾ 92 ಜನರು ನಿಮಗಿಂತ ಮೊದಲೇ ಪ್ರಪಂಚ ಬಿಟ್ಟು ಹೋಗಿದ್ದಾರೆ. ಅಂದರೆ ನೀವು ಅವರೆಲ್ಲರಿಗಿಂತ ಅದೃಷ್ಟವಂತರು ಎಂದು ತಿಳಿಯಬೇಕು ಎಂದು ಆ ವರದಿ ಹೇಳುತ್ತದೆ.

ನಾವು ನಗರ/ಪಟ್ಟಣ ಪ್ರದೇಶಗಳಲ್ಲಿ ವಾಸಿಸುವವರು ಮೇಲ್ಕಂಡ ಅನೇಕ ಸೌಲಭ್ಯಗಳನ್ನು ಪಡೆದಿದ್ದೇವೆ. ಆ ಬಗ್ಗೆ ನಮಗೆ ಸಂತೃಪ್ತಿ ಸಮಾಧಾನ ಇರಬೇಕು. ಅದನ್ನು ಬಿಟ್ಟು ನನಗೆ ಇನ್ನೂ ಏನೇನೋ ದೊರಕಬೇಕಾಗಿತ್ತು ಎಂದು ಹಂಬಲಿಸುವುದರಲ್ಲಿ ಯಾವುದೇ ಅರ್ಥ ಕಾಣುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಒಂದು ಕಥೆ ಇದೆ. ಒಂದೆಡೆ ನದಿ ಪಾತ್ರದಲ್ಲಿ ಒಂದು ಮೀನು ವಾಸಿಸುತ್ತಿತ್ತು. ಇದೇ ನದಿಯ ಪಕ್ಕದಲ್ಲಿದ್ದ ಮರದಲ್ಲಿ ಒಂದು ನವಿಲು ಬೀಡು ಬಿಟ್ಟಿತ್ತು. ಇವರಿಬ್ಬರ ನಡುವೆ ಅದು ಹೇಗೋ ಗೆಳೆತನ ಬೆಳೆದಿತ್ತು. ಒಮ್ಮೆ ಒಬ್ಬ ಬೇಟೆಗಾರ ನದಿ ದಂಡೆಗೆ ಬಂದ. ಅವನು ಮೀನು ಹಾಗೂ ನವಿಲು ಪರಸ್ಪರ ಸಂವಾದಿಸುವುದನ್ನು ಕಂಡ. ಅವನು ಮೊದಲು ನವಿಲನ್ನು ಹಿಡಿದ. ಇದನ್ನು ಮೀನು ನೋಡಿತು. ಆತ್ಮೀಯ ಗೆಳೆಯನಿಗಾದ ಗತಿ ಅದಕ್ಕೆ ಬೇಸರ ತರಿಸಿತು. ಅದು ಬೇಟಗಾರನನ್ನು ಕೋರಿತು: 'ನೀನು ನನ್ನ ಸ್ನೇಹಿತನನ್ನು ಬಿಟ್ಟುಬಿಡು, ಬದಲಾಗಿ ನಿನಗೆ ಅಮೂಲ್ಯವಾದ ಒಂದು ಮುತ್ತನ್ನು ತಂದುಕೊಡುತ್ತೇನೆ' ಎಂದಿತು. ಬೇಟೆಗಾರ ಒಪ್ಪಿದ. ಮೀನು ನದಿಯಾಳಕ್ಕೆ ಹೋಗಿ ಒಂದು ಅಮೂಲ್ಯವಾದ ಮುತ್ತನ್ನು ಕಚ್ಚಿ ತಂದು ಬೇಟೆಗಾರನಿಗೆ ನೀಡಿತು. ಬೇಟಗಾರ ಅದರ ಬೆಲೆ ಅಂದಾಜಿಸಿ ಖುಷಿಪಟ್ಟು ನವಿಲನ್ನು ಬಿಡುಗಡೆ ಮಾಡಿದ. ಆದರೆ ಆ ಬೇಟೆಗಾರ ಮರುದಿನ ಮತ್ತೆ ಬಂದ. ಅವನ ದುರಾಸೆಯ ಮೀನಿಗೆ ಮನವರಿಕೆ ಆಯ್ತು. ಮೀನನ್ನು ಕಂಡವನೇ ಆ ಬೇಟೆಗಾರ, ಮೀನಿಗೆ 'ಆ ಒಂದು ಮುತ್ತಿಗೆ ಅಂತಹ ಬೆಲೆಯಿಲ್ಲವಂತೆ, ನೀನು ಇನ್ನೊಂದು ಮುತ್ತು ತಂದುಕೊಟ್ಟರೆ ನಾನು ಇನ್ನೆಂದೂ ನಿನ್ನ ಸ್ನೇಹಿತ ನವಿಲಿನ ತಂಟೆಗೆ ಬರುವುದಿಲ್ಲ' ಎಂದ. ಮೀನಿಗೆ ಇವನ ಆಂತರ್ಯದ ಅರಿವಾಯಿತು. ಅದು ಬೇಟೆಗಾರನಿಗೆ 'ನಿನಗೆ ಅಂತಹುದೇ ಇನ್ನೊಂದು ಮುತ್ತು ಬೇಕಾದರೆ, ಅದನ್ನು ಹುಡುಕಲು ನಿನ್ನ ಕೈಲಿರುವ ಮುತ್ತನ್ನು ನನಗೆ ಕೊಡಬೇಕು. ಆಗ ನಾನು ಅಂತಹುದೇ ಮುತ್ತು ಹುಡುಕಿ ತರುತ್ತೇನೆ' ಎಂದಿತು. ಬೇಟೆಗಾರ ಒಪ್ಪಿ ನೀಡಿದ. ಮೀನು ಅದನ್ನು ಕಚ್ಚಿಕೊಂಡು ನೀರಿನಾಳಕ್ಕೆ ಹೋಯಿತು. ಅಲ್ಲಿಂದಲೇ ಬೇಟೆಗಾರನಿಗೆ ಹೇಳಿತು. 'ನನ್ನ ಗೆಳೆಯ ನವಿಲು ಈಗಾಗಲೇ ಸಾಕಷ್ಟು ದೂರ ಹೋಗಿಯಾಗಿದೆ. ನೀನು ದುರಾಸೆಯಿಂದ ಮತ್ತೆ ಬರುವೆ ಎಂಬುದು ನನಗೆ ತಿಳಿದಿತ್ತು. ಮನುಷ್ಯರ ಸ್ವಭಾವವೇ ಹಾಗೆ, ನಿಮಗೆ ತೃಪ್ತಿ ಎಂಬುದಿಲ್ಲ. ಒಂದು ಸಿಕ್ಕರೆ ಮತ್ತೊಂದು ಬಯಸುತ್ತೀರಿ, ಹೀಗೆ ಬೇಕುಗಳ ಸಂತೆಯಲ್ಲಿ ಕಳೆದುಹೋಗುತ್ತೀರಿ. ಆದ್ದರಿಂದಲೇ ನೀವು ಯಾವಾಗಲೂ ದುಃಖಿಗಳು. ತೃಪ್ತಿಯೇ ಸುಖದ ಮೊದಲ ಹೆಜ್ಜೆ. ಆದರೆ ನಿಮಗದರ ಅರಿವಿಲ್ಲ. ನೀನು ಅದೇ ಅತಿಯಾಸೆಯಿಂದ ನಿನಗೆ ಸಿಕ್ಕಿದ್ದನ್ನೂ ಕಳೆದುಕೊಂಡೆ' ಎಂದು ಹೇಳಿ ನೀರಿನಲ್ಲಿ ಮರೆಯಾಯಿತು.

ನಾವೂ ಅದೇ ಜಾಯಮಾನದವರು. ಇಂತಹ ಮನೋಭಾವದಿಂದ ಜೀವನದ ಅತೀ ಮಧುರ ಕ್ಷಣಗಳನ್ನು ಕಳೆದುಕೊಳ್ಳುತ್ತೇವೆ. ಕೆಲಸವಿಲ್ಲದಾಗ ಹಣವಿಲ್ಲ ಎಂಬ ಕೊರತೆ, ಹಣ ಸಿಕ್ಕಿದಾಗ ಬಳಸದೇ ಉಳಿಸುವ ಹಂಬಲ. ಇಂತಹ ಮನೋಭಾವದಿಂದ ಆಯಾ ವಯೋಮಾನದಲ್ಲಿ ಅನುಭವಿಸಬೇಕಾದ ಅನೇಕ ಸುಖಗಳನ್ನು, ಮಧುರ ಕ್ಷಣಗಳನ್ನು ಕಳೆದುಕೊಂಡುಬಿಡುತ್ತೇವೆ. ಈ ಹಿಂದೆ ಕೆಲವೇ ರೂಪಾಯಿಗೆ ದೊರಕುತ್ತಿದ್ದ ವಸ್ತುಗಳನ್ನು ಉಳಿತಾಯದ ಮನೋಭಾವದಿಂದ ಅದನ್ನು ಪಡೆಯದೆ ಆ ವಯಸ್ಸಿನ ಸುಖದಿಂದ ವಂಚಿತರಾಗುತ್ತೇವೆ. ಹಾಗೆ ಮದುವೆಯಾದ ಹೊಸತು, ಮಕ್ಕಳಾದ ನಂತರ ಅವರೊಡನೆ ನಲಿಯಬಹುದಾದ ಕ್ಷಣಗಳು, ತಿನ್ನುವ ವಯಸ್ಸಿದ್ದಾಗ ಉತ್ತಮವಾದದ್ದನ್ನು ತಿನ್ನದಿರುವುದು, ಅಲ್ಪ ದಾನದಿಂದ ಸಿಗಬಹುದಾದ ಸಂತೋಷ ಹಾಳು ಮಾಡಿಕೊಳ್ಳುವುದು ಹೀಗೆ ಹಲವಾರು ಸಂದರ್ಭಗಳನ್ನು ನಾವು ಉಪಯೋಗಿಸದೇ ಕಳೆದುಕೊಂಡುಬಿಡುತ್ತೇವೆ. ನಂತರ ವಯಸ್ಸಾದಾಗ ಅಥವಾ ಹಣ ಸೇರಿದಾಗ ನಾವು ಹಿಂದಕ್ಕೆ ಹೋಗಲಾರದ ಹಂತಕ್ಕೆ ತಲಪುತ್ತೇವೆ. ಆಗ ಪಶ್ಚಾತ್ತಾಪ ಪಟ್ಟರೆ ಅದಕ್ಕೆ ಅರ್ಥವಿದೆಯೇ?

ವಯಸ್ಸಾದ ನಂತರ ಅನೇಕರಿಗೆ ನಗುವ ಸಂದರ್ಭವೇ ಸಿಗದಂತಾಗಿರುತ್ತದೆ. ಹಾಗಾಗಿ ಹಲವು ಗೆಳೆಯರು ಸೇರಿಕೊಂಡು ನಗುವ ಕ್ಲಬ್ (ಲಾಫಿಂಗ್ ಕ್ಲಬ್) ಸ್ಥಾಪಿಸಿಕೊಂಡು ಉದ್ಯಾನವನಗಳಲ್ಲಿ ಬಲವಂತ ವಾಗಿ ನಗಲು ಪ್ರಯತ್ನಿಸುತ್ತಾರೆ. ಇದಕ್ಕೆ ಕಾರಣ ಆರಂಭದಿಂದ ಇದ್ದುದನ್ನು ಅನುಭವಿಸಲಾಗದ್ದು. ಕನಿಷ್ಠ ಸೌಕರ್ಯವೂ ಇಲ್ಲದ ಕೋಟ್ಯಾಂತರ ಮಂದಿ ಈ ಸಮಾಜದಲ್ಲಿ ಕಾಣಸಿಗುತ್ತಾರೆ. ಅವರಿಗಿಂತ ನಮಗೆ ಅನೇಕ ಸವಲತ್ತು ದೊರಕಿರುವಾಗ ಅದರ ಬಗ್ಗೆ ಸಮಾಧಾನ ಹಾಗೂ ಅಭಿಮಾನ ಬೆಳೆಸಿಕೊಂಡರೆ, ಕೊನೆಯಲ್ಲಿ ವೈರಾಗ್ಯ ತಾಳುವುದು ತಪ್ಪುತ್ತದೆ. ಹೀಗೆ ಕೊನೆಗೆ ವೈರಾಗ್ಯ ತಾಳಿದವರು ತಮ್ಮ ಆಸ್ತಿ–ಪಾಸ್ತಿಗಳನ್ನು ಯಾವುದಾದರೂ ಮಠಕ್ಕೋ, ದೇವಸ್ಥಾನಕ್ಕೋ ಬರೆದು ಕೊಡಲು ಬಯಸುವುದನ್ನು ಕಾಣಬಹುದು. ಸಿಕ್ಕಿದ್ದನ್ನು 'ಪ್ರಸಾದ' ಎಂದು ಸ್ವೀಕರಿಸುವುದು ನೆಮ್ಮದಿ ತಂದು ಕೊಡುತ್ತದೆ. ಅದು ಸಂತೃಪ್ತ ಜೀವನದ ಸೂತ್ರವೂ ಆಗುತ್ತದೆ. ಈ ಸಂದರ್ಭದಲ್ಲಿ ನಮ್ಮ ಕನ್ನಡ ಸಾಹಿತ್ಯ ಶ್ರೀಮಂತಿಕೆಯನ್ನು ಹೆಚ್ಚಿಸಿದ ಡಾ. ಡಿ.ವಿ. ಗುಂಡಪ್ಪನವರ 'ಇರುವ ಭಾಗ್ಯವ ನೆನೆದು ಬಾರನೆಂಬುದನು ಬಿಡು ಹರುಷಕ್ಕಿದೆ ದಾರಿ' ನೀತಿಬೋಧೆ ನೆನಪಿಗೆ ಬರುತ್ತದೆ.

ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಮಣಿಸಲು ಪಾಟ್ನಾದಲ್ಲಿ 15ಕ್ಕೂ ಅಧಿಕ ವಿಪಕ್ಷಗಳ ಮಹಾ ಮೈತ್ರಿ ಸಭೆ

ಪಾಲ್ಗೊಂಡಿದ್ದ 32 ನಾಯಕರದ್ದೂ ಒಂದೇ ಮಂತ್ರ ಒಗ್ಗಟ್ಟಾಗಿ ಹೋರಾಡೋಣ

ಪಾಟ್ನಾ, ಜೂ.23– 2024ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ಮೋದಿ ನೇತೃತ್ವದ ಬಿಜೆಪಿಯನ್ನು ಸೋಲಿಸುವ ಏಕೈಕ ಅಜೆಂಡಾದೊಂದಿಗೆ ಕಾಂಗ್ರೆಸ್ ಸೇರಿದಂತೆ 20 ವಿಪಕ್ಷಗಳನ್ನೊಳಗೊಂಡ ಬೃಹತ್ ಮೈತ್ರಿಯ ಮೊದಲ ಸಭೆ ಶುಕ್ರವಾರ ಬಿಹಾರದ ಪಾಟ್ನಾದಲ್ಲಿ ನಡೆಯಿತು.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ಕಾಂಗ್ರೆಸ್, ಆಮ್ ಆದ್ಮಿ ಪಾರ್ಟಿ, ಎನ್‌ಸಿಪಿ, ಟಿಎಂಸಿ, ಶಿವಸೇನೆ, ಆರ್‌ಜೆಡಿ, ಜೆಡಿಯು, ಡಿಎಂಕೆ ಸೇರಿದಂತೆ 15ಕ್ಕೂ ಅಧಿಕ ಪಕ್ಷಗಳ ಮುಖಂಡರು ಭಾಗವಹಿಸಿದ್ದರು. ಪ್ರಮುಖವಾಗಿ 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿ ಅಧಿಕಾರಕ್ಕೇರುವುದೇ ಮೊದಲ ಗುರಿ ಎಂಬ ಅಜೆಂಡಾ ಫಿಕ್ಸ್ ಮಾಡಲಾಗಿದೆ.

ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿಯನ್ನು ಸೋಲಿಸಲು ನಡೆಸಿದ ಪ್ರಯತ್ನಗಳು ವಿಫಲವಾಗಿದ್ದ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಗಿದ್ದು, ಹಿಂದಿನ ಚುನಾವಣೆಗಳಲ್ಲಿ ಎನ್‌ಡಿಎ ವಿರೋಧಿ ಪಕ್ಷಗಳಾದ ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಿದ್ದೇ ಕಾರಣ. ಇದರಿಂದ ಬಿಜೆಪಿ ಗೆಲುವು ಸಾಧ್ಯವಾಯಿತು ಎಂಬ ಅಭಿಪ್ರಾಯ ವ್ಯಕ್ತವಾಗಿದ್ದು, ಈ ಮೈತ್ರಿ ಕೂಟದ ಹಲವು ಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳಿವೆ. ಕೆಲವು ರಾಜ್ಯಗಳಲ್ಲಿ ಮೈತ್ರಿಕೂಟದ ಪಕ್ಷಗಳೇ ಎದುರು–ಬದಿರಾಗಿವೆ. ಹೀಗಿದ್ದರೂ ವೈಮನಸ್ಸು ಹಾಗೂ ಭಿನ್ನಾಭಿಪ್ರಾಯ ಬದಿಗಿಟ್ಟು ಪರಸ್ಪರ ಸಹಕಾರದೊಂದಿಗೆ ಒಗ್ಗಟ್ಟಿನಿಂದ ಕೆಲಸ ಮಾಡಿದರೆ 2024ರ ಚುನಾವಣೆಯಲ್ಲಿ ಬಿಜೆಪಿ ಸೋಲಿಸುವುದು ಕಷ್ಟವಲ್ಲ ಎಂಬ ಅಭಿಪ್ರಾಯವನ್ನು ಕೆಲವು ಮುಖಂಡರು ವ್ಯಕ್ತಪಡಿಸಿದರು.

ಮೈತ್ರಿ ಕೂಟ ಅಧಿಕಾರಕ್ಕೆ ಬಂದರೆ ಪ್ರಧಾನಿ ಅಭ್ಯರ್ಥಿ ಯಾರು ಎಂಬುದರ ಬಗ್ಗೆ ಈ ಸಭೆಯಲ್ಲಿ ಯಾವುದೇ ರೀತಿಯ ಚರ್ಚೆಯಾಗಿಲ್ಲ ಎಂದು ಮೂಲಗಳು ತಿಳಿಸಿವೆ. ಇಂದಿನ ಸಭೆಯ ನಂತರ ಕೆಲವು ಸಭೆಗಳನ್ನು ನಡೆಸಿ ಎಲ್ಲ ಪಕ್ಷಗಳು ಒಗ್ಗಟ್ಟಾಗಿ ಲೋಕಸಭಾ ಚುನಾವಣೆ ಎದುರಿಸುವ ಬಗ್ಗೆ ಕಾರ್ಯತಂತ್ರ ರೂಪಿಸುವ ನಿರ್ಧಾರವನ್ನು ಕೈಗೊಳ್ಳಲಾಗಿದೆ.



ಪಾಟ್ನಾದಲ್ಲಿ ಫೋಟೋ ಸೆಷನ್ ನಡೆಯುತ್ತಿದೆ: ಪ್ರತಿಪಕ್ಷಗಳ ಸಭೆಗೆ ಅಮಿತ್ ಶಾ ಟಾಂಗ್

ಪಾಟ್ನಾ: 2024ರಲ್ಲಿ ಬಿಜೆಪಿ 300ಕ್ಕೂ ಹೆಚ್ಚು ಸ್ಥಾನಗಳನ್ನು ಪಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಮತ್ತೊಮ್ಮೆ ಸರ್ಕಾರ ರಚಿಸಲಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದ್ದಾರೆ. ಇಂದು ಜಮ್ಮುವಿನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅಮಿತ್ ಶಾ, ಎಷ್ಟೇ ಪಕ್ಷಗಳು ಪ್ರತಿ ಪಕ್ಷಗಳ ಸಭೆಗೆ ಬಂದರೂ ಅವು ಎಂದಿಗೂ ಒಂದಾಗಲು ಸಾಧ್ಯವಿಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ.

ಇಂದು ಪಾಟ್ನಾದಲ್ಲಿ ಫೋಟೋ ಸೆಷನ್ ಮಾತ್ರ ನಡೆಯುತ್ತಿದೆ. ಅವರು (ಪ್ರತಿಪಕ್ಷಗಳು) ಎಂದಿಗೂ ಒಂದಾಗಲು ಸಾಧ್ಯವಿಲ್ಲ. 2024ರ ಲೋಕಸಭೆ ಚುನಾವಣೆಯಲ್ಲಿ 300ಕ್ಕೂ ಹೆಚ್ಚು ಸ್ಥಾನಗಳೊಂದಿಗೆ ಪ್ರಧಾನಿ ಮೋದಿ ಮತ್ತೊಮ್ಮೆ ಸರ್ಕಾರ ರಚಿಸುತ್ತಾರೆ ಎಂದು ಎರಡು ದಿನಗಳ ಭೇಟಿಗಾಗಿ ಜಮ್ಮುವಿಗೆ ಆಗಮಿಸಿರುವ ಅಮಿತ್ ಶಾ ಹೇಳಿದ್ದಾರೆ.

2024 ರ ಲೋಕಸಭೆ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷವನ್ನು (ಬಿಜೆಪಿ) ಎದುರಿಸಲು ಒಗ್ಗಟ್ಟಿನ ಪ್ರತಿಪಕ್ಷಗಳ ಮೈತ್ರಿಕೂಟ ರೂಪಿಸುವ ಉದ್ದೇಶದಿಂದ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಪಾಟ್ನಾದಲ್ಲಿ ಆಯೋಜಿಸಿದ್ದ ವಿರೋಧ ಪಕ್ಷದ ನಾಯಕರ ಸಭೆಯಲ್ಲಿ 15ಕ್ಕೂ ಹೆಚ್ಚು ವಿರೋಧ ಪಕ್ಷಗಳು ಭಾಗವಹಿಸಿದ್ದವು.

ಏಕಾಂಗಿಯಾಗಿ ಮೋದಿಯನ್ನು ಸೋಲಿಸಲಾಗದ ಕಾಂಗ್ರೆಸ್ ಇತರರ ಬೆಂಬಲ ಕೇಳುತ್ತಿದೆ: ಇರಾನಿ



ನವದೆಹಲಿ: ಮುಂಬರುವ ಲೋಕ ಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಲಿಸುವ ಸಾಮರ್ಥ್ಯ ಕಾಂಗ್ರೆಸ್ ಪಕ್ಷಕ್ಕಿಲ್ಲ. ಹೀಗಾಗಿ ಅದು ಇತರ ಪಕ್ಷಗಳ ಬೆಂಬಲ ಯಾಚಿಸುತ್ತಿದೆ ಎಂದು ಬಿಜೆಪಿ ಶುಕ್ರವಾರ ಹೇಳಿದೆ. ಪಕ್ಷದ ವಿರುದ್ಧ ಮೈತ್ರಿಕೂಟ ರಚಿಸುವ ಕುರಿತು ಚರ್ಚಿಸಲು ಪಾಟ್ನಾದಲ್ಲಿ ಪ್ರಮುಖ ವಿರೋಧ ಪಕ್ಷಗಳ ನಾಯಕರು ಸಭೆ ನಡೆಸಿರುವ ಹಿನ್ನೆಲೆಯಲ್ಲಿ ಬಿಜೆಪಿ ಈ ರೀತಿ ಕುಟುಕಿದೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪ್ರಜಾ ಪ್ರಭುತ್ವದ ಕೊಲೆಯಾಗಿದ್ದಕ್ಕೆ ಸಾಕ್ಷಿಯಾಗಿದ್ದ ಕೆಲ ನಾಯಕರು, ಈಗ ಕಾಂಗ್ರೆಸ್ ನೆರಳಿನಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದು ವಿಪರ್ಯಾಸ ಎಂದು ಕೇಂದ್ರ ಸಚಿವೆ ಸ್ಮೃತಿ ಇರಾನಿ ವಾಗ್ದಾಳಿ ನಡೆಸಿದ್ದಾರೆ.

ಪ್ರಧಾನಿ ಮೋದಿ ಅವರನ್ನು ಏಕಾಂಗಿಯಾಗಿ ಎದುರಿಸಲು ಆಗುವುದಿಲ್ಲ ಎಂಬುದನ್ನು ಬಹಿರಂಗ ವಾಗಿಯೇ ಒಪ್ಪಿಕೊಂಡಿದ್ದಕ್ಕಾಗಿ ಕಾಂಗ್ರೆಸ್‌ಗೆ ಕೃತಜ್ಞಳಾಗಿರುವೆ ಎಂದಿದ್ದಾರೆ. ಬಿಹಾರದ ಭಾಗಲ್ಪುರದಲ್ಲಿ ಇತ್ತೀಚೆಗೆ ಸೇತುವೆಯೊಂದು ಕುಸಿದ ಘಟನೆಯನ್ನು ಪ್ರಸ್ತಾಪಿಸಿರುವ ಸಚಿವೆ ಇರಾನಿ, ಒಂದು ಸದೃಢವಾದ ಸೇತುವೆ ಯನ್ನು ನಿರ್ಮಿಸಲಾಗದವರು ಪ್ರಜಾ ತಂತ್ರದ ಉಳಿವಿಗಾಗಿ ಯಾವ ರೀತಿಯ ಸೇತುವೆ ಕಟ್ಟುವರು ಎನ್ನುವ ಮೂಲಕ ಮುಖ್ಯಮಂತ್ರಿ ನಿತೀಶ್ ಕುಮಾರ್ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ.

ಸಭೆ ಬಳಿಕ ಮಾಧ್ಯಮದೊಂದಿಗೆ ಮಾತನಾಡಿದ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಇಂದಿನ ಸಭೆ ಬಹಳಷ್ಟು ಪರಿಣಾಮಕಾರಿಯಾಗಿತ್ತು. ಉತ್ತಮವಾದ ಚರ್ಚೆ ನಡೆದಿದೆ. ಎಲ್ಲರೂ ಒಗ್ಗಟ್ಟಿನಿಂದ 2024ರ ಲೋಕಸಭಾ ಚುನಾವಣೆ ಎದುರಿಸಲು ನಿರ್ಧರಿಸಲಾಗಿದೆ ಎಂದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, 2024ರ ಚುನಾವಣೆಗೆ ನಮ್ಮ ಅಜೆಂಡಾವನ್ನು ಸೆಟ್ ಮಾಡಲಿದ್ದೇವೆ. ಜುಲೈ ತಿಂಗಳಿನಲ್ಲಿ ಮತ್ತೊಂದು ಸಭೆ ಸಿಮ್ಲಾದಲ್ಲಿ ನಡೆಯಲಿದೆ ಎಂದರು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಾತನಾಡುತ್ತಾ, ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ಒಗ್ಗಟ್ಟಿನಿಂದ ಚುನಾವಣೆ ಎದುರಿಸುತ್ತಿದ್ದೇವೆ. ಬಿಜೆಪಿ ಇತಿಹಾಸವನ್ನು ಅಳಿಸಲು ಹೊರಟಿದೆ. ಆದರೆ ನಾವು ಇತಿಹಾಸವನ್ನು ಉಳಿಸಲು ತೀರ್ಮಾನಿಸಿದ್ದೇವೆ ಎಂದರು.


ಪಾಲ್ಗೊಂಡಿದ್ದ ಪಕ್ಷಗಳು

1. ಕಾಂಗ್ರೆಸ್ 2. ಡಿಎಂಕೆ 3. ಟಿಎಂಸಿ 4. ಜೆಡಿಯು 5. ಶಿವಸೇನೆ 6. ಸಮಾಜವಾದಿ ಪಕ್ಷ 7. ಎನ್‌ಸಿಪಿ 8. ನ್ಯಾಷನಲ್ ಕಾನ್ಫರೆನ್ಸ್ 9. ಸಿಪಿಎಂ 10. ಸಿಪಿಐ 11. ಜೆಎಂಎಂ 12. ಆಪ್ 13. ಆರ್‌ಜೆಡಿ 14. ಪಿಡಿಪಿ 15. ಸಿಪಿಐ (ಎಂಎಲ್)

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು ಸಿದ್ಧಾರ್ಥನಗರದ ಭವ್ಯ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣದಲ್ಲಿ ಬಹುತೇಕ ಕಚೇರಿಗಳು ಕಾರ್ಯಾರಂಭ







ಮೈಸೂರು, ಜೂ.23(ಬಿಎಲ್‌ಯು)– ಪಾರಂಪರಿಕ ಶೈಲಿಯಲ್ಲಿ ಭವ್ಯವಾಗಿ ನಿರ್ಮಾಣವಾಗಿದ್ದ ಮೈಸೂರಿನ ಸಿದ್ಧಾರ್ಥ ನಗರದ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣಕ್ಕೆ ಹಿಡಿದಿದ್ದ ಗ್ರಹಣ ಅಂತೂ ನಿವಾರಣೆ ಆಗಿದೆ. ಆಡಳಿತ ವ್ಯವಸ್ಥೆ ಇಲ್ಲಿಗೆ ಕಾಲಿಡದೆ ಕಳೆದ ಐದು ವರ್ಷಗಳಿಂದ ಇಡೀ ಭವ್ಯ ಕಟ್ಟಡ ಪಾಳು ಬಿದ್ದು, ಧೂಳು ಹಿಡಿಯುತ್ತಿತ್ತು. ಆದರೆ ಈಗ ಹಳೇ ಜಿಲ್ಲಾಧಿಕಾರಿ ಕಚೇರಿಯನ್ನು ಪೂರ್ಣವಾಗಿ ತೆರವು ಮಾಡಿ, ಹೊಸ ಕಟ್ಟಡಕ್ಕೆ ಸ್ಥಳಾಂತರ ಮಾಡಲಾಗಿದ್ದು, ಹಾಗೆಯೇ ಬಹುತೇಕ ಇಲಾಖೆಗಳು ಇದೀಗ ಇಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಮೈಸೂರಿನ ಸಿದ್ಧಾರ್ಥನಗರದ ಬನ್ನೂರು ರಸ್ತೆಯಲ್ಲಿ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣವನ್ನು ಪಾರಂಪರಿಕ ಶೈಲಿಯಲ್ಲಿ ನಿರ್ಮಾಣ ಮಾಡಲಾಗಿದೆ. 22,920 ಚದರ ಮೀಟರ್ ವಿಸ್ತೀರ್ಣದ ಈ ಕಟ್ಟಡವನ್ನು 84.7 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಕೆಳ ಅಂತಸ್ತಿನಲ್ಲಿ 22 ಕೊಠಡಿ, ಮೊದಲ ಹಾಗೂ ಎರಡನೇ ಅಂತಸ್ತಿನಲ್ಲಿ ತಲಾ 24 ಕೊಠಡಿಗಳಿವೆ.

ಕಳೆದ ಏಳೆಂಟು ವರ್ಷದ ಹಿಂದೆ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದರ ಶಂಕುಸ್ಥಾಪನೆ ನೆರವೇರಿಸಿ, ಮಾರ್ಚ್ 3, 2018 ರಂದು ಉದ್ಘಾಟನೆ ಕೂಡ ಮಾಡಿದ್ದರು.

ಆದರೆ ಉದ್ಘಾಟನೆಗೊಂಡರೂ ಕಾರ್ಯಾರಂಭ ಮಾಡದೆ ಕಳೆದ ಐದು ವರ್ಷಗಳ ಕಾಲ ಈ ಹೊಸ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣ ಕಟ್ಟಡ ಪಾಳು ಬಿದ್ದು, ಧೂಳು ಹಿಡಿಯುತ್ತಿತ್ತು. ಜಿಲ್ಲಾಧಿಕಾರಿ ಕಚೇರಿಯನ್ನು ಹೊಸ ಕಟ್ಟಡಕ್ಕೆ ಕಳೆದ ಐದು ವರ್ಷದಿಂದ ಅಧಿಕಾರ ನಡೆಸಿದ ಹೆಚ್.ಡಿ.ಕುಮಾರಸ್ವಾಮಿ, ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಸರ್ಕಾರಗಳು ಸ್ಥಳಾಂತರಿಸುವ ಪ್ರಯತ್ನವನ್ನೇ ಮಾಡಲಿಲ್ಲ. ಮೈಸೂರಿನ ಹಲವು ಸಂಘಟನೆಗಳು ಈ ಬಗ್ಗೆ ಮನವಿ ಮಾಡಿದರೂ ಸ್ಥಳಾಂತರಕ್ಕೆ ಆಸಕ್ತಿ ತೋರಲಿಲ್ಲ.

ಶಂಕುಸ್ಥಾಪನೆ ನೆರವೇರಿಸಿ, ಉದ್ಘಾಟನೆ ಮಾಡಿದ್ದ ಸಿದ್ದರಾಮಯ್ಯ, ಮತ್ತೆ ಮುಖ್ಯಮಂತ್ರಿಯಾಗುತ್ತಿದ್ದಂತೆ ಈ ಭವ್ಯ ಕಟ್ಟಡಕ್ಕೆ ಯೋಗ ಬಂದಿದೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣ ಕಟ್ಟಡಕ್ಕೆ ಕಳೆ ಬಂದಿದೆ. ಜಿಲ್ಲಾಧಿಕಾರಿಗಳ ಕಚೇರಿಯೂ ಸೇರಿದಂತೆ ಬಹುತೇಕ ಕಚೇರಿಗಳು ಇಲ್ಲಿಗೆ ಸ್ಥಳಾಂತರಗೊಂಡಿವೆ.

ಈಗ ಇಲ್ಲಿ ಡಿಸಿ, ಎಡಿಸಿ ಚೇಂಬರ್, ಎಲೆಕ್ಷನ್ ಬ್ರ್ಯಾಂಚ್, ಮುಜರಾಯಿ ಇಲಾಖೆ, ಬಿಸಿಎಂ ಆಫೀಸ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಸರ್ವೆ ಇಲಾಖೆ, ಶಿಶು ಪಾಲನ ಕೇಂದ್ರ, ಆರ್ಥಿಕ ಮತ್ತು ಸಾಂಖಿಕ ಇಲಾಖೆ, ಪೌರಾಡಳಿತ ಇಲಾಖೆ ಸೇರಿದಂತೆ ಹಲವು ಇಲಾಖೆಗಳು ಹೊಸ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಪೂರ್ವ ವ್ಯವಸ್ಥೆಯೊಂದಿಗೆ ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆದರೆ ಇನ್ನೂ ಹಲವು ಇಲಾಖೆಗಳು ಇಲ್ಲಿಗೆ ಸ್ಥಳಾಂತರವಾಗಬೇಕಿದೆ. ಎಸಿ ಆಫೀಸ್, ಡಿಸಿ ಮತ್ತು ಎಸಿ ರೆಕಾರ್ಡ್ ಸೆಕ್ಷನ್, ಬುಡಕಟ್ಟು ಸಂಶೋಧನಾ ಇಲಾಖೆ, ಖಜಾನೆ ಸೇರಿದಂತೆ ಕೆಲವು ಇಲಾಖೆಗಳು ಇನ್ನು 15 ದಿನದಲ್ಲಿ ಹೊಸ ಜಿಲ್ಲಾಧಿಕಾರಿ ಕಚೇರಿಗೆ ಸ್ಥಳಾಂತರವಾಗಲಿವೆ.

ಹಳೆ ಜಿಲ್ಲಾಧಿಕಾರಿ ಕಚೇರಿ ನಗರದ ಮಧ್ಯಭಾಗದಲ್ಲಿ ಸಾರ್ವಜನಿಕರಿಗೆ ಅನುಕೂಲಕಾರಿಯಾಗಿತ್ತು. ಆದರೆ ಈಗ ಹೊಸ ಜಿಲ್ಲಾಧಿಕಾರಿ ಕಚೇರಿ ಕೆಆರ್.ಸರ್ಕಲ್‌ನಿಂದ ಸುಮಾರು 4 ಕಿಲೋ ಮೀಟರ್ ದೂರವಿದೆ. ಸರಿಯಾದ ಸಾರಿಗೆ ಸೌಲಭ್ಯವಿಲ್ಲ. ಕೆಲವರಿಗೆ ಇದು ದೂರ ಅನಿಸಿದೆ. ಆದರೂ ತಮ್ಮ ಕೆಲಸ ಕಾರ್ಯಕ್ಕೆ ಜನರು ಇಲ್ಲಿಗೆ ಬರಲೇಬೇಕಾದ ಅನಿವಾರ್ಯತೆ ಇದೆ.

ಹಳೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಹೆಚ್ಚು ಜನರು ಬಂದು ತಮ್ಮ ಕೆಲಸ ಕಾರ್ಯ ಮಾಡಿಸಿಕೊಳ್ಳುತ್ತಿದ್ದರು. ಅಲ್ಲಿ ಯಾವುದೇ ಇಲಾಖೆ ಕಚೇರಿ ನೋಡಿದರೂ ಗಿಜಿಗುಡುತ್ತಿತ್ತು. ಆದರೆ ಹೊಸ ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಂತಹ ವಾತಾವರಣ ಇನ್ನೂ ಕಾಣಿಸುತ್ತಿಲ್ಲ. ಯಾವುದೇ ಇಲಾಖೆಯ ಕೊಠಡಿ ನೋಡಿದರೂ ಅಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೊರತುಪಡಿಸಿ ಹೆಚ್ಚು ಜನರು ಕಾಣಿಸುತ್ತಿಲ್ಲ. ಬೆರಳೆಣಿಕೆಯಷ್ಟು ಜನರು ಮಾತ್ರ ಕಾಣ ಸಿಗುತ್ತಿದ್ದಾರೆ. ಎಲ್ಲವೂ ಈಗ ಆನ್‌ಲೈನ್ ವಹಿವಾಟು ಆಗಿರುವುದರಿಂದ, ಕೂಡಲೇ ಸರ್ಕಾರಿ ಸೇವೆ ಪಡೆಯುತ್ತಿರುವುದೇ ಇದಕ್ಕೆ ಕಾರಣ ಎಂದು ಮತ್ತೆ ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಗ್ಯಾರಂಟಿ ಜಾರಿಯಲ್ಲಿ ಕಾಂಗ್ರೆಸ್ ವಿಫಲ

ಮಾಜಿ ಮೇಯರ್ ಸಂದೇಶ್ ಸ್ವಾಮಿ ಟೀಕೆ



ಮೈಸೂರು, ಜೂ.23(ಎಸ್‌ಬಿಡಿ)– ಸುಳ್ಳು ಆಶ್ವಾಸನೆಗಳ ಮೂಲಕ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್, ಗ್ಯಾರಂಟಿಗಳ ಸಮರ್ಪಕ ಅನುಷ್ಠಾನದಲ್ಲಿ ವಿಫಲವಾಗಿದೆ ಎಂದು ಬಿಜೆಪಿ ಮುಖಂಡ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಟೀಕಿಸಿದ್ದಾರೆ.

ಕಾಂಗ್ರೆಸ್ ಚುನಾವಣೆ ಗೆದ್ದಿದ್ದು ಭರವಸೆಯಿಂದಲ್ಲ. ಸುಳ್ಳು ಆಮಿಷಗಳಿಂದ ಎನ್ನುವ ಸತ್ಯ ಜನರಿಗೆ ಅರ್ಥವಾಗಿದೆ. ದಿನ ಕಳೆದಂತೆ ಕಾಂಗ್ರೆಸ್ ಗ್ಯಾರಂಟಿಗಳ ಅಸಲಿಯತ್ತು ಅನಾವರಣವಾಗುತ್ತಿದೆ. ಕಾಂಗ್ರೆಸ್ ನಾಯಕರ ಧ್ವನಿಯೂ ಬದಲಾಗಿದೆ. ಪಂಚ ಗ್ಯಾರಂಟಿಗಳ ಅನುಷ್ಠಾನ ಮಾಡಲಾಗದೆ ಬಿಜೆಪಿ ವಿರುದ್ಧ ಆರೋಪಿಸುವ ಮೂಲಕ ಜನತೆಯ ದಿಕ್ಕು ತಪ್ಪಿಸುವ ವಿಫಲ ಯತ್ನ ನಡೆಸಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಫಲಾನುಭವಿಗಳಿಗೆ ಐದು ಕೆಜಿ ಅಕ್ಕಿ ಕೊಡುತ್ತಿರುವುದು ಕೇಂದ್ರ ಸರ್ಕಾರ ಎನ್ನುವುದನ್ನು ಹೇಳದೆಯೇ ತಲಾ 10 ಕೆಜಿ ಅಕ್ಕಿ ನೀಡುವುದಾಗಿ ಘೋಷಿಸಿದರು. ಈಗ ವಾಸ್ತವ ಪರಿಸ್ಥಿತಿ ಮುಚ್ಚಿಟ್ಟು ಕೇಂದ್ರ ಸರ್ಕಾರ ಹೆಚ್ಚುವರಿ ಅಕ್ಕಿ ನೀಡುತ್ತಿಲ್ಲ ಎಂದು ಆರೋಪಿಸಲಾಗುತ್ತಿದೆ. ಕೇಂದ್ರ ಸರ್ಕಾರ ವಿತರಣೆ ಮಾಡುತ್ತಿರುವ ಐದು ಕೆಜಿ ಅಕ್ಕಿಯಲ್ಲಿ ಯಾವುದೇ ವ್ಯತ್ಯಯ ಮಾಡಿಲ್ಲ ಆದರೆ ಹೆಚ್ಚುವರಿಯಾಗಿ ಅಷ್ಟೊಂದು ಪ್ರಮಾಣದಲ್ಲಿ ನೀಡಲು ಸಾಧ್ಯವಿಲ್ಲ ಎಂದಿದೆ ಬಿಜೆಪಿ ಸರ್ಕಾರ ಇರುವ ಉತ್ತರ ಪ್ರದೇಶ ಸೇರಿದಂತೆ ಹೆಚ್ಚುವರಿ ಅಕ್ಕಿಗೆ ಬೇಡಿಕೆಯಿಟ್ಟ ಹಲವು ರಾಜ್ಯಗಳಿಗೂ ಕೇಂದ್ರ ಸರ್ಕಾರ ಹೀಗೆಯೇ ಹೇಳಿದೆ.

ಪ್ರತಿ ಮನೆಗೆ 200 ಯೂನಿಟ್ ಫ್ರೀ ವಿದ್ಯುತ್ ಎಂದವರು, ಸರ್ಕಾರ ಬಂದ ಮೇಲೆ ವಾರ್ಷಿಕ ಸರಾಸರಿಗೆ ಶೇ.10ರಷ್ಟು ಸೇರಿಸಿ ಕರೆಂಟ್ ಕೊಡ್ತೇವೆ ಎಂದರು. ಅದಕ್ಕೆ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಹಾಕಿ ಅಂದ್ರು, ಆದರೆ ಸರ್ವರ್ ಮಾತ್ರ ಇಲ್ಲ. ನೋಟು ಬ್ಯಾನ್ ಮಾಡಿದಾಗ ಜನರನ್ನು ಮೋದಿ ಬೀದಿಯಲ್ಲಿ ನಿಲ್ಲಿಸಿದರು ಎಂದು ಬೊಬ್ಬೆ ಹೊಡೆದಿದ್ದರು. ಆದರೆ ಈಗಿನ ಪರಿಸ್ಥಿತಿಯನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾರೆ. ಇನ್ನು ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸಿದ ದಿನದಿಂದಲೂ ಸಾರಿಗೆ ವ್ಯವಸ್ಥೆಯೇ ಅದ್ವಾನವಾಗಿದೆ. ಉಚಿತ ಸೇವೆ ನೆಪದಲ್ಲಿ ಸರ್ಕಾರದ ಹಣ ಲೂಟಿ ಮಾಡಬಹುದು. ಗೃಹಲಕ್ಷ್ಮಿ, ಯುವ ನಿಧಿ ಗ್ಯಾರಂಟಿಗಳು ಎಲ್ಲೋ ಕಳೆದು ಹೋಗಿವೆ. ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಯಾವ ಸಬೂಬು ಹೇಳದೆ ರೈತರ 45 ಸಾವಿರ ಕೋಟಿ ಸಾಲ ಮನ್ನಾ ಮಾಡಿದರು. ಈ ಬದ್ಧತೆ ಕಾಂಗ್ರೆಸ್ ನಾಯಕರಿಗಿಲ್ಲ ಎಂದು ಟೀಕಿಸಿದ್ದಾರೆ.

ಕುಲಪತಿಗಳ ನೇಮಕಕ್ಕೆ ಹೈಕೋರ್ಟ್ ತಡೆ

ಮೈಸೂರು ವಿವಿ ಘಟಿಕೋತ್ಸವ ಮತ್ತಷ್ಟು ವಿಳಂಬ



ಮೈಸೂರು, ಜೂ.23(ಆರ್‌ಕೆ)–ಕುಲಪತಿಯಾಗಿದ್ದ ಪ್ರೊ. ಎನ್.ಕೆ.ಲೋಕನಾಥ್ ನೇಮಕಕ್ಕೆ ರಾಜ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದರಿಂದ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವ ಸಮಾರಂಭದ ಸಿದ್ಧತೆಗೆ ಹಿನ್ನಡೆಯಾದಂತಾಗಿದೆ.

2023ನೇ ಸಾಲಿನ ವಾರ್ಷಿಕ ಘಟಿಕೋತ್ಸವ ಸಮಾರಂಭವು ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ನಡೆಯ ಬೇಕಾಗಿತ್ತಾದರೂ, ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಮುಂದೂಡಲಾಗಿತ್ತು ಚುನಾವಣಾ ನೀತಿ ಸಂಹಿತೆ ಪೂರ್ಣಗೊಂಡು ಹೊಸ ಸರ್ಕಾರ ರಚನೆಯಾಗಿ ಉನ್ನತ ಶಿಕ್ಷಣ ಸಚಿವರೂ ಅಧಿಕಾರ ವಹಿಸಿಕೊಂಡಿದ್ದರಾದರೂ, ಘಟಿಕೋತ್ಸವಕ್ಕೆ ರಾಜ್ಯಪಾಲರ ದಿನಾಂಕ ಪಡೆಯಲು ಪ್ರಯತ್ನಿಸುತ್ತಿರುವಾಗಲೇ ಹೈಕೋರ್ಟ್ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅವರ ನೇಮಕಕ್ಕೆ ಮಧ್ಯಂತರ ತಡೆ ನೀಡಿದೆ.

ಪರಿಣಾಮ ವಿಶ್ವವಿದ್ಯಾನಿಲಯದ ದೈನಂದಿನ ಆಡಳಿತ, ಶೈಕ್ಷಣಿಕ ಚಟುವಟಿಕೆಗಳು, ಕಾರ್ಯಕ್ರಮಗಳಿಗೂ ಹಿನ್ನಡೆಯಾದಂತಾಗಿದ್ದು, ಸಭೆ–ಸಮಾರಂಭಗಳೂ ನಿಗದಿಯಾಗುತ್ತಿಲ್ಲ. ಅಲ್ಲದೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಸಿದ್ಧತೆ ನಡೆದು, ಗೌರವ ಡಾಕ್ಟರೇಟ್ ಪುರಸ್ಕಾರಕ್ಕೂ ಗಣ್ಯರ ಹೆಸರುಗಳನ್ನು ರಾಜ್ಯಪಾಲರ ಅನುಮೋದನೆಗೆ ರವಾನಿಸಲಾಗಿದೆ.

ಕುಲಪತಿಗಳ ನೇಮಕಕ್ಕೆ ಹೈಕೋರ್ಟ್ ತಡೆ ನೀಡಿ ಎರಡು ದಿನ ಕಳೆದರೂ, ಸರ್ಕಾರದಿಂದ ವಿಶ್ವವಿದ್ಯಾನಿಲಯದ ಕಾರ್ಯಾಲಯಕ್ಕೆ ಯಾವುದೇ ಸೂಚನೆ, ನಿರ್ದೇಶನ ಬಾರದ ಕಾರಣ ಕುಲಸಚಿವರು, ಸಿಂಡಿಕೇಟ್ ಮತ್ತು ಶೈಕ್ಷಣಿಕ ಮಂಡಳಿ ಸದಸ್ಯರಲ್ಲಿ ಮುಂದಿನ ಕಾರ್ಯಕ್ರಮಗಳ ಬಗ್ಗೆ ಗೊಂದಲ ಉಂಟಾಗಿದೆ ಎನ್ನಲಾಗಿದೆ.

ಆ ಬೆಳವಣಿಗೆಯಿಂದಾಗಿ ಪೂರ್ವ ನಿಗದಿಯಾಗಿದ್ದ ಸಭೆ–ಸಮಾರಂಭಗಳಿಗೆ ಪ್ರೊ. ಎನ್.ಕೆ.ಲೋಕನಾಥ್ ಅವರು ಗೈರು ಹಾಜರಾಗುತ್ತಿದ್ದಾರೆ. ಸರ್ಕಾರ ಹಂಗಾಮಿ ಕುಲಪತಿಗಳನ್ನು ನೇಮಿಸಿಲ್ಲ. ಪ್ರಭಾರ ಜವಾಬ್ದಾರಿಯನ್ನು ಬೇರೆಯವರಿಗೆ ನೀಡದ ಕಾರಣ ಮೈಸೂರು ವಿಶ್ವವಿದ್ಯಾನಿಲಯದ ಹಿರಿಯ ಅಧಿಕಾರಿಗಳು ಉನ್ನತ ಶಿಕ್ಷಣ ಇಲಾಖೆ ನಿರ್ದೇಶನಕ್ಕಾಗಿ ನಿರೀಕ್ಷಿಸುತ್ತಿದ್ದಾರೆ.

ಇಂಟೆಲ್ ಇಂಡಿಯಾ ಮುಖ್ಯಸ್ಥೆ ನಿವೃತಿ ರೈ ರಾಜೀನಾಮೆ

ನವದೆಹಲಿ, ಜೂ.23– ಇಂಟೆಲ್ ಇಂಡಿಯಾ ಮುಖ್ಯಸ್ಥೆ ನಿವೃತಿ ರೈ ಅವರು 29 ವರ್ಷಗಳ ಸುದೀರ್ಘ ಸೇವೆಯ ನಂತರ ಕಂಪನಿಗೆ ರಾಜೀನಾಮೆ ನೀಡಿದ್ದಾರೆ. ರೈ ಅವರು ಇನ್ವೆಸ್ಟ್ ಇಂಡಿಯಾದ MD ಮತ್ತು CEO ಆಗಿ ನೇಮಕಗೊಳ್ಳಲಿದ್ದಾರೆ.


1994ರಲ್ಲಿ ವಿನ್ಯಾಸ ಎಂಜಿನಿಯರ್ ಆಗಿ ಇಂಟೆಲ್‌ನಲ್ಲಿ ಕೆಲಸ ಆರಂಭಿಸಿದ ನಿವೃತಿ ರೈ ಅವರು ಇತ್ತೀಚಿಗೆ ಇಂಟೆಲ್ ಫೌಂಡ್ರಿ ಸೇವೆಗಳ ಭಾರತದ ಮುಖ್ಯಸ್ಥರಾಗಿ ಮತ್ತು ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ನಿವೃತಿ ಅವರ ನಾಯಕತ್ವದಲ್ಲಿ ಇಂಟೆಲ್ ಇಂಡಿಯಾ ಸಾಧಿಸಿದ ಅದ್ಭುತ ಪ್ರಗತಿಗಾಗಿ ನಾವು ಅವರಿಗೆ ಕೃತಜ್ಞರಾಗಿರುತ್ತೇವೆ ಎಂದು ಕಂಪನಿಯು ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದೆ. 1994ರಲ್ಲಿ ಇಂಟೆಲ್‌ನಲ್ಲಿ ವಿನ್ಯಾಸ ಎಂಜಿನಿಯರ್ ಆಗಿ ಕೆಲಸ ಆರಂಭಿಸಿದ ನಿವೃತಿ ರೈ ಅವರು 29 ವರ್ಷಗಳ ಅವಧಿಯಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿ ಇಂದು ಕಂಪನಿ ಮುಖ್ಯಸ್ಥೆ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರ ನಡೆದಿದ್ದಾರೆ.

ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ಮೈಸೂರು,ಜೂ.23–ಮೈಸೂರು ವಿವಿಗೆ ಸಂಯೋಜನೆಗೊಂಡಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನ ವತಿಯಿಂದ ಬ್ಯಾಚುಲರ್ ಆಫ್ ವಿಶ್ಯುಯಲ್ ಆರ್ಟ್ಸ್ (ಬಿವಿಎ) ದೃಶ್ಯಕಲೆಯಲ್ಲಿ 2022–24ನೇ ಶೈಕ್ಷಣಿಕ ಸಾಲಿಗೆ ಬಾಕಿ ಇರುವ ಸೀಟುಗಳಿಗೆ ಮಾತ್ರ ಪ್ರಥಮ ಬಿವಿಎ ಪದವಿ ಪ್ರವೇಶಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಆಸಕ್ತರು https://uucms.karnataka.gov.in, https://www.cavamysore.karnataka.gov.in ಅರ್ಜಿ ಸಲ್ಲಿಸಲು ಜೂ.28 ಕಡೇ ದಿನಾಂಕ. ಪ್ರವೇಶಾತಿಗೆ ಪರೀಕ್ಷೆ ಜೂ.30 ರಂದು ನಡೆಯಲಿದೆ. ಮಾಹಿತಿಗೆ ದೂ.0821–2438931 ಸಂಪರ್ಕಿಸಿ.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ರಾಮಸ್ವಾಮಿ ವೃತ್ತದ ಸುತ್ತಮುತ್ತ ಶೌಚಾಲಯವೇ ಇಲ್ಲವಲ್ಲ ಸ್ವಾಮಿ

● ಚೇತನ್ ನರಸಿಂಹ ವಿ


ಮೈಸೂರು, ಜೂ. 23– ಮೈಸೂರು ಸ್ವಚ್ಛ ನಗರಿ, ಪಾರಂಪರಿಕ ನಗರಿ, ಸಾಂಸ್ಕೃತಿಕ ನಗರಿ ಎಂಬೆಲ್ಲಾ ಬಿರುದುಗಳನ್ನು ಮುಡಿಗೇರಿಸಿಕೊಂಡಿದೆ. ಆದರೆ ನಗರದ ಕೆಲವು ಭಾಗಗಳಲ್ಲಿ ಅಗತ್ಯ ಮೂಲ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತಿದೆ. ಇದಕ್ಕೆ ಸಾಕ್ಷಿ ಇಲ್ಲಿದೆ ನೋಡಿ. ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಮಸ್ವಾಮಿ ವೃತ್ತದಲ್ಲಿ ಅದೇಕೋ ಶೌಚಾಲಯ ನಿರ್ಮಾಣಕ್ಕೆ ಪದೇ ಪದೆ ವಿಘ್ನ ಎದುರಾಗುತ್ತಿದೆ.

ಕೆಲವು ವರ್ಷಗಳಿಂದ ಹಲವು ಜನಪ್ರತಿನಿಧಿಗಳು ಇಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ ಮುಂದಾದರೂ, ನಿರ್ಮಾಣ ಕೆಲಸ ಅರ್ಧಕ್ಕೆ ನಿಂತು ಬಿಡುತ್ತಿದೆ. ಅದ್ಯಾವ ಪ್ರಭಾವಿಗಳ ಕೈವಾಡ ಇಲ್ಲಿದೆಯೋ "ರಾಮ"ನೇ ಬಲ್ಲ ಸ್ವಾಮಿ. ಇತ್ತೀಚೆಗೆ ರಾಮಸ್ವಾಮಿ ಸಿಗ್ನಲ್ ಪಕ್ಕದಲ್ಲಿ ಶೌಚಾಲಯ ನಿರ್ಮಾಣಕ್ಕೆ ಪಾಲಿಕೆಯಿಂದ ಗುದ್ದಲಿ ಪೂಜೆ ನೆರವೇರಿಸಿ, ಅಡಿಪಾಯ ಹಾಕುವ ಕಾರ್ಯಕ್ಕೆ ಮುಂದಾಗಿತ್ತು ಆದರೆ ಇದ್ದಕ್ಕಿದ್ದ ಹಾಗೇ ಆದೇಶ ರದ್ದಾಗಿದೆ. ಇಲ್ಲಿಯ ವರೆಗೆ ಸುಮಾರು 10 ಬಾರಿ ಪಾಲಿಕೆಯಿಂದ ರದ್ದಾಗಿದೆ ಕಾರಣ ಮಾತ್ರ ತಿಳಿದುಬಂದಿಲ್ಲ ಎಂದು ಸ್ಥಳೀಯ ನಿವಾಸಿಗರು 'ಮೈಸೂರು ಮಿತ್ರ'ನಿಗೆ ದೂರಿದರು.

ಇಲ್ಲಿ ಸುಮಾರು 500 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಸಾರ್ವಜನಿಕ ಶೌಚಾಲಯವಿಲ್ಲದ ಕಾರಣ ಗ್ರಾಮೀಣ ಹಾಗೂ ಇನ್ನಿತರ ಭಾಗಗಳಿಂದ, ಜಿಲ್ಲಾ ಪಂಚಾಯಿತಿ, ಕೋರ್ಟ್ ಹಾಗೂ ಇತರೆ ಕೆಲಸಗಳ ನಿಮಿತ್ತ ಬರುವ ಸಾರ್ವಜನಿಕರು ಸಾಕಷ್ಟು ಪರದಾಡುತ್ತಿದ್ದಾರೆ. ಅವರು ಕೋರ್ಟ್ ಬಳಿಗೆ ತೆರಳಿ ಶೌಚಾಲಯ ಉಪಯೋಗಿಸಬೇಕು. ಮುಖ್ಯವಾಗಿ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ಸಾಕಷ್ಟು ತೊಂದರೆಯಾಗಿದೆ.

ಜೆಎಲ್‌ಬಿ ರಸ್ತೆಯ ಎಡಭಾಗದಲ್ಲಿ ಖಾಸಗಿ ಒಡೆತನದ 3 ಎಕರೆ ಪ್ರದೇಶ ಪಾಳುಬಿದ್ದಿದೆ. ಅದರಲ್ಲಿ ಗಿಡ–ಗಂಟಿಗಳು ಮನುಷ್ಯನೆತ್ತರಕ್ಕೆ ಬೆಳೆದು ನಿಂತಿವೆ. ಹಾವುಗಳ ಸ್ಥಾನವಾಗಿದೆ. ಅಂತಹ ದುರ್ಗಮ ಪ್ರದೇಶಕ್ಕೆ ಇಲ್ಲಿನ ಬೀದಿಬದಿ ವ್ಯಾಪಾರಸ್ಥ ಮಹಿಳೆಯರು ಹಾಗೂ ಪುರುಷರು ಬಹಿರ್ದೆಸೆಗೆ ಹೋಗುತ್ತಾರೆ. ಅಲ್ಲೇನಾದರೂ ಹೆಚ್ಚು ಕಮ್ಮಿ ಆದರೆ ಯಾರು ಹೊಣೆ ಹೇಳಿ? ಮೊನ್ನೆ ಒಬ್ಬನ ತಲೆ ಮೇಲೆಯೇ ಹಾವು ಬಿದ್ದು ಅವಾಂತರವಾಗಿತ್ತು. ಕಾಲೇಜು ವಿದ್ಯಾರ್ಥಿಗಳು ಈ ಪ್ರದೇಶದಲ್ಲಿ ಕಾಲ ಕಳೆಯುತ್ತಿರುವುದನ್ನು ನಾವು ಕಂಡಿದ್ದೇವೆ. ಅವ್ಯವಸ್ಥೆಯ ತಾಣವಾಗಿ ಮಾರ್ಪಟ್ಟಿದೆ. ಹಾಗಾಗಿ ಈ ಪ್ರದೇಶವನ್ನು ಸಂಬಂಧಪಟ್ಟವರು ಸ್ವಚ್ಛಗೊಳಿಸಬೇಕು. ಅಲ್ಲದೇ ಪಾಲಿಕೆ ಕೂಡ ಈ ವೃತ್ತದ ವ್ಯಾಪ್ತಿಯಲ್ಲಿ ಎಲ್ಲಾದರೂ ಒಂದು ಕಡೆ ಶೌಚಾಲಯ ನಿರ್ಮಾಣ ಮಾಡಬೇಕು ಎಂದು ಸ್ಥಳೀಯ ವ್ಯಾಪಾರಿಯೊಬ್ಬರು ಆಗ್ರಹಿಸಿದ್ದಾರೆ.

ಕಾಮಗಾರಿ ಅಪೂರ್ಣ; ವಾಹನ ಸವಾರರಿಗೆ ಕಂಟಕ



ಸಾರ್ವಜನಿಕ ಶೌಚಾಲಯ ಸಮಸ್ಯೆ ಒಂದೆಡೆಯಾದರೆ ಮತ್ತೊಂದೆಡೆ ರಾಮಸ್ವಾಮಿ ವೃತ್ತದಿಂದ ಹಾರ್ಡ್ವಿಕ್ ಶಾಲೆ ನಡುವೆ ನೂತನವಾಗಿ ನಿರ್ಮಾಣವಾಗುತ್ತಿರುವ ಬಸ್ ನಿಲ್ದಾಣದ ಮುಂದೆ ಬೃಹತ್ ಗಾತ್ರದ ಕಲ್ಲುಗಳು, ಮಣ್ಣುಗುಡ್ಡೆಯನ್ನು ಹಾಗೇ ಬಿಡಲಾಗಿದೆ. ಇದರಿಂದಾಗಿ ರಾತ್ರಿ ವೇಳೆ ವಾಹನ ಚಲಾಯಿಸುವ ಸವಾರರಿಗೆ ಆತಂಕ ಎದುರಾಗಿದೆ. ಕಲ್ಲುಗಳು ಇರುವ ಕಡೆ ಬ್ಯಾರಿಕೇಡ್ ಕೂಡ ಹಾಕದೇ, ಯಾವುದೇ ಸೂಚನಾ ಫಲಕ ಅಳವಡಿಸದೇ ಪಾಲಿಕೆ ನಿರ್ಲಕ್ಷ್ಯ ವಹಿಸಿದೆ. ಕೂಡಲೇ ಈ ಬೃಹತ್ ಗಾತ್ರದ ಕಲ್ಲು ಮಣ್ಣುಗುಡ್ಡೆ ತೆರವು ಮಾಡದಿದ್ದಲ್ಲಿ ಅಪಾಯ ಸಂಭವಿಸಬಹುದಾಗಿದ್ದು, ಅಪಾಯಕ್ಕೂ ಮುನ್ನ ಪಾಲಿಕೆ ಅಧಿಕಾರಿಗಳು ಎಚ್ಚೆತ್ತುಕೊಂಡು ತೆರವು ಕಾರ್ಯಕ್ಕೆ ಮುಂದಾಗಬೇಕಿದೆ.

ಹಲವು ಕಾಮಗಾರಿ ಆರಂಭವಾಗಿದ್ದರೂ ರದ್ದು, ಪ್ರಭಾವಿಗಳ ಕೈವಾಡ?

ಈಗಾಗಲೇ ರಾಮಸ್ವಾಮಿ ವೃತ್ತದಲ್ಲಿ ಶೌಚಾಲಯ ನಿರ್ಮಾಣ ಬೇಡಿಕೆ ಕುರಿತಂತೆ ನನ್ನ ಗಮನಕ್ಕೆ ಬಂದಿದೆ. ಶೀಘ್ರದಲ್ಲೇ ಅಲ್ಲೊಂದು ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ ಮುಂದಾಗುತ್ತೇವೆ. ಸ್ಥಳ ನಿಗದಿಯಾಗಿ ಆದೇಶ ರದ್ದಾದ ಬಗ್ಗೆ ಮಾಹಿತಿ ಇರಲಿಲ್ಲ. ಹಾಗಾಗಿ ಅಧಿಕಾರಿಗಳಿಂದ ಮಾಹಿತಿ ಪಡೆದು ತಕ್ಷಣವೇ ಅಗತ್ಯ ಕ್ರಮಕ್ಕೆ ಸೂಚಿಸುತ್ತೇನೆ.

-**ಕೆ.ಹರೀಶ್ ಗೌಡ,** ಶಾಸಕರು, ಚಾಮರಾಜ ವಿಧಾನಸಭಾ ಕ್ಷೇತ್ರ

ನನ್ನ ಅಧಿಕಾರವಧಿಯಲ್ಲಿ ಎರಡು ಬಾರಿ ಸ್ಥಳ ನಿಗದಿ ಮಾಡಿದ್ದೇವೆ. ಆದರೆ ವಿವಾದ ಉಂಟಾದ ಹಿನ್ನೆಲೆಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ ತೊಂದರೆಯಾಗಿದೆ ಶೀಘ್ರದಲ್ಲೇ ಪರ್ಯಾಯ ವ್ಯವಸ್ಥೆ ಮಾಡಿ, ಉನ್ನತ ತಂತ್ರಜ್ಞಾನ, ಗುಣಮಟ್ಟ ಹಾಗೂ ಟೌನ್‌ಹಾಲ್ ಬಳಿ ನಿರ್ಮಿಸಿರುವಂತೆ ಹೈಟೆಕ್ ಮಾದರಿಯಲ್ಲಿ ರಾಮಸ್ವಾಮಿ ವೃತ್ತದಲ್ಲೂ ಶೌಚಾಲಯ ನಿರ್ಮಾಣ ಮಾಡುತ್ತೇವೆ.

-**ಶಿವಕುಮಾರ್,** ಮೇಯರ್

ಇಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲದೇ ಸುಮಾರು ದೂರ ನಡೆದುಕೊಂಡು ಹೋಗಿ ಬರುತ್ತೇವೆ. ಇಲ್ಲಿ ಅಂಗಡಿ ನೋಡಿಕೊಳ್ಳಲು ಯಾರು ಇರುವುದಿಲ್ಲ. ಮಹಿಳೆಯರಿಗೆ ತುಂಬಾ ತೊಂದರೆಯಾಗಿದೆ. ಹಾಗಾಗಿ ಇಲ್ಲೇ ಹತ್ತಿರದಲ್ಲಿ ಶೌಚಾಲಯ ನಿರ್ಮಿಸಿಕೊಟ್ಟರೆ ತುಂಬಾ ಅನುಕೂಲವಾಗಲಿದೆ.

-**ನಾಗಮ್ಮ,** ರಸ್ತೆಬದಿ ವ್ಯಾಪಾರಿ.

ಕಾಂಗ್ರೆಸ್ ದ್ವೇಷದ ರಾಜಕಾರಣ ರಾಜ್ಯದ ಹಿತಾಸಕ್ತಿಗೆ ಮಾರಕ

ಬಿಜೆಪಿ ಸಮಾವೇಶದಲ್ಲಿ ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಕಿಡಿ



ಮಂಡ್ಯ, ಜೂ.23– ಈ ಹಿಂದಿನ ಬಿಜೆಪಿ ಸರ್ಕಾರ ಮತಾಂತರ ನಿಷೇಧ, ಗೋಹತ್ಯೆ ನಿಷೇಧ, ಪಠ್ಯ–ಪುಸ್ತಕಗಳ ಪರಿಷ್ಕರಣೆ ಸೇರಿದಂತೆ ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿತ್ತು. ಆದರೆ ಪ್ರಸ್ತುತ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ಬಿಜೆಪಿ ಸರ್ಕಾರದ ಎಲ್ಲಾ ಯೋಜನೆಗಳನ್ನು ರದ್ದುಪಡಿಸುವ ಮೂಲಕ ದ್ವೇಷದ ರಾಜಕಾರಣಕ್ಕೆ ಮುಂದಾಗಿದ್ದು, ರಾಜ್ಯದ ಹಿತಾಸಕ್ತಿಗೆ ಮಾರಕವಾಗಲಿದೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಕಿಡಿಕಾರಿದರು.

ಶುಕ್ರವಾರ ನಗರದ ಕಾಳಿಕಾಂಬ ಸಮುದಾಯ ಭವನದಲ್ಲಿ ನಡೆದ ಜಿಲ್ಲಾ ಬಿಜೆಪಿ ಕಾರ್ಯಕರ್ತರ ಸಮಾವೇಶ ಹಾಗೂ ಕೇಂದ್ರ ಸರ್ಕಾರದ 9ನೇ ವರ್ಷದ ಆಡಳಿತದ ಸಂಭ್ರಮಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ದೇಶದ ಜನರು ನೆಮ್ಮದಿ, ಶಾಂತಿಯಿಂದ ಜೀವನ ನಡೆಸಲು ಪ್ರಧಾನಿ ಮೋದಿ ಕಾರಣ. ಭಯೋತ್ಪಾದನೆ ನಿಗ್ರಹ, ತ್ರಿವಳಿ ತಲಾಕ್ ನಿಷೇಧ, ಆರ್ಟಿಕಲ್ 370 ಜಾರಿ, ಕಾಶ್ಮೀರ ಸಮಸ್ಯೆ ನಿವಾರಣೆ ಹೀಗೆ ಅನೇಕ ಕೆಲಸಗಳು ಬಿಜೆಪಿಯಿಂದ ಆಗಿದ್ದು, ಇದರಿಂದ ದೇಶದ ಜನತೆಗೆ ಅನುಕೂಲವಾಗಿದೆ. ಆದರೆ ಕಾಂಗ್ರೆಸ್ ರಾಜ್ಯದಲ್ಲಿ ಜಾತಿ ಸಂಘರ್ಷದ ಮೂಲಕ ರಾಜ್ಯ ವಿಭಜನೆಗೆ ಮುಂದಾಗಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳಲ್ಲೂ ಬಿಜೆಪಿಯನ್ನು ಗೆಲ್ಲಿಸುವ ಮೂಲಕ ಮೋದಿ ಅವರನ್ನು 3ನೇ ಬಾರಿಗೆ ಪ್ರಧಾನಿ ಮಾಡಬೇಕು ಎಂದು ಮನವಿ ಮಾಡಿದರು.

ಪ್ರಧಾನಿ ಮೋದಿ ಅವರ 9 ವರ್ಷಗಳ ಆಡಳಿತದಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ. ಮುಂದಿನ 5 ವರ್ಷ ಕೇಂದ್ರದಲ್ಲಿ ನಾವೇ ಅಧಿಕಾರಕ್ಕೆ ಬರಲಿದ್ದೇವೆ. ಬೆಂಗಳೂರು, ಮಂಡ್ಯ ಸೇರಿದಂತೆ ಈ ಭಾಗದ ಜನತೆ ಅಮೆರಿಕಾಗೆ ಹೋಗಲು ವೀಸಾ ಪಡೆಯಲು ಪರದಾಡಬೇಕಿತ್ತು. ಇದೀಗ ಬೆಂಗಳೂರಿನಲ್ಲೇ ವೀಸಾ ಸಿಗಲಿದೆ. ಇದು ಹೆಮ್ಮೆಯ ವಿಚಾರ ಎಂದರು. ಬಿಜೆಪಿಗೆ ಈ ಬಾರಿ ಕಡಿಮೆ ಸೀಟು ಬಂದಿರಬಹುದು. ಆದರೆ ಪಕ್ಷಕ್ಕೆ ಸೋಲು ಮೊದಲೇನಲ್ಲ. ಬಿಜೆಪಿ ಕಟ್ಟಿದ ಅಟಲ್ ಬಿಹಾರಿ ವಾಜಪೇಯಿ ಅವರೇ ಸೋತಿದ್ದಾರೆ. ಈ ವೇಳೆ ಅವರ ಸೋಲು ಅರಗಿಸಿಕೊಳ್ಳಲು ಸಾಧ್ಯವಾಗದೇ ಶಿವಮೊಗ್ಗ ಮೂಲದ ಕಾರ್ಯಕರ್ತ ಆತ್ಮಹತ್ಯೆ ಮಾಡಿಕೊಂಡ. ಆತನ ಕುಟುಂಬಕ್ಕೆ ಸಾಂತ್ವನ ಹೇಳಲು ವಾಜಪೇಯಿ ಬಂದಾಗ ಭವಿಷ್ಯ ದಲ್ಲಿ ಬಿಜೆಪಿ ದೇಶದಲ್ಲಿ ಸತತವಾಗಿ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ. ಕನಿಷ್ಠ 10 ರಾಜ್ಯದಲ್ಲಿ ನಾವು ಅಧಿಕಾರ ನಡೆಸುತ್ತೇವೆ ಎಂದು ಭವಿಷ್ಯ ನುಡಿದಿದ್ದರು. 2014ರಲ್ಲಿ 334 ಸೀಟು ಗೆದ್ದು ಮೋದಿ ಅಧಿಕಾರಕ್ಕೆ ಬಂದರು. 2019ರಲ್ಲೂ ನಾವು ಅಧಿಕಾರ ಹಿಡಿದೆವು. 10ಕ್ಕೂ ಹೆಚ್ಚು ರಾಜ್ಯದಲ್ಲಿ ಅಧಿಕಾರ ಹಿಡಿದಿದ್ದೇವೆ. ಹೀಗಾಗಿ ಸೋಲು ಸ್ವಾಭಾವಿಕ ಎಂದು ಕಾರ್ಯಕರ್ತರನ್ನು ಹುರಿದುಂಬಿಸಿದರು.

80ರ ದಶಕದಲ್ಲಿ ಕರ್ನಾಟಕದಲ್ಲಿ ಯಡಿಯೂರಪ್ಪ ಸೇರಿದಂತೆ ಕೇವಲ ಇಬ್ಬರು ಶಾಸಕರಿದ್ದರು. ಆದರೆ ಯಡಿಯೂರಪ್ಪ ಅವರ ದಶಕಗಳ ಹೋರಾಟದ ಫಲವಾಗಿ ಬಿಜೆಪಿ 8 ವರ್ಷ ಆಡಳಿತ ನಡೆಸಿದೆ. ಮುಂದೆಯೂ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ. ಪ್ರಸ್ತುತ 65 ಶಾಸಕರಿದ್ದಾರೆ ಎಂದರು.

ಈ ಬಾರಿಯ ಚುನಾವಣೆಯಲ್ಲಿ ಸಮರ್ಪಕ ತಂತ್ರಗಾರಿಕೆ ಮಾಡುವಲ್ಲಿ ನಾವು ವಿಫಲವಾದೆವು. ಕಾಂಗ್ರೆಸ್‌ನ ಗ್ಯಾರಂಟಿಗಳು ಜನರನ್ನು ಮೋಡಿ ಮಾಡಿದವು. ಆದರೆ ಆ ಗ್ಯಾರಂಟಿಗಳನ್ನು ಈಡೇರಿಸುವಲ್ಲಿ ಕಾಂಗ್ರೆಸ್ ಸಂಪೂರ್ಣ ವಿಫಲವಾಗಿದೆ. ಗ್ಯಾರಂಟಿಗಳನ್ನು ಈಡೇರಿಸಲಾಗದೇ ಮುಖ್ಯಮಂತ್ರಿ ಸಿದ್ದರಾಮಯ್ಯ ನರಳಾಡುತ್ತಿದ್ದು, ಅಧಿಕಾರವನ್ನು ಡಿ.ಕೆ.ಶಿವಕುಮಾರ್‌ಗೆ ಬಿಟ್ಟು ಬಿಡಬೇಕಿತ್ತು ಎಂದು ಸಿದ್ದರಾಮಯ್ಯಗೆ ಅನಿಸಿದೆ ಎಂದು ಲೇವಡಿ ಮಾಡಿದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥ್ ನಾರಾಯಣ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಮಾತನಾಡಿದರು. ವೇದಿಕೆಯಲ್ಲಿ ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ಮಾಜಿ ಶಾಸಕರಾದ ನಿರಂಜನ್ ಕುಮಾರ್, ಪ್ರೊ.ಮಲ್ಲಿಕಾರ್ಜುನಪ್ಪ, ಪರಾಜಿತ ಅಭ್ಯರ್ಥಿಗಳಾದ ಅಶೋಕ್ ಜಯರಾಂ, ಸಚ್ಚಿದಾನಂದ, ಮುನಿರಾಜು, ಎಸ್.ಪಿ.ಸ್ವಾಮಿ, ಡಾ.ಇಂದ್ರೇಶ್, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ. ಸಿದ್ದರಾಮಯ್ಯ, ಮುಖಂಡರಾದ ಕೆ.ಎಸ್.ನಂಜುಂಡೇಗೌಡ, ವಿದ್ಯಾ, ನಾಗಾನಂದ್ ಸೇರಿದಂತೆ ಹಲವರಿದ್ದರು.

ಜೆಡಿಎಸ್ ಜೊತೆ ಹೊಂದಾಣಿಕೆ ಹೈಕಮಾಂಡ್‌ಗೆ ಬಿಟ್ಟ ವಿಚಾರ

ಮಂಡ್ಯ, ಜೂ.23– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜೊತೆ ಹೊಂದಾಣಿಕೆ ಬಿಜೆಪಿ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಇಡೀ ದೇಶದ ರಾಜಕಾರಣ ನೋಡಿಕೊಂಡು ಹೊಂದಾಣಿಕೆ ಬಗ್ಗೆ ಪಕ್ಷ ರಾಷ್ಟ್ರ ಮಟ್ಟದಲ್ಲಿ ತೀರ್ಮಾನ ಮಾಡುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಬಾರಿ ಬಿಜೆಪಿ ಓರ್ವ ಬೆಂಬಲಿತ ಅಭ್ಯರ್ಥಿ ಸೇರಿ 26 ಸ್ಥಾನಗಳು ಗೆದ್ದಿದ್ದೇವು. ಹೊಂದಾಣಿಕೆ ಅಗತ್ಯದ ಬಗ್ಗೆ ಪಕ್ಷ ನಮ್ಮನ್ನು ಕೇಳುತ್ತದೆ. ಆಗ ಆ ಬಗ್ಗೆ ಮಾತನಾಡುತ್ತೇವೆ. ಮಧ್ಯಮಗಳ ಮುಂದೆ ಎಲ್ಲಾ ವಿಚಾರ ಮಾತನಾಡಲು ಆಗಲ್ಲ ಎನ್ನುವ ಮೂಲಕ ಪರೋಕ್ಷವಾಗಿ ಜೆಡಿಎಸ್ ಜೊತೆಗಿನ ಹೊಂದಾಣಿಗೆ ಬಗ್ಗೆ ಸುಳಿವು ನೀಡಿದರು.

ವಿಧಾನಸಭಾ ಚುನಾವಣೆಗಾಗಿ ಮಾಡಿದ್ದ ಹೊಸ ಪ್ರಯೋಗದಲ್ಲಿ ನಾವು ಯಶಸ್ಸು ಕಾಣಲಿಲ್ಲ. ಗುಜರಾತ್, ಯುಪಿಯಲ್ಲಿ ನಡೆದ ಪ್ರಯೋಗ ದಕ್ಷಿಣ ಭಾರತದಲ್ಲಿ ನಡೆಯಲಿಲ್ಲ. ಅದು ನೂರಕ್ಕೆ ನೂರು ಸತ್ಯ. ಯಡಿಯೂರಪ್ಪರನ್ನ ಬಿಜೆಪಿ ಹೈಕಮಾಂಡ್ ಕಡೆಗಣಿಸಿದೆ ಎಂಬುದು ಸುಳ್ಳು. ಬದಲಿಗೆ ಸೆಂಟ್ರಲ್ ಪಾರ್ಲಿಮೆಂಟ್ ಬೋರ್ಡ್‌ನ ಸದಸ್ಯರನ್ನಾಗಿ ಮಾಡಿದೆ ಎಂದರು.

ಅಕ್ಕಿ ನೀಡಲು ಕೇಂದ್ರ ಸರ್ಕಾರ ಅಡ್ಡಿ ಎಂಬ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿ, ಕೇಂದ್ರ ಸರ್ಕಾರ ಎಫ್‌ಸಿಐ ನೀತಿಯನ್ನು ಒಂದು ರಾಜ್ಯಕ್ಕೆ ಮಾತ್ರ ಮಾಡಿಲ್ಲ. ಬಿಜೆಪಿ ಅಧಿಕಾರದಲ್ಲಿರುವ 10–12 ರಾಜ್ಯಗಳಿಗೂ ಇದೇ ನೀತಿಯನ್ನು ಮಾಡಿದೆ. ಇದನ್ನು ಸಾಮಾನ್ಯ ಜನ ಅರ್ಥ ಮಾಡಿಕೊಳ್ಳಬೇಕು. ಫುಡ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ಆಹಾರ ವಸ್ತುಗಳನ್ನು ಸಂಗ್ರಹಿಸುವುದು ಕೇಂದ್ರ ಸರ್ಕಾರದ ಕರ್ತವ್ಯ. ಅತಿವೃಷ್ಟಿ, ಅನಾವೃಷ್ಟಿ ನೋಡಿಕೊಂಡು ಕೇಂದ್ರ ಈ ತೀರ್ಮಾನ ಮಾಡಿದೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮುನ್ನವೇ 10 ಕೆಜಿ ಅಕ್ಕಿ ಕೊಡುತ್ತೇವೆಂದು ಹೇಳಿ ಇದೀಗ ಕೇಂದ್ರದ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ ಎಂದು ಕಿಡಿಕಾರಿದರು.

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಅವೈಜ್ಞಾನಿಕ ಎಂಬ ವಿಚಾರದಲ್ಲಿ ಖಂಡಿತವಾಗಿ ಸ್ವಲ್ಪ ಸತ್ಯಾಂಶವಿದೆ ಇವತ್ತಿಗೂ ಕೂಡ ಟೋಲ್ ವ್ಯವಸ್ಥೆ ಸರಿಯಿಲ್ಲ. ಎಂಟ್ರಿ, ಎಕ್ಸಿಟ್ ಸರಿಯಾಗಿ ಮಾಡಲು ಆಗಿಲ್ಲ. ಎಲ್ಲವನ್ನು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಗಮನಕ್ಕೆ ತಂದಿದ್ದೇವೆ. ಸಮಗ್ರ ಅಧ್ಯಯನ ಮಾಡಿ ಸರಿಪಡಿಸುವಂತೆ ಒತ್ತಾಯಿಸಿದ್ದೇವೆ. ಹೆದ್ದಾರಿ ಸರಿಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ವ್ಯತ್ಯಾಸಗಳನ್ನು ಸರಿಮಾಡುವ ಕೆಲಸ ಆಗುತ್ತದೆ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೇರಲು ವಿ.ಸೋಮಣ್ಣ ಆಸೆ ವಿಚಾರದ ಬಗ್ಗೆ ಮಾತನಾಡಿ, ಕೇಳಿದವರಿಗೆಲ್ಲ ಅಧ್ಯಕ್ಷ ಸ್ಥಾನ ಕೊಡಲು ಆಗಲ್ಲ. ತುಂಬಾ ಜನ ನಮಗೆ ಕೊಡಿ ಅಂತ ಕೇಳುತ್ತಾರೆ. ಹಾಗಂತ ಎಲ್ಲರಿಗೂ ಕೊಡೋಕೆ ಆಗೋದಿಲ್ಲ. ರಾಜಕೀಯ ವಿದ್ಯಮಾನ, ವ್ಯತ್ಯಾಸಗಳನ್ನು ಸರಿಮಾಡುವ ಒಬ್ಬ ಯಶಸ್ವಿ ಅಧ್ಯಕ್ಷನನ್ನು ಪಕ್ಷ ಕೊಡಬಹುದು ಎಂದರು.

ಜೂ.27, ಕೆಂಪೇಗೌಡ ಜಯಂತಿ



ಮಂಡ್ಯ, ಜೂ.23– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಹಯೋಗದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಜೂ.27 ರಂದು ಬೆಳಗ್ಗೆ 11 ಗಂಟೆಗೆ ನಗರದ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಶ್ರೀಪುರುಷೋತ್ತಮಾನಂದನಾಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ, ಎಂಎಲ್‌ಸಿಗಳಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ.ಮಂಜು, ಕೆ.ಎಂ.ಉದಯ್ ಭಾಗವಹಿಸಲಿದ್ದಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಶೇಷ ಆಯುಕ್ತ ಜಯರಾಂ ರಾಯಪುರ ಕೆಂಪೇಗೌಡರ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಹಲಗೂರು ಪ್ರೌಢಶಾಲೆಯಲ್ಲಿ ಕಳ್ಳತನ

ಹಲಗೂರು, ಜೂ.23– ಶಾಲಾ ಕೊಠಡಿ ಬಾಗಿಲು ಮುರಿದು ಒಳನುಗ್ಗಿರುವ ದುಷ್ಕರ್ಮಿಗಳು ಸಾವಿರಾರು ರೂ. ಮೌಲ್ಯದ 2 ಯುಪಿಎಸ್ ಬ್ಯಾಟರಿ, ಡಿವಿಆರ್ ಹಾಗೂ ಕ್ರೀಡಾ ಸಾಮಗ್ರಿಗಳನ್ನು ಕಳವು ಮಾಡಿರುವ ಘಟನೆ ಇಲ್ಲಿನ ಹಲಗೂರು–ಮದ್ದೂರು ರಸ್ತೆಯ ಹಲಗೂರು ಪ್ರೌಢಶಾಲೆಯಲ್ಲಿ ಗುರುವಾರ ರಾತ್ರಿ ನಡೆದಿದೆ.

ಈ ಸಂಬಂಧ ಶಾಲೆಯ ಮುಖ್ಯ ಶಿಕ್ಷಕ ಹೆಚ್.ಶಿವರಾಮು ಹಲಗೂರು ಪೊಲೀಸ್ ಠಾಣೆಗೆ 85 ಸಾವಿರ ಮೌಲ್ಯದ 2 ಯುಪಿಎಸ್ ಬ್ಯಾಟರಿ, ಡಿವಿಆರ್ ಹಾಗೂ ಕ್ರೀಡಾ ಸಾಮಗ್ರಿಗಳನ್ನು ದುಷ್ಕರ್ಮಿಗಳು ಕಳವು ಮಾಡಿದ್ದಾರೆ ಎಂದು ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಸಿಪಿಐ ಶ್ರೀಧರ್, ಎಸ್‌ಐ ಮಹೇಂದ್ರ ಶ್ವಾನದಳ, ಬೆರಳಚ್ಚು ತಜ್ಞರೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ತನಿಖೆ ಕೈಗೊಂಡಿದ್ದಾರೆ.

ಅನಾರೋಗ್ಯ: ಕೆ.ಆರ್.ಪೇಟೆ ಮೂಲದ ಯೋಧ ಶ್ರೀನಗರದಲ್ಲಿ ಸಾವು



ಕೆ.ಆರ್.ಪೇಟೆ, ಜೂ.23– ಜಮ್ಮು–ಕಾಶ್ಮೀರದ ಗಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ತಾಲೂಕಿನ ಕಿಕ್ಕೇರಿ ಗ್ರಾಮದ ಯೋಧರೊಬ್ಬರು ಅನಾರೋಗ್ಯದಿಂದ ಮೃತಪಟ್ಟಿರುವ ಘಟನೆ ಶುಕ್ರವಾರ ಬೆಳಗಿನ ಜಾವ 4.35 ಗಂಟೆ ಸಮಯದಲ್ಲಿ ಜರುಗಿದೆ.

ಕಿಕ್ಕೇರಿ ಗ್ರಾಮದ ಕಿಕ್ಕೇರಮ್ಮನ ದೇವಾಲಯದ ಹಿಂಭಾಗದಲ್ಲಿ ವಾಸ ವಿರುವ ಗ್ರಾಪಂ ಸದಸ್ಯ ಪ್ರಕಾಶ್ ಮತ್ತು ಭಾರತಿ ದಂಪತಿ ಪುತ್ರ ಜನಾರ್ಧನ್‌ಗೌಡ(30) ಮೃತ ಯೋಧ. 2014ರಲ್ಲಿ ಭಾರತೀಯ ಸೇನೆಗೆ ಯೋಧನಾಗಿ ಆಯ್ಕೆಯಾಗಿದ್ದ ಜನಾರ್ಧನ್ ಗೌಡ ಜಮ್ಮು–ಕಾಶ್ಮೀರದ ಶ್ರೀನಗರದ ಗಡಿಯಲ್ಲಿ ಕಳೆದ 9 ವರ್ಷಗಳಿಂದ ಕರ್ತವ್ಯ ನಿರ್ವಹಿಸು ತ್ತಿದ್ದರು. ಕಳೆದ ಹಲವು ದಿನಗಳಿಂದ ನ್ಯುಮೋ ನಿಯಾ ಕಾಯಿಲೆಯಿಂದ ಬಳಲುತ್ತಿದ್ದ ಜನಾರ್ಧನ್ ಅವರಿಗೆ ಶ್ರೀನಗರ ಸೇನಾ ಆಸ್ಪತ್ರೆ ಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಚಂಢೀಗಡದ ಕಮಾಂಡ್ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಈ ವಿಚಾರ ವನ್ನು ಸಹೋದರ ಮಹೇಂದ್ರ ಅವರಿಗೆ ತಿಳಿಸಿದ ಹಿನ್ನೆಲೆಯಲ್ಲಿ ಕಳೆದ ಒಂದು ವಾರದ ಹಿಂದೆ ಚಂಢೀಗಡ ಆಸ್ಪತ್ರೆಗೆ ಹೋಗಿದ್ದು ಸಹೋದರನ ಆರೈಕೆಯಲ್ಲಿ ನಿರತರಾಗಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಯೋಧ ಜನಾರ್ಧನ್ ಶುಕ್ರವಾರ ಮುಂಜಾನೆ ಹೃದಯಾಘಾತದಿಂದ ಇಹಲೋಕ ತ್ಯಜಿಸಿದ್ದಾರೆ ಎಂದು ಸೇನೆ ಅಧಿಕಾರಿಗಳು ಮೃತ ಯೋಧನ ಪೋಷಕರಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ.

ಜನಾರ್ಧನ್ ಗೌಡ ಕಳೆದ 3 ತಿಂಗಳ ಹಿಂದಷ್ಟೇ ಹುಟ್ಟೂರು ಕಿಕ್ಕೇರಿಗೆ ಭೇಟಿ ನೀಡಿ ಸೇವೆಗೆ ವಾಪಸ್ಸಾಗಿದ್ದರು. 2019ರಲ್ಲಿ ರಂಜಿತಾ ಅವರೊಂದಿಗೆ ವಿವಾಹವಾಗಿದ್ದ ಜನಾರ್ಧನ್‌ಗೆ 2 ವರ್ಷದ ಹೆಣ್ಣು ಮಗು ಇದೆ.

ಯೋಧನ ಪಾರ್ಥಿವ ಶರೀರವನ್ನು ಸೇನಾ ವಿಮಾನದ ಮೂಲಕ ಶನಿವಾರ ಬೆಳಗ್ಗೆ 8 ಗಂಟೆಗೆ ಚಂಢೀಗಡದಿಂದ ಬೆಂಗಳೂರಿಗೆ ಏರ್‌ಲಿಫ್ಟ್ ಮಾಡಲಾಗುತ್ತದೆ. ಬೆಂಗಳೂರಿನಿಂದ 11 ಗಂಟೆಗೆ ಆರ್ಮಿ ಆಂಬುಲೆನ್ಸ್ ಮೂಲಕ ಹೊರಟು ಮಧ್ಯಾಹ್ನ ಸುಮಾರು 2.30ರಿಂದ 3ಗಂಟೆ ವೇಳೆಗೆ ಕಿಕ್ಕೇರಿಗೆ ಯೋಧನ ಮೃತದೇಹವನ್ನು ತರಲಾಗುತ್ತದೆ. ಕಿಕ್ಕೇರಿ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ.

ನಂತರ ತಾಲೂಕು ಆಡಳಿತ ಹಾಗೂ ಸೇನೆ, ಪೊಲೀಸ್ ಇಲಾಖೆ ಸರ್ಕಾರಿ ಗೌರವದೊಂದಿಗೆ ಕುಟುಂಬದವರು ನಿರ್ಧರಿಸುವ ಸ್ಥಳದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ತಾಲೂಕು ಕಚೇರಿ ಮೂಲಗಳು ತಿಳಿಸಿವೆ. ಮೃತ ಯೋಧನ ನಿಧನಕ್ಕೆ ತಾಲೂಕಿನ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಕಾಲು ಜಾರಿ ಕೆರೆಗೆ ಬಿದ್ದು ಯುವಕ ಸಾವು

ಹಲಗೂರು, ಜೂ.23– ಕುರಿಗಳನ್ನು ತೊಳೆಯಲು ಹೋದ ಯುವಕನೋರ್ವ ಕಾಲು ಜಾರಿ ಕೆರೆಗೆ ಬಿದ್ದು ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಎನ್.ಹಲಸಹಳ್ಳಿ ಕೆರೆಯಲ್ಲಿ ನಡೆದಿದೆ.

ರಾಮನಗರ ತಾಲೂಕಿನ ದೇವರದೊಡ್ಡಿ ಗ್ರಾಮದ ರಂಗಯ್ಯ (27) ಮೃತಪಟ್ಟ ಯುವಕ. ಕುರಿಗಾಹಿಯಾಗಿದ್ದ ಈತ ಕುರಿಗಳನ್ನು ಮೇಯಿಸಲು ಎನ್.ಹಲಸ ಹಳ್ಳಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಬೀಡು ಬಿಟ್ಟಿದ್ದರು. ಗುರುವಾರ ಮಧ್ಯಾಹ್ನ ಕುರಿಗಳನ್ನು ತೊಳೆಯಲು ಕೆರೆಗೆ ಇಳಿದಾಗ ಆಕಸ್ಮಿಕವಾಗಿ ಕಾಲು ಜಾರಿ ಮಡುವಿಗೆ ಬಿದ್ದು ಮೃತಪಟ್ಟಿದ್ದಾನೆ. ಶುಕ್ರವಾರ ಮಧ್ಯಾಹ್ನ ಅಗ್ನಿಶಾಮಕ ದಳದ ಸಿಬ್ಬಂದಿ ಶವ ಪತ್ತೆ ಮಾಡಿ ಹೊರತೆಗೆದರು. ಬಳಿಕ ಹಲಗೂರು ಠಾಣೆ ಪೊಲೀಸರು ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಮುಂಡಿಬೆಟ್ಟದಲ್ಲಿ ಭಕ್ತಸಾಗರ; ಅಲಂಕಾರದಲ್ಲಿ ಕಂಗೊಳಿಸಿದ ಚಾಮುಂಡೇಶ್ವರಿ



ಆಷಾಢ ಮಾಸದ ಮೊದಲ ಶುಕ್ರವಾರದ ಪ್ರಯುಕ್ತ ಮೈಸೂರಿನ ರಾಜರಾಜೇಶ್ವರಿನಗರದಲ್ಲಿರುವ ಶ್ರೀ ರಾಜರಾಜೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಬಳೆ ಅಲಂಕಾರದೊಂದಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ಮೂರನೇ ಪುಟದಿಂದ

ಸೇರಿದಂತೆ ಹಲವು ಗಣ್ಯರಿಗೆ ಪ್ರತ್ಯೇಕ ಸಾಲಿನ ವ್ಯವಸ್ಥೆ ಮಾಡಲಾಗಿತ್ತು. ಜನತಾ ದರ್ಶನದ ಜೊತೆಗೆ 300 ಹಾಗೂ 50 ರೂಪಾಯಿ ಟಿಕೆಟ್ ಪಡೆದ ಕೆಲವರಿಗೆ ಪ್ರತ್ಯೇಕ ಸಾಲಿನಲ್ಲಿ ದೇವಿಯ ದರ್ಶನಕ್ಕೆ ಅವಕಾಶ ಕಲ್ಪಿಸಲಾ ಗಿತ್ತು. ಹಿರಿಯ ನಾಗರಿಕರಿಗೆ ದೇವಸ್ಥಾನಕ್ಕೆ ನೇರ ಪ್ರವೇಶ ನೀಡಬೇಕೆಂಬ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಅವರು ನೇರ ವಾಗಿ ದೇವಸ್ಥಾನ ಪ್ರವೇಶಿಸಿ, ದೇವರ ದರ್ಶನ ಮಾಡಲು ಪೊಲೀಸರು ಅವಕಾಶ ಕಲ್ಪಿಸಿದರು. ಬೆಟ್ಟದಲ್ಲಿ ಭಾರೀ ಪ್ರಮಾಣದಲ್ಲಿ ಪೊಲೀಸರನ್ನು ನಿಯೋಜನೆ ಮಾಡಲಾಗಿತ್ತು. ನೂಕು ನುಗ್ಗಲು ಉಂಟಾದರೆ ಅದನ್ನು ನಿಯಂತ್ರಿಸಲು ಮೌಂಟೆಡ್ ಪೊಲೀಸರನ್ನು ಕೂಡ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಕಲಾಗಿತ್ತು ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ, ಮಾಜಿ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಪೊಲೀಸ್ ಆಯುಕ್ತ ಕೆ.ರಮೇಶ್ ಸೇರಿದಂತೆ ಹಲವರು ಚಾಮುಂಡೇಶ್ವರಿ ದರ್ಶನ ಪಡೆದರು.







ಆಗಸ್ಟ್ 6ರಂದು ಮೈಸೂರಲ್ಲಿ 'ಶಿವದೂತ ಗುಳಿಗ' ನಾಟಕ ಪ್ರದರ್ಶನ

ಮೈಸೂರು, ಜೂ.23(ಆರ್‌ಕೆ)–ದಕ್ಷಿಣ ಕನ್ನಡ ಮತ್ತು ಕರಾವಳಿ ಸಂಘಗಳ ಒಕ್ಕೂಟದ ವತಿಯಿಂದ ಆಗಸ್ಟ್ 6 ರಂದು ಮೈಸೂರಿನ ಕಲಾಮಂದಿರದಲ್ಲಿ ಕಲಾ ಸಂಗಮ, ಕಲಾವಿದರ 'ಶಿವದೂತ ಗುಳಿಗ' ಕನ್ನಡ ನಾಟಕ ಪ್ರದರ್ಶನವಾಗಲಿದೆ.

'ಕಾಂತಾರ' ಚಲನಚಿತ್ರದ ಗುರುವಿನ ಪಾತ್ರಧಾರಿ ಸ್ವರಾಜ್‌ಶೆಟ್ಟಿ ಮುಖ್ಯ ಪಾತ್ರದಲ್ಲಿ 500ನೇ ಪ್ರದರ್ಶನ ಕಂಡು ರಂಗಭೂಮಿಯಲ್ಲಿ ಭಾರೀ ಮೆಚ್ಚುಗೆ ಪಡೆದಿರುವ ಕೊಡಿಯಾಲ್ ಬೈಲ್‌ನ ವಿಜಯ ಕುಮಾರ್ ನಿರ್ದೇಶನದ ಶಿವದೂತ ಗುಳಿಗ ನಾಟಕವು ಆಗಸ್ಟ್ 6 ರಂದು ಭಾನುವಾರ ಮಧ್ಯಾಹ್ನ 2.30 ಮತ್ತು ಸಂಜೆ 6.30 ಗಂಟೆಗೆ ಎರಡು ಪ್ರದರ್ಶನಗೊಳ್ಳಲಿದೆ.

ಡೋನರ್ ಪಾಸ್‌ಗಳ ಮೂಲಕ ಪ್ರವೇಶವಿದ್ದು, ಆಸಕ್ತರು 9448108222, ಅನ್ನು ಸಂಪರ್ಕಿಸಬಹುದಾಗಿದೆ ಎಂದು ಒಕ್ಕೂಟದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರಲ್ಲಿ ಇಂದು, ನಾಳೆ ಹಲಸಿನ ಹಬ್ಬ

- ಮಳಿಗೆಗಳಲ್ಲಿ ಹಲಸಿನ ಐಸ್‌ಕ್ರೀಂ, ಚಾಕೊಲೇಟ್, ಹಲ್ವಾ, ಕಬಾಬ್, ಬಿರಿಯಾನಿ ಮಾರಾಟ
- ಮಹಿಳೆಯರು, ಮಕ್ಕಳು, ಪುರುಷರಿಗೆ ಹಲಸಿಗೆ ಸಂಬಂಧಿಸಿದ ವಿವಿಧ ಸ್ಪರ್ಧೆ ಆಯೋಜನೆ



ಮೈಸೂರು, ಜೂ. 23– ಮೈಸೂರಿನ ಸಹಜ ಸಮೃದ್ಧ ಸಂಸ್ಥೆಯು ಹಲವು ಸಂಘಟನೆಗಳ ಸಹೋಗದೊಂದಿಗೆ ಮೈಸೂರಿನ ನಂಜರಾಜ ಬಹಾದ್ದೂರ್ ಛತ್ರದಲ್ಲಿ ನಾಳೆ (ಜೂ.24) ಮತ್ತು ಮರುದಿನ 'ಹಲಸಿನ ಹಬ್ಬ' ಏರ್ಪಡಿಸಿದೆ.

ನಾಳೆ ಬೆಳಗ್ಗೆ 10 ಗಂಟೆಗೆ 'ಹಲಸಿನ ಹಬ್ಬ'ವನ್ನು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಉದ್ಘಾಟಿಸಲಿದ್ದಾರೆ. ಹಲಸಿನ ಅಡುಗೆ ಪುಸ್ತಕವನ್ನು ಜರ್ಮನಿಯ ಬೆರ್ತ್‌ಹೋಲ್ಡ ವಾಲಿಬರ್ ಬಿಡುಗಡೆ ಮಾಡಲಿದ್ದಾರೆ. ಹೂಮಲ್ಲಿ ಹಲಸಿನ ತಳಿಯನ್ನು ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ ನಿರ್ದೇಶಕ ಪ್ರೊ. ಸಂಜಯ್‌ಕುಮಾರ್ ಸಿಂಗ್ ಅನಾವರಣ ಮಾಡಲಿದ್ದಾರೆ. ಜೈವಿಕ್ ಕೃಷಿಕ್ ಸೊಸೈಟಿ ಗೌರವಾಧ್ಯಕ್ಷ ಡಾ. ಕೆ. ರಾಮಕೃಷ್ಣಪ್ಪ ಅಧ್ಯಕ್ಷತೆ ವಹಿಸಲಿದ್ದು, ಮೈಸೂರಿನ ತೋಟಗಾರಿಕಾ ಇಲಾಖೆ ಉಪನಿರ್ದೇಶಕ ರುದ್ರೇಶ್, ಗುಬ್ಬಿ ತಾಲೂಕು ಚೇಳೂರಿನ ಸಿದ್ದು ಹಲಸು ತಳಿ ಸಂರಕ್ಷಕ ಪರಮೇಶ್,



ತಿಪಟೂರಿನ ಚೌಡ್ಲಾಪುರದ ಶಂಕರ ಹಲಸಿನ ತಳಿ ಸಂರಕ್ಷಕ ಶಂಕರಯ್ಯ, ಮೈಸೂರಿನ ಆಹಾರ ತಜ್ಞೆ ಡಾ. ಮಲ್ಲಿಕಾ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಹಲಸಿನ ಮಹತ್ವ ಸಾರುವ ಈ ಹಬ್ಬದಲ್ಲಿ ಕೆಂಪು, ಹಳದಿ ಮತ್ತು ಬಿಳಿ ಹಲಸಿನ ತಳಿ ಹಣ್ಣುಗಳು ತಿನ್ನಲು ಸಿಗಲಿವೆ. ಹಲಸಿನ ಐಸ್‌ಕ್ರೀಂ, ಚಿಪ್ಸ್, ಚಾಕೊಲೇಟ್, ಹಪ್ಪಳ, ಹಲ್ವಾ, ಕಬಾಬ್, ಹೋಳಿಗೆ, ವಡೆ, ದೋಸೆ, ಪಲ್ಯ, ಬಿರಿಯಾನಿ ಮಳಿಗೆಗಳು ಈ ಹಬ್ಬದಲ್ಲಿ ಇರಲಿವೆ. ಹಲಸಿನ ಬೀಜದ ಪೇಯ 'ಜಾಫಿ' ಕುಡಿಯಲು ಸಿಗಲಿದೆ. ಹಲಸಿನ ಮೌಲ್ಯವರ್ಧನೆ ಕುರಿತ ಪುಸ್ತಕಗಳು ಹಾಗೂ ಹಲಸು ಹಚ್ಚುವ ಯಂತ್ರವೂ ಕೂಡ ದೊರೆಯಲಿದೆ.

ರುದ್ರಾಕ್ಷಿ ಬಕ್ಕೆ, ತೂಬಗೆರೆ, ಭೈರಸಂದ್ರ, ಸರ್ವಋತು, ಲಾಲ್ ಬಾಗ್ ಮಧುರ, ಥಾಯ್‌ರೆಡ್, ವಿಯಟ್ನಾಂ ಸೂಪರ್ ಹರ್ಲಿ, ಗಮ್ ಲೆಸ್ ನಾಗಸಂದ್ರ, ರಾಮ ಚಂದ್ರ ಮೊದಲಾದ 25 ಹಲಸಿನ ತಳಿಗಳು ಮಾರಾಟಕ್ಕೆ ಲಭ್ಯವಿರುತ್ತದೆ. ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕು ಪ್ರಾಧಿಕಾರದಲ್ಲಿ ನೋಂದಣಿಯಾಗಿರುವ ಕರ್ನಾಟಕದ ಪ್ರಥಮ ಕೆಂಪು ಹಲಸಿನ ತಳಿ 'ಸಿದ್ದು' ಹಲಸಿನ ಗಿಡಗಳು ಮಾರಾಟಕ್ಕಿರುತ್ತವೆ.

ಈ ಹಲಸಿನ ಹಬ್ಬದಲ್ಲಿ ಸಹಜ ಕೃಷಿಕ ಕೈಲಾಸ ಮೂರ್ತಿಯವರ ಹಲಸಿನ ತೋಟದ ಬಗೆ ಬಗೆಯ ಹಣ್ಣುಗಳು ಮಾರಾಟಕ್ಕೆ ಬರುತ್ತಿವೆ.ತಿಪಟೂರಿನ ಚಂದ್ರ ಹಲಸು ಸಿಗಲಿದೆ. ಚಿಕ್ಕನಾಯಕನಹಳ್ಳಿ ಚೇಳೂರಿನ ಕೆಂಪು ಹಲಸಿನ ತೊಳೆ ಲಭ್ಯವಿರುತ್ತದೆ. ಶನಿವಾರ ಸಂಜೆ 4 ಗಂಟೆಗೆ ಹಲಸು ಭಾರ ಎತ್ತುವ ಮತ್ತು 5 ಗಂಟೆಗೆ ಹಲಸಿನ ತೂಕ ಊಹಿಸಿ ಬಹುಮಾನ ಗೆಲ್ಲುವ ಸ್ಪರ್ಧೆಗಳಿವೆ. ಭಾನುವಾರ ಬೆಳಗ್ಗೆ 10 ಗಂಟೆಗೆ 5–12 ವಯಸ್ಸಿನ ಮಕ್ಕಳಿಗೆ 'ನಾ ಕಂಡಂತೆ ಹಲಸು' ಚಿತ್ರಕಲಾ ಸ್ಪರ್ಧೆ, ಮಧ್ಯಾಹ್ನ 12 ಗಂಟೆಗೆ ಹಲಸಿನ ಅಡುಗೆ ಸ್ಪರ್ಧೆ, 2 ಗಂಟೆಗೆ ಹಲಸಿನಹಣ್ಣು ತಿನ್ನುವ ಸ್ಪರ್ಧೆಯನ್ನು ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಏರ್ಪಡಿಸಲಾಗಿದೆ.



ಶುಕ್ರವಾರ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಸಲುವಾಗಿ ಮೈಸೂರಿಗೆ ಆಗಮಿಸಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಕಾಂಗ್ರೆಸ್ ಹಿಂದುಳಿದ ವರ್ಗಗಳ ಮುಖಂಡರು ಅಭಿನಂದಿಸಿದರು. ಚಿತ್ರದಲ್ಲಿ ಮುಖಂಡರಾದ ಎನ್.ಆರ್.ನಾಗೇಶ್, ಯೋಗೇಶ್ ಉಪ್ಪಾರ್, ರವಿನಂದ ಇತರರಿದ್ದಾರೆ.



ಮೈಸೂರು ನಗರ ಕನ್ನಡಪರ ಸಂಘಟನೆ ಎನ್.ಆರ್.ಮೊಹಲ್ಲಾದ ನಾಗರಿಕ ಹಿತರಕ್ಷಣಾ ವೇದಿಕೆಯ 35ನೇ ವಾರ್ಷಿಕೋತ್ಸವದ ಅಂಗವಾಗಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ, ಹೆಸರಾಂತ ವೈದ್ಯ ಶ್ರೀಕಾಂತ್ ಸುಂದರೇಶ್ ಅವರನ್ನು ಅಭಿನಂದಿಸಲಾಯಿತು. ಚಿತ್ರದಲ್ಲಿ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು) ಇತರರಿದ್ದಾರೆ.

ಭಾರತದ ಡಿಎನ್‌ಎನಲ್ಲೇ ಪ್ರಜಾಪ್ರಭುತ್ವವಿದೆ, ತಾರತಮ್ಯದ ಪ್ರಶ್ನೆಯೇ ಇಲ್ಲ

ಶ್ವೇತ ಭವನದಲ್ಲಿ ಪತ್ರಕರ್ತರ ಪ್ರಶ್ನೆಗೆ ಪ್ರಧಾನಿ ಮೋದಿ ಖಡಕ್ ಉತ್ತರ



ವಾಷಿಂಗ್‌ಟನ್,ಜೂ.23– ದ್ವಿಪಕ್ಷೀಯ ಮಾತುಕತೆಯ ನಂತರ ಪ್ರಧಾನಿ ನರೇಂದ್ರ ಮೋದಿ– ಅಮೆರಿಕ ಅಧ್ಯಕ್ಷ ಜೋ ಬೈಡನ್ ಜಂಟಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ್ದು, ಪ್ರಧಾನಿ ಮೋದಿ ಈ ವೇಳೆ ಅಮೆರಿಕಾ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

ಪತ್ರಕರ್ತರೊಬ್ಬರು ಭಾರತದಲ್ಲಿನ ತಾರತಮ್ಯಗಳ ಕುರಿತು ಪ್ರಶ್ನೆ ಮಾಡಿದ್ದು, ಇದಕ್ಕೆ ಪ್ರತಿಕ್ರಿಯೆ ನೀಡಿರುವ ಪ್ರಧಾನಿ ಮೋದಿ, ನಾವು ಪ್ರಜಾಪ್ರಭುತ್ವವನ್ನು ಉಸಿರಾಡಿ ಜೀವಿಸುತ್ತೇವೆ. ನಮ್ಮ ಪೂರ್ವಜರು ಅದನ್ನು ನಮ್ಮ ಸಂವಿಧಾನದಲ್ಲಿ ಪದಗಳಲ್ಲಿ ಪ್ರತಿಪಾದಿಸಿದ್ದಾರೆ. ಪ್ರಜಾಪ್ರಭುತ್ವದಿಂದ ನಾವು ಏನೆಲ್ಲಾ ಸಾಧಿಸಬಹುದು ಎಂಬುದನ್ನು ಸಂವಿಧಾನ ತೋರಿಸಿಕೊಟ್ಟಿದೆ. ಜಾತಿ, ಧರ್ಮ ಅಥವಾ ಲಿಂಗದ ಆಧಾರದಲ್ಲಿ ತಾರತಮ್ಯಗಳಿಗೆ ಅವಕಾಶವಿಲ್ಲ. ಮಾನವ ಹಕ್ಕುಗಳಿಲ್ಲದೇ ಅಥವಾ ಘನತೆಗೆ ಜಾಗವಿಲ್ಲದೇ ಪ್ರಜಾಪ್ರಭುತ್ವವಿಲ್ಲ, ಪ್ರಜಾಪ್ರಭುತ್ವವನ್ನು ಜೀವಿಸಿ, ಉಸಿರಾಡುವವರಲ್ಲಿ ತಾರತಮ್ಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಮೋದಿ ಹೇಳಿದ್ದಾರೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಪ್ರಧಾನಿ ಮೋದಿ ಭವ್ಯ ಸ್ವಾಗತಕ್ಕಾಗಿ ಅಮೆರಿಕಾ ಅಧ್ಯಕ್ಷ ಬೈಡನ್‌ಗೆ ಧನ್ಯವಾದ ತಿಳಿಸಿದ್ದು, ಮತ್ತಷ್ಟು ಗಟ್ಟಿಯಾದ ಭಾರತ–ಅಮೆರಿಕಾದ ಸಂಬಂಧಗಳು ಹೊಸ ಉದ್ಯಮ ಸೃಷ್ಟಿಗೆ ಈ ಸಂಬಂಧ ನಾಂದಿ ಹಾಡಲಿದೆ ಎಂದು ಹೇಳಿದ್ದಾರೆ.

ಅಮೆರಿಕಾ ಭಾರತದ ನಡುವೆ ಸಂಬಂಧ, ವ್ಯಾಪಾರ ವಹಿವಾಟು ಉತ್ತಮವಾಗಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಒಪ್ಪಂದ ಮಾಡಿಕೊಂಡಿದ್ದೇವೆ. ಶ್ವೇತ ಭವನಕ್ಕೆ ಆಗಮಿಸುವಾಗ ಎನ್‌ಆರ್‌ಐಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರು, ಇದು ಭಾರತ– ಅಮೆರಿಕಾ ಸಂಬಂಧಗಳನ್ನು ಮತ್ತಷ್ಟು ಗಟ್ಟಿಗೊಳಿಸಲಿದೆ. ಉಗ್ರವಾದದ ವಿರುದ್ಧ ಭಾರತ–ಅಮೆರಿಕಾ ಪರಸ್ಪರ ಹೆಗಲಿಗೆ ಹೆಗಲು ನೀಡಿ ಹೋರಾಡುತ್ತದೆ. ಪ್ರಜಾತಂತ್ರದ ಮೂಲ ಉದ್ದೇಶ ಗಟ್ಟಿಗೊಳಿಸುವುದೇ ಈ ಭೇಟಿಯ ಉದ್ದೇಶವಾಗಿದೆ ಎಂದು ಮೋದಿ ಹೇಳಿದರು. ಮೋದಿ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅಮೆರಿಕಾ ಅಧ್ಯಕ್ಷ ಜೋ ಬೈಡನ್, ಮೋದಿ ಅವರ ಅಮೆರಿಕ ಭೇಟಿ ಫಲಪ್ರದವಾಗಿದೆ. ರಾಜತಾಂತ್ರಿಕತೆ ಮೂಲಕ ಉಕ್ರೇನ್ ಯುದ್ಧ ನಿಲ್ಲಿಸಲು ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ ಸೆಮಿಕಂಡಕ್ಟರ್ ಉತ್ಪಾದನಾ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲು ಮಾತುಕತೆಯಲ್ಲಿ ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕಾಗಿ ವರಿಷ್ಠರಿಗೆ ಮನವಿ ಸಲ್ಲಿಸಿದ್ದೇನೆ

ಬೆಂಗಳೂರು, ಜೂ.23–ನನಗೆ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಕೊಡಿ ಎಂದು ಪಕ್ಷದ ಹೈಕಮಾಂಡ್‌ಗೆ ಮನವಿ ಮಾಡಿದ್ದೇನೆ ಎಂದು ಮಾಜಿ ಸಚಿವ ವಿ. ಸೋಮಣ್ಣ ಶುಕ್ರವಾರ ಹೇಳಿದ್ದಾರೆ. ಬೆಂಗಳೂರಿನಲ್ಲಿ ವರದಿಗಾರರೊಂದಿಗೆ ಮಾತನಾಡಿದ ಸೋಮಣ್ಣ, ರಾಜ್ಯದ ಯಾವ ನಾಯಕರ ಜೊತೆಗೂ ನಾನು ಮಾತನಾಡಿಲ್ಲ. ಇವರ ಕೈಯ್ಯಲ್ಲಿ ಆಗದ ಕೆಲಸ ನಾನು ಮಾಡಿದ್ದೇನೆ. ಪ್ರಾಣದ ಹಂಗು ತೊರೆದು ನಾನು ಪಕ್ಷಕ್ಕಾಗಿ ಕೆಲಸ ಮಾಡಿದ್ದೇನೆ. ಚುನಾವಣೆಯಲ್ಲಿ ಸೋತಿರಬಹುದು. ಆದರೆ, ಕೊಟ್ಟ ಟಾಸ್ಕ್‌ನಲ್ಲಿ ಸೋತಿಲ್ಲ ಎಂದಿದ್ದಾರೆ. ನಮ್ಮ ಪಕ್ಷದ ರಾಷ್ಟ್ರೀಯ ನಾಯಕರಿಗೆ ಪತ್ರ ಬರೆದು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸ್ಥಾನ ಕೇಳಿದ್ದು ನಿಜ. ನನಗೆ 100 ದಿನ ಅವಕಾಶ ನೀಡಿದರೆ ಸಾಕು. ಒಬ್ಬ ರಾಜ್ಯಾಧ್ಯಕ್ಷ ಹೇಗೆ ಕೆಲಸ ಮಾಡಬೇಕು ಎಂಬುದನ್ನು ತೋರಿಸುವೆ ಎಂದು ಸೋಮಣ್ಣ ಹೇಳಿದ್ದಾರೆ.



ಕಳೆದ 15 ವರ್ಷಗಳಿಂದ ನಾನು ಬಿಜೆಪಿಯಲ್ಲಿ ದುಡಿದಿದ್ದೇನೆ. ಪಕ್ಷವನ್ನು ತುಂಬಾ ಹತ್ತಿರದಿಂದ ಬಲ್ಲವನಾಗಿದ್ದೇನೆ. ನನಗೆ ನನ್ನದೇ ಆದಂತಹ 45 ವರ್ಷದ ಅನುಭವವಿದೆ. ಬಿಜೆಪಿ ಕೊಟ್ಟ ಅನೇಕ ಟಾಸ್ಕ್‌ಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದೇನೆ. ಕೆಟ್ಟ ಪರಿಸ್ಥಿತಿಯಲ್ಲಿ ಒಂದು ಅವಕಾಶ ಕೊಡಿ ಅಂತಾ ಕೇಳಿದ್ದೇನೆ. ಎಲ್ಲರನ್ನೂ ಒಗ್ಗಟ್ಟಾಗಿ ತೆಗೆದುಕೊಂಡು ಹೋಗಲು ಅವಕಾಶ ಕೇಳಿದ್ದೇನೆ ಎಂದಿದ್ದಾರೆ.

ದಕ್ಷಿಣ ವಲಯ ಡಿಐಜಿಪಿ ಡಾ.ಭೋರಲಿಂಗಯ್ಯ ಅಧಿಕಾರ ಸ್ವೀಕಾರ



ದಕ್ಷಿಣ ವಲಯ ಡಿಐಜಿಪಿ ಆಗಿ ಶುಕ್ರವಾರ ಅಧಿಕಾರ ವಹಿಸಿಕೊಂಡ ಡಾ.ಭೋರಲಿಂಗಯ್ಯ ಅವರನ್ನು ಮೈಸೂರು ಎಸ್ಪಿ ಸೀಮಾ ಲಾಟ್ಕರ್ ಅವರು ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.

ಮೈಸೂರು, ಜೂ.23(ಆರ್‌ಕೆ)– ದಕ್ಷಿಣ ವಲಯ ಡಿಐಜಿಪಿ ಡಾ. ಭೋರಲಿಂಗಯ್ಯ ಅಧಿಕಾರ ವಹಿಸಿಕೊಂಡರು.

ಮೈಸೂರಿನ ನಜರ್‌ಬಾದ್‌ನ ಕಚೇರಿಯಲ್ಲಿ ಅಧಿಕಾರ ವಹಿಸಿಕೊಂಡ ಡಾ. ಭೋರಲಿಂಗಯ್ಯ ಅವರನ್ನು ಮೈಸೂರು ಎಸ್ಪಿ ಸೀಮಾ ಲಾಟ್ಕರ್ ಅವರು ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.

ಮಂಡ್ಯ ಜಿಲ್ಲೆ, ಮದ್ದೂರು ತಾಲೂಕಿನ ಮಲ್ಲನಾಯಕನಹಳ್ಳಿ ಗ್ರಾಮದವರಾದ ಭೋರಲಿಂಗಯ್ಯ ಮತ್ತು ಶ್ರೀಮತಿ ತಾಯಮ್ಮ ದಂಪತಿ ಪುತ್ರರಾದ ಡಾ. ಭೋರಲಿಂಗಯ್ಯ ಅವರು, ಹುಟ್ಟೂರಿನಲ್ಲಿ 4ನೇ ತರಗತಿವರೆಗೆ ಶಿಕ್ಷಣ ಪಡೆದು, ತುಮಕೂರು ಜಿಲ್ಲೆ, ಕುಣಿಗಲ್ ತಾಲೂಕಿನ ನಿಡಸಾಲೆಯಲ್ಲಿ 5ನೇ ತರಗತಿ ಓದಿದರು.

ನಂತರ 6ರಿಂದ 10ನೇ ತರಗತಿವರೆಗೆ ತುಮಕೂರಿನ ಜವಾಹರ ನವೋದಯ ವಿದ್ಯಾಲಯದಲ್ಲಿ, ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಪಿಯುಸಿ ಹಾಗೂ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಮಾಡಿದರು. ಇವರು 2008ರಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಪಾಸಾಗಿ, ಐಪಿಎಸ್ ಅಧಿಕಾರಿಯಾದರು.

ಗುಲ್ಬರ್ಗ ಪೊಲೀಸ್ ತರಬೇತಿ ಶಾಲೆಯಲ್ಲಿ ಒಂದು ವರ್ಷ ಬುನಾದಿ ತರಬೇತಿ ಪಡೆದ ಡಾ. ಭೋರಲಿಂಗಯ್ಯ, ತಿಪಟೂರಿನಲ್ಲಿ ಎಎಸ್ಪಿಯಾಗಿ, ಉಡುಪಿ, ದಾವಣಗೆರೆ ಜಿಲ್ಲೆಗಳ ಎಸ್ಪಿಯಾಗಿ, ಬೆಂಗಳೂರಿನ ಆಗ್ನೇಯ ವಲಯದ ಕಾನೂನು–ಸುವ್ಯವಸ್ಥೆ ಡಿಸಿಪಿಯಾಗಿ, ರಾಜ್ಯ ಗುಪ್ತವಾರ್ತೆ ಮತ್ತು ರೈಲ್ವೆ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು.

ಬಡ್ತಿ ನಂತರ (ಡಿಐಜಿ) ಬೆಳಗಾವಿ ನಗರ ಪೊಲೀಸ್ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದ ಅವರನ್ನು ಸರ್ಕಾರ, ಈಗ ಮೈಸೂರು ದಕ್ಷಿಣ ವಲಯ ಡಿಐಜಿಪಿಯಾಗಿ ವರ್ಗಾವಣೆ ಮಾಡಿದೆ. ಮೈಸೂರು, ಚಾಮರಾಜನಗರ, ಕೊಡಗು, ಹಾಸನ ಮತ್ತು ಮಂಡ್ಯ ಜಿಲ್ಲೆಗಳನ್ನೊಳಗೊಂಡ ದಕ್ಷಿಣ ವಲಯದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಸದೃಢಪಡಿಸಿ ಜನಸ್ನೇಹಿಯಾಗಿಸಲು ಪ್ರಯತ್ನಿಸುವುದಾಗಿ ಅವರು ತಿಳಿಸಿದ್ದಾರೆ.

ಸಮಸ್ಯೆ ಇದ್ದವರು ಮಾತ್ರ ಪೊಲೀಸ್ ಠಾಣೆಗೆ ಬರುತ್ತಾರೆ. ಅವರ ದೂರು, ಅಳಲನ್ನು ಸಮಾಧಾನದಿಂದ ಆಲಿಸಿ, ಕಾನೂನಿನ ವ್ಯಾಪ್ತಿಯೊಳಗೆ ಪರಿಹರಿಸಿದರೆ ಸಾಕು, ಪೊಲೀಸ್ ಇಲಾಖೆ ಬಗ್ಗೆ ಜನರಿಗೆ ವಿಶ್ವಾಸ ಮೂಡುತ್ತದೆ. ಆ ಮೂಲಕ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಆ ನಿಟ್ಟಿನಲ್ಲಿ ಅಧೀನ ಅಧಿಕಾರಿಗಳು, ಸಿಬ್ಬಂದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕರ್ತವ್ಯ ನಿರ್ವಹಿಸಿ, ಪರಿವರ್ತನೆ ತರಲು ಪ್ರಯತ್ನಿಸುತ್ತೇನೆ ಎಂದು ಡಾ. ಭೋರಲಿಂಗಯ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಐದನೇ ದಿನ ಕಡೆಗೂ ಸರ್ವರ್ ಸಮಸ್ಯೆ ನಿವಾರಣೆ

‘ಗೃಹ ಜ್ಯೋತಿ’ಗೆ ನೋಂದಣಿ ಪ್ರಕ್ರಿಯೆ ಚುರುಕು

ಶುಕ್ರವಾರ ಸಂಜೆ 6 ಗಂಟೆವರೆಗೆ ಸೆಸ್ಕ್ ಸೇರಿ ರಾಜ್ಯದ ಎಲ್ಲಾ ಎಸ್ಕಾಂ ವ್ಯಾಪ್ತಿಯಲ್ಲಿ 32,25,115 ವಿದ್ಯುತ್ ಗ್ರಾಹಕರ ನೋಂದಣಿ

ಮೈಸೂರು, ಜೂ.23(ಆರ್‌ಕೆ)– ಸರ್ವರ್ ಡೌನ್ ಆಗಿ ಸೇವಾ ಸಿಂಧು ಪೋರ್ಟಲ್ ಓಪನ್ ಆಗದ ಕಾರಣ ಕಳೆದ ನಾಲ್ಕು ದಿನಗಳಿಂದ ಸರ್ಕಾರದ 'ಗೃಹ ಜ್ಯೋತಿ' ಯೋಜನೆಗೆ ಹೆಸರು ನೋಂದಾಯಿಸಲು ಪರದಾಡುತ್ತಿದ್ದ ಗೃಹ ವಿದ್ಯುತ್ ಬಳಕೆದಾರರು 5ನೇ ದಿನ ನಿಟ್ಟುಸಿರು ಬಿಟ್ಟರು.

ರಾಜ್ಯಾದ್ಯಂತ ಎಲ್ಲಾ ಕರ್ನಾಟಕ ಒನ್, ಗ್ರಾಮ ಒನ್ ಸೆಂಟರ್‌ಗಳಲ್ಲಿ ಸೇವಾ ಸಿಂಧು ಪೋರ್ಟಲ್ ಓಪನ್ ಆಗಿದ್ದು, ಬೆಳಗ್ಗೆಯಿಂದ ಸಿಬ್ಬಂದಿ ಗ್ರಾಹಕರ ಮಾಸಿಕ ವಿದ್ಯುತ್ ಬಿಲ್, ಆಧಾರ್ ನಂಬರ್ ಹಾಗೂ ಆಧಾರ್‌ಗೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆಗಳನ್ನು ಸಾಫ್ಟ್‌ವೇರ್‌ಗೆ ಭರ್ತಿ ಮಾಡುವ ಮೂಲಕ ಬರುವ ಓಟಿಪಿ ನಂಬರ್ ನಮೂದಿಸಿ 'ಗೃಹ ಜ್ಯೋತಿ' 200 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡಲು ಗ್ರಾಹಕರ ಹೆಸರು ನೋಂದಾಯಿಸುವ ಪ್ರಕ್ರಿಯೆ ಮುಂದುವರಿಸಿದ್ದಾರೆ.

ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆ, ಜಯನಗರ ರೈಲ್ವೇ ಗೇಟ್, ಗೋಕುಲಂ 3ನೇ ಹಂತ, ಸಿದ್ಧಾರ್ಥ ಬಡಾವಣೆಯ ಶಾಂತಲಾ ಸ್ಕೂಲ್ ಎದುರು, ನಜರ್‌ಬಾದ್‌ನ ಗುರು ಹೋಟೆಲ್ ಎದುರು ಹಾಗೂ ಗಾಯತ್ರಿಪುರಂನ ಕರ್ನಾಟಕ ಒನ್ ಸೆಂಟರ್‌ಗಳಲ್ಲಿ ಜನರು ಯೋಜನೆಯ ಫಲಾನುಭವಿಗಳಾಗಲು ನೋಂದಾವಣೆಗೆ ಸರತಿ ಸಾಲಿನಲ್ಲಿ ನಿಂತಿದ್ದುದು ಶುಕ್ರವಾರ ಕಂಡು ಬಂದಿತು.



ಸೇವಾ ಸಿಂಧು ಪೋರ್ಟಲ್ ಓಪನ್ ಆಗಿದೆ ಎಂಬ ವಿಷಯ ತಿಳಿಯುತ್ತಿದ್ದಂತೆಯೇ ಕರ್ನಾಟಕ ಒನ್ ಸೆಂಟರ್‌ಗಳತ್ತ ದೌಡಾಯಿಸಿದ ಗ್ರಾಹಕರಿಗೆ ಅಲ್ಲಿನ ಸಿಬ್ಬಂದಿ ಟೋಕನ್‌ಗಳನ್ನು ವಿತರಿಸಿ ಕ್ರಮ ಸಂಖ್ಯೆ ಅನುಸಾರ ಕರೆದು ದಾಖಲೆಗಳನ್ನು ಅಪ್‌ಲೋಡ್ ಮಾಡಿ ಆನ್‌ಲೈನ್‌ನಲ್ಲಿ ಗೃಹ ಜ್ಯೋತಿಗೆ ನೋಂದಣಿ ಮಾಡುತ್ತಿದ್ದಾರೆ.

ಆದರೆ ಸರ್ವರ್ ಸ್ಲೋ ಆಗಿರುವುದರಿಂದ ನೋಂದಣಿ ಕಾರ್ಯ ವಿಳಂಬವಾಗುತ್ತಿದೆಯಾದರೂ, ಗಂಟೆ ಗಟ್ಟಲೆ ಕಾಯ್ದು ನೋಂದಣಿ ಮಾಡಿಸುತ್ತಿದ್ದಾರೆ.

ಯೋಜನೆ ಜಾರಿಯಾದ ದಿನ ಜೂನ್ 18ರಂದು ಎಲ್ಲಾ ಎಸ್ಕಾಂ ವ್ಯಾಪ್ತಿಯಲ್ಲಿ ಕೇವಲ 96,305 ಮಂದಿ, 19 ರಂದು 3,34,845, 20ರಂದು 4,64,225, 21 ರಂದು 5,63,653, 22ರಂದು 8,91,820 ಮಂದಿ ಮಾತ್ರ ನೋಂದಣಿ ಮಾಡಿಸಲು ಸಾಧ್ಯವಾಗಿತ್ತು. 5ನೇ ದಿನ ಬೆಳಗ್ಗೆ 8 ಗಂಟೆ ವೇಳೆಗೆ 1,47,571, 10 ಗಂಟೆವರೆಗೆ 2,73,677, ಅಪರಾಹ್ನ 12 ಗಂಟೆವರೆಗೆ 3,59,807 ಹಾಗೂ ಮಧ್ಯಾಹ್ನ 1 ಗಂಟೆವರೆಗೆ 4,32,742 ಮಂದಿ ಸೇರಿದಂತೆ ಜೂನ್ 18 ರಿಂದ ಈವರೆಗೆ ರಾಜ್ಯದಲ್ಲಿ ಒಟ್ಟು 27,83,590 ಮಂದಿ ವಿದ್ಯುತ್ ಗ್ರಾಹಕರು ಗೃಹ ಜ್ಯೋತಿ ಯೋಜನೆಗೆ ಹೆಸರು ನೋಂದಾಯಿಸಿದ್ದರು. ಸಂಜೆ 6 ಗಂಟೆವರೆಗೆ ಒಟ್ಟು 32,25,115 ಮಂದಿ ನೋಂದಣಿ ಮಾಡಿಸಿದ್ದಾರೆ ಎಂದು ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ತಿಳಿಸಿದ್ದಾರೆ.

ವ್ಯವಸ್ಥೆ ಇರುವವರು ಮನೆಯಲ್ಲೇ ಕುಳಿತು ಅಥವಾ ತಾವಿರುವ ಸ್ಥಳದಿಂದಲೇ ಕಂಪ್ಯೂಟರ್, ಲ್ಯಾಪ್‌ಟಾಪ್, ಸ್ಮಾರ್ಟ್ ಫೋನ್‌ಗಳಲ್ಲೇ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಸೆಸ್ಕ್ ವ್ಯಾಪ್ತಿಯ ಜಿಲ್ಲೆಗಳಲ್ಲಿ ಒಟ್ಟು 4,85,911 ಮಂದಿ 'ಗೃಹ ಜ್ಯೋತಿ'ಗೆ ನೋಂದಣಿ ಮಾಡಿಸಿಕೊಂಡಿದ್ದಾರೆ ಎಂದು ಅವರು ತಿಳಿಸಿದರು.

ನೂತನ ಶಾಸಕರಿಗೆ ಮಠಾಧೀಶರಿಂದ ಪಾಠ; ದಲಿತ ಸಂಘರ್ಷ ಸಮಿತಿ ವಿರೋಧ, ಪ್ರತಿಭಟನೆ

ಮೈಸೂರು, ಜೂ.23(ಬಿಎಲ್‌ಯು)– ನೂತನವಾಗಿ ಆಯ್ಕೆಗೊಂಡಿರುವ ಶಾಸಕರಿಗೆ ತರಬೇತಿ ಶಿಬಿರ ಏರ್ಪಡಿಸಿ, ಅಲ್ಲಿ ಮಠಾಧೀಶರು ಹಾಗೂ ಆಧ್ಯಾತ್ಮಿಕ ಗುರುಗಳಿಂದ ಬೋಧನೆ ಆಯೋಜಿಸಿರುವ ವಿಧಾನಸಭಾಧ್ಯಕ್ಷರ ಕ್ರಮಕ್ಕೆ ದಲಿತ ಸಂಘರ್ಷ ಸಮಿತಿ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಈ ಸಂಬಂಧ ಮೈಸೂರಿನ ಸಿದ್ಧಾರ್ಥ ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ದಲಿತ ಸಂಘರ್ಷ ಸಮಿತಿ ಸದಸ್ಯರು, ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡುವ ಕೆಟ್ಟ ಪರಿಪಾಠಕ್ಕೆ ನಾಂದಿಯಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಸಮಗ್ರ ವ್ಯಕ್ತಿತ್ವದ ವಿಕಾಸಕ್ಕೆ ಸಾಮಾಜಿಕ ಹೊಣೆಗಾರಿಕೆಯ ಬದ್ಧತೆಗಾಗಿ ಸಂವಿಧಾನ ತಜ್ಞರು, ಮಾದರಿ ಹಿರಿಯ ರಾಜಕಾರಣಿಗಳು, ನ್ಯಾಯಾಧೀಶರು ಹಾಗೂ ಆಡಳಿತದಲ್ಲಿ ಹೆಚ್ಚು ಅನುಭವವುಳ್ಳ ಅಧಿಕಾರಿಗಳನ್ನು ಆಹ್ವಾನಿಸಿ ತರಬೇತಿ ಕೊಡಿಸುತ್ತಿರುವುದು ಸರಿ. ಆದರೆ ಮಠಾಧೀಶರು, ಆಧ್ಯಾತ್ಮಿಕ ಮುಖಂಡರಿಂದ ಬೋಧನೆ ಮಾಡಿಸುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಬಿಳಿಕೆರೆ ದೇವರಾಜು, ಅರಸನಕೆರೆ ಶಿವರಾಜು, ವರುಣ ಮಹೇಶ್, ಚಂದ್ರಶೇಖರ್, ಪ್ರಸನ್ನ, ಬೊಕ್ಕಳ್ಳಿ ನಂಜುಂಡಸ್ವಾಮಿ, ಸೋಮನಾಯಕ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಜೂ.29ರಂದು ರಾಮಕೃಷ್ಣನಗರದ ನಿವೃತ್ತ ಸರ್ಕಾರಿ ನೌಕರರ ಸಂಘದ ವಾರ್ಷಿಕ ಮಹಾಸಭೆ

ಮೈಸೂರು,ಜೂ.23 (ಎಂಟಿವೈ)– ಮೈಸೂರಿನ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಜೂ.29ರಂದು ಬೆಳಗ್ಗೆ ರಾಮಕೃಷ್ಣನಗರದ ಕರ್ನಾಟಕ ರಾಜ್ಯ ವಿಶ್ರಾಂತ ಸರ್ಕಾರಿ ಉದ್ಯೋಗಿಗಳ ಹಾಗೂ ನಿವೃತ್ತ ನೌಕರರ ಸಂಘದ ಸದಸ್ಯರ ವಾರ್ಷಿಕ ಮಹಾಸಭೆ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ಆರ್.ಉಮಾಕಾಂತ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘದ ಸದಸ್ಯರ ಹಿತಕಾಯಲು ಕಾರ್ಯಕ್ರಮ ರೂಪಿಸಲಾಗಿದೆ. ಪ್ರತಿ ತಿಂಗಳ ಕೊನೆ ಭಾನುವಾರ ಸಂಘದ ಸದಸ್ಯರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದೆ. ಸರ್ಕಾರಿ ಹುದ್ದೆ, ಅನುದಾನ ಪಡೆದ ಶಾಲಾ ಕಾಲೇಜು, ಇತರ ನಿಗಮಗಳಿಂದ ನಿವೃತ್ತರಾದವರು ಸಂಘದ ಸದಸ್ಯತ್ವ ಪಡೆಯಬಹುದಾಗಿದೆ ಎಂದರು.

ಸದಸ್ಯತ್ವ ನವೀಕರಣವನ್ನೂ ಆನ್‌ಲೈನ್ ಮೂಲಕ ಮಾಡುವ ವ್ಯವಸ್ಥೆ ಮಾಡಲಾಗಿದೆ. ಸಂಘದ ಸದಸ್ಯರೆಲ್ಲ ಹಿರಿಯ ನಾಗರಿಕರಾಗಿದ್ದು, ರೈಲ್ವೆ ಪ್ರಯಾಣ ದರದ ರಿಯಾಯಿತಿ ಮರು ಜಾರಿ, ರಾಜ್ಯದಲ್ಲಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ ಮಾಡಿದಂತೆ ಹಿರಿಯ ನಾಗರಿಕರಿಗೂ ನೀಡುವುದು, ವಿಮಾನ ಪ್ರಯಾಣ ದರದಲ್ಲೂ ಶೇ.50 ರಿಯಾಯಿತಿ ಹಾಗೂ ಬ್ಯಾಂಕ್‌ಗಳಲ್ಲಿ ಪ್ರತ್ಯೇಕ ಕೌಂಟರ್ ವ್ಯವಸ್ಥೆ ಮಾಡಬೇಕಾಗಿದೆ. ಈ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ಹೆಚ್ಚಿನ ಮಾಹಿತಿಗೆ ಮೊ.ಸಂ. 9538736262 ಸಂಪರ್ಕಿಸುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಖಜಾಂಚಿ ಕೆಎಂ ನಾಗರಾಜ, ಕಾರ್ಯದರ್ಶಿ ಚಿಕ್ಕಲಿಂಗ ಸ್ವಾಮಿ, ಸಹಕಾರ್ಯದರ್ಶಿ ಆರ್. ನಾಗೇಶ್ ಇದ್ದರು.

ಶೆಟ್ಟರ್, ಬೋಸರಾಜು, ತಿಪ್ಪಣ್ಣ ವಿಧಾನ ಪರಿಷತ್‌ಗೆ ಅವಿರೋಧ ಆಯ್ಕೆ

ಬೆಂಗಳೂರು, ಜೂ.23– ಕಳೆದ ವಿಧಾನಸಭೆ ಚುನಾವಣೆಯಲ್ಲಿ ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದಿಂದ ಸ್ಪರ್ಧಿಸಿ ಸೋಲು ಅನುಭವಿಸಿದ್ದ ಮಾಜಿ ಸಿಎಂ ಜಗದೀಶ್‌ಶೆಟ್ಟರ್, ಸಚಿವ ಬೋಸರಾಜು ಹಾಗೂ ತಿಪ್ಪಣ್ಣ ಕಮಕನೂರು ಅವರು ವಿಧಾನ ಪರಿಷತ್ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಿಧಾನ ಪರಿಷತ್ ಉಪ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದ ಜಗದೀಶ್ ಶೆಟ್ಟರ್, ತಿಪ್ಪಣ್ಣ ಕಮಕನೂರು ಹಾಗೂ ಸಚಿವ ಬೋಸರಾಜು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ವಿಶಾಲಾಕ್ಷಿ ಅವರು ಶುಕ್ರವಾರ ಅಧಿಕೃತವಾಗಿ ಘೋಷಿಸಿದ್ದಾರೆ.



ಲಕ್ಷ್ಮಣ ಸವದಿ, ಆರ್ ಶಂಕರ್ ಹಾಗೂ ಬಾಬುರಾವ್ ಚಿಂಚನಸೂರ್ ಅವರ ರಾಜೀನಾಮೆಯಿಂದ ತೆರವಾದ ಈ ಮೂರು ಸ್ಥಾನಗಳಿಗೆ ಚುನಾವಣಾ ಆಯೋಗ ಉಪ ಚುನಾವಣೆ ಘೋಷಿಸಿತ್ತು. ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯಬೇಕಿದ್ದ ಉಪ ಚುನಾವಣೆಗೆ ನಾಮಪತ್ರ ಸಲ್ಲಿಸಲು ಜೂನ್ 20 ಕೊನೆಯ ದಿನವಾಗಿತ್ತು ಮತ್ತು ನಾಮಪತ್ರ ವಾಪಸ್ ಪಡೆಯಲು ಇಂದು (ಜೂ.23) ಕೊನೆಯ ದಿನವಾಗಿತ್ತು ಕಣದಲ್ಲಿ ಮೂವರೇ ಇದ್ದ ಕಾರಣದಿಂದ ಈ ಮೂವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಲಾಗಿದೆ.

ಹೆಚ್.ಕೆ. ಪಾಂಡು ಮೈಸೂರಿನ ಡಿಡಿಪಿಐ

ಮೈಸೂರು, ಜೂ.23(ಎಸ್‌ಬಿಡಿ)– ಮೈಸೂರು ಡಿಡಿಪಿಐ (ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ) ರಾಮಚಂದ್ರ ರಾಜೇ ಅರಸ್ ಅವರನ್ನು ಸ್ಥಳ ತೋರಿಸದೆ ವರ್ಗಾವಣೆ ಮಾಡಲಾಗಿದ್ದು, ಅವರ ಸ್ಥಳಕ್ಕೆ ಚಾಮರಾಜನಗರ ಡಿಡಿಪಿಐ ಹೆಚ್.ಕೆ.ಪಾಂಡು ಅವರನ್ನು ನಿಯೋಜಿಸಿದೆ. ನೂತನ ಡಿಡಿಪಿಐ ಸೋಮವಾರ ಅಧಿಕಾರ ಸ್ವೀಕರಿಸುವ ಸಾಧ್ಯತೆ ಇದೆ.



ಹೆಚ್.ಕೆ.ಪಾಂಡು

ರಾಜ್ಯದಲ್ಲಿ ಮುಂಗಾರು ಚುರುಕು ಸಾಧ್ಯತೆ: ಯೆಲ್ಲೊ, ಆರೆಂಜ್ ಅಲರ್ಟ್ ಘೋಷಣೆ

ಬೆಂಗಳೂರು, ಜೂ.23– ರಾಜ್ಯದಲ್ಲಿ ಮುಂಗಾರು ಮಳೆ ಚುರುಕುಗೊಳ್ಳುವ ಸಾಧ್ಯತೆಯಿದ್ದು, ಮುಂದಿನ ನಾಲ್ಕು ದಿನಗಳಲ್ಲಿ ಕರಾವಳಿ, ಮಲೆನಾಡು, ದಕ್ಷಿಣ ಹಾಗೂ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆ ಆಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.



ಜೂನ್ 24, 25ರಂದು ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ನೀಡಲಾಗಿದೆ. 26ರಂದು ಉತ್ತರ ಕನ್ನಡಕ್ಕೆ ಆರೆಂಜ್ ಅಲರ್ಟ್ ಹಾಗೂ ಕಲಬುರಗಿ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗಿಗೆ ಯೆಲ್ಲೊ ಅಲರ್ಟ್ ನೀಡಲಾಗಿದೆ.

27ರಂದು ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಹಾಗೂ ಶಿವಮೊಗ್ಗ, ಕಲಬುರಗಿ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ. ಕರಾವಳಿ ವ್ಯಾಪ್ತಿಯಲ್ಲಿ ಗಾಳಿಯ ವೇಗವು ಹೆಚ್ಚಲಿದೆ. ಪ್ರತಿ ತಾಸಿಗೆ 45ರಿಂದ 55 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ವೇಳೆಯಲ್ಲಿ ಮಳೆ ಆಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಶುಕ್ರವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಕಳೆದ 24 ಗಂಟೆಯಲ್ಲಿ ಉಡುಪಿಯ ಕೊಲ್ಲೂರು, ಉತ್ತರ ಕನ್ನಡ ಬೇಲಿಕೇರಿ, ಶಿರಾಲಿಯಲ್ಲಿ ತಲಾ 5 ಸೆಂ.ಮೀ, ಉತ್ತರ ಕನ್ನಡ ಕುಮುಟಾದಲ್ಲಿ 4, ಉತ್ತರ ಕನ್ನಡದ ಕಾರವಾರ, ಹೊನ್ನಾವರ, ಕದ್ರಾ, ಕ್ಯಾಸಲ್ ರಾಕ್, ದಕ್ಷಿಣ ಕನ್ನಡ ಸುಬ್ರಹ್ಮಣ್ಯ, ಕೊಡಗಿನ ಭಾಗಮಂಡಲದಲ್ಲಿ ತಲಾ 3 ಸೆಂ.ಮೀ ಮಳೆ ಸುರಿದಿದೆ.

ಮೈಸೂರು ಮಹಾರಾಣಿ ಕಾಲೇಜಲ್ಲಿ ದೇಸಿ ತಿಂಡಿ–ತಿನಿಸುಗಳ

ಘಮ ಘಮ...



ಮೈಸೂರು, ಜೂ.23(ಎಸ್‌ಬಿಡಿ)– ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಶುಕ್ರವಾರ ದೇಸಿ ಆಹಾರದ ಘಮ ಜೋರಾಗಿತ್ತು.

ದೇಸಿ ಸಂಭ್ರಮದ ಅಂಗವಾಗಿ ಆಯೋಜಿಸಲಾಗಿದ್ದ ಆಹಾರ ಮೇಳದಲ್ಲಿ ಬಗೆ ಬಗೆಯ ದೇಸಿ ತಿನಿಸುಗಳು ಬಾಯಲ್ಲಿ ನೀರೂರಿಸಿದವು. ಯುವ ಸಮುದಾಯ ಪಿಜ್ಜಾ, ಬರ್ಗರ್ ಇನ್ನಿತರ ವಿದೇಶಿ ಶೈಲಿಯ ತಿನಿಸುಗಳಿಗೆ ಮಾರು ಹೋಗಿರುವ ಸಂದರ್ಭದಲ್ಲಿ ಮಹಾರಾಣಿ ಕಾಲೇಜು ವಿದ್ಯಾರ್ಥಿನಿಯರು ನಮ್ಮೂರ ಆಹಾರವೇ ಬಲು ಸೊಗಸು ಎಂಬ ಸಂದೇಶ ಸಾರಿದರು. ರವೆ ಉಂಡೆ, ಚಕ್ಕುಲಿ, ಹಣ್ಣಿನ ಜ್ಯೂಸ್, ಬಿರಿಯಾನಿ ಸೇರಿದಂತೆ ಮನೆಯಲ್ಲಿ ತಾವೇ ತಯಾರಿಸಿ ತಂದಿದ್ದ ಹಲವು ಬಗೆಯ ತಿಂಡಿ–ತಿನಿಸುಗಳನ್ನು ಆಹಾರ ಮೇಳದಲ್ಲಿ ಮಾರಾಟ ಮಾಡಿದರು.

ಕಾಲೇಜಿನ ನೂರಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಆಹಾರ ಮೇಳದಲ್ಲಿ ಭಾಗವಹಿಸಿದ್ದರು. ಅಧ್ಯಾಪಕರು, ಸಿಬ್ಬಂದಿ ಹಾಗೂ ಎಲ್ಲಾ ವಿದ್ಯಾರ್ಥಿನಿಯರೂ ಮೇಳವನ್ನು ಸುತ್ತುಹಾಕಿ ತಮ್ಮಿಷ್ಟದ ತಿನಿಸು ಸವಿದರು. ಹಲವರು ಖರೀದಿಸಿದ ತಿಂಡಿ ಹಿಡಿದುಕೊಂಡು ಸೆಲ್ಫಿ ತೆಗೆದುಕೊಂಡರು. ಮೇಳದಲ್ಲಿ ಹಾಡು ಹೇಳಿ, ಹೆಜ್ಜೆ ಹಾಕಿ ಸಂಭ್ರಮಿಸಿದರು. ಒಟ್ಟಾರೆ ಆಹಾರ ಮೇಳದಲ್ಲಿ ದೇಸಿ ಸಂಭ್ರಮ ಮನೆ ಮಾಡಿತ್ತು.



ದೇಸಿ ಸಂಸ್ಕೃತಿಯ ಭಾಗ: ಕಾಲೇಜಿನಲ್ಲಿ ಕನ್ನಡ ಜಾನಪದ ಪರಿಷತ್ ವತಿಯಿಂದ ಆಯೋಜಿಸಿದ್ದ ದೇಸಿ ಸಂಭ್ರಮ ಕಾರ್ಯಕ್ರಮದಲ್ಲಿ ಗುರುವಾರ ವಿವಿಧ ಕಾಲೇಜು ವಿದ್ಯಾರ್ಥಿನಿಯರು ಜಾನಪದ ನೃತ್ಯ ಪ್ರದರ್ಶಿಸಿ ಗಮನ ಸೆಳೆದಿದ್ದರು. ಶುಕ್ರವಾರ ಮಹಾರಾಣಿ ಕಾಲೇಜು ವಿದ್ಯಾರ್ಥಿನಿಯರು ದೇಸಿ ಆಹಾರ ಮೇಳ ನಡೆಸಿ ಖುಷಿಪಟ್ಟರು. ಈ ಮೂಲಕ ದೇಶದ ಸಂಸ್ಕೃತಿ, ದೇಸಿ ಆಹಾರದ ಮಹತ್ವ ಸಾರಿದರು.

ಮಿಸ್ ಮಹಾರಾಣಿಗೆ ಕೊಕ್: ಕಾಲೇಜುಗಳಲ್ಲಿ ಫ್ಯಾಷನ್ ಶೋ ನಡೆಸಿ, ಮಿಸ್ ಅಥವಾ ಮಿಸ್ಟರ್ ಬಿರುದು ನೀಡಲಾಗುತ್ತದೆ. ಅದರಂತೆ ಮಹಾರಾಣಿ ಕಾಲೇಜಿನಲ್ಲೂ ಮಿಸ್ ಮಹಾರಾಣಿ ಸ್ಪರ್ಧೆ ನಡೆಸಲಾಗುತ್ತಿತ್ತು. ಆದರೆ ಇದರ ಬದಲಾಗಿ ದೇಸಿ ಸಂಸ್ಕೃತಿ ಸಾರುವಂತಹ ಕಾರ್ಯಕ್ರಮ ನಡೆಸಬೇಕೆಂಬುದು ಕಾಲೇಜು ಪ್ರಾಂಶುಪಾಲ ಡಾ.ಡಿ.ರವಿ ಅವರ ಪರಿಕಲ್ಪನೆಯಾಗಿತ್ತು. ಅಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರ ಸಹಮತದೊಂದಿಗೆ ಈ ವಿಭಿನ್ನ ಕಾರ್ಯಕ್ರಮ ರೂಪಿಸಲಾಗಿತ್ತು. ದೇಸಿ ಆಹಾರದ ಬಗ್ಗೆ ವಿದ್ಯಾರ್ಥಿನಿಯರಲ್ಲಿ ಒಲವು ಹೆಚ್ಚಿಸುವುದರ ಜೊತೆಗೆ ನಗರ ಪ್ರದೇಶದವರಿಗೆ ಪರಿಚಯಿಸಬೇಕೆಂಬ ಉದ್ದೇಶದಿಂದ ಆಹಾರ ಮೇಳ ಆಯೋಜಿಸಲಾಗಿದೆ. ವಿದ್ಯಾರ್ಥಿನಿಯರೆಲ್ಲಾ ತುಂಬಾ ಸಡಗರದಿಂದ ಭಾಗವಹಿಸಿದ್ದಾರೆ ಎಂದು ಅಧ್ಯಾಪಕರು ಖುಷಿ ವ್ಯಕ್ತಪಡಿಸಿದರು.

ಈ ವೇಳೆ ಪ್ರಾಂಶುಪಾಲ ಡಾ.ಡಿ.ರವಿ, ಅಧ್ಯಾಪಕರಾದ ಎಸ್.ವಿ.ಪ್ರಭಾಕರ್, ಡಾ. ಪರಶುರಾಮ ಮೂರ್ತಿ, ಡಾ.ರಮೇಶ್ ಬಾಬು, ಕೃಷ್ಣ ಮೋಹನ್, ಡಾ.ರವಿಶಂಕರ್, ಪ್ರೀತಿ ಎನ್.ತಲ್ಲೂರ, ಡಾ.ಸುಧಾ, ಪುಷ್ಪಲತಾ, ಸಂಧ್ಯಾರಾಣಿ, ದೀಪಾ ಹೆಬ್ಬಾರ್, ವನಿತಾ, ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಅನುಷಾ ಸಂಗಯ್ಯ, ಕಾರ್ಯದರ್ಶಿ ಅಂಬಿಕಾ, ರೇಷ್ಮಾ ಮತ್ತಿತರರಿದ್ದರು.

ಮೈಸೂರು ಮಿತ್ರ

ಕೊಪ್ಪ ಸೇತುವೆ ಮೇಲಿಂದ ಬಿದ್ದು ಚಾಲಕ ಸಾವು

ಕುಶಾಲನಗರ, ಜೂ.23– ಬೆಳಿಗಿನ ಜಾವ ವಾಯು ವಿಹಾರಕ್ಕೆ ತೆರಳಿದ್ದ ವ್ಯಕ್ತಿಯೋರ್ವ ಕೊಪ್ಪ ಸೇತುವೆ ಮೇಲಿಂದ ಬಿದ್ದು ಮೃತಪಟ್ಟಿರುವ ಘಟನೆ ನಡೆದಿದೆ.

ಪಟ್ಟಣದ ಕಾಳೇಘಾಟ್ ಮುಂಭಾಗದ ನಿವಾಸಿ ಲಾರಿ ಚಾಲಕ ಗಂಗಾಧರ್ (65) ಮೃತ ವ್ಯಕ್ತಿ. ಬೆಳಿಗಿನ ಜಾವ ವಾಕಿಂಗ್‌ಗೆ ತೆರಳಿದ್ದಾಗ ಕೊಡಗು–ಮೈಸೂರು ಗಡಿ ಕಾವೇರಿ ನದಿಯ ಹಳೆ ಸೇತುವೆ ಕೆಳಗೆ ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಸೇತುವೆ ಮೇಲಿಂದ ಹಾರಿ ಆತ್ಮಹತ್ಯೆಗೆ ಶರಣಾಗಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ. ನದಿಯಲ್ಲಿ ನೀರಿನ ಕೊರತೆ ಹಿನ್ನೆಲೆಯಲ್ಲಿ ಬಂಡೆ ಮೇಲೆ ಬಿದ್ದ ಪರಿಣಾಮ ತಲೆ ಒಡೆದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ.ಕುಶಾಲನಗರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಲ್ಲೂರು ಗ್ರಾಮದಲ್ಲಿ ಸರಣಿ ಕಳ್ಳತನ

ನಗದು, ತ್ರಿಶೂಲ ಕಳವು, ಸ್ಥಳಕ್ಕೆ ಪೊಲೀಸರ ಭೇಟಿ



ಪೊನ್ನಂಪೇಟೆ, ಜೂ.23– ಮನೆ ಮತ್ತು ಅಂಗಡಿ ಬೀಗ ಮುರಿದು ನಗದು ಮತ್ತು ಇತರ ವಸ್ತುಗಳನ್ನು ಕಳ್ಳತನ ಮಾಡಿರುವ ಘಟನೆ ಪೊನ್ನಂಪೇಟೆ ತಾಲೂಕಿನ ನಲ್ಲೂರು ಗ್ರಾಮದಲ್ಲಿ ನಡೆದಿದೆ.

ನಲ್ಲೂರು ಗ್ರಾಮದ ಟಿ.ಎ. ಜಯ ಎಂಬವರು ಕೆಲಸದ ನಿಮಿತ್ತ ಮಡಿಕೇರಿಗೆ ಬಂದಿದ್ದ ಸಂದರ್ಭ ಗುರುವಾರ ಹಾಡಹಗಲೇ ಮನೆಗೆ ನುಗ್ಗಿದ ಕಳ್ಳರು ಮನೆಯಲ್ಲಿದ್ದ ಅಂದಾಜು ರೂ.1500 ನಗದು, ದೇವರ ಹುಂಡಿಯಲ್ಲಿದ್ದ ಅಂದಾಜು 20 ಸಾವಿರಕ್ಕೂ ಅಧಿಕ ನಗದು ಹಾಗೂ 1 ಬೆಳ್ಳಿಯ ತ್ರಿಶೂಲ ವನ್ನು ಕದ್ದು ಪರಾರಿಯಾಗಿದ್ದಾರೆ. ಮತ್ತೆ ಕಳ್ಳತನ ಮುಂದುವರೆಸಿದ ಕಳ್ಳರು ಗುರುವಾರ ರಾತ್ರಿ ಸ.ಹಿ.ಪ್ರಾ. ಶಾಲೆಯ ಬಳಿ ಇರುವ ಬಶೀರ್ ಎಂಬವರ ದಿನಸಿ ಅಂಗಡಿಗೆ ಕನ್ನ ಹಾಕಿ ಅಂಗಡಿಯಿಂದ ರೂ.7500 ನಗದು ಕಳವು ಮಾಡಿದ್ದಾರೆ. ಈ 2 ಕಳ್ಳತನ ಘಟನೆಗಳ ಕುರಿತ ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಪೊನ್ನಂಪೇಟೆ ಪೊಲೀಸರು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಕೂಡ್ಲೂರು ಬಳಿ ಲಾರಿ ಡಿಕ್ಕಿ: ಬೈಕ್ ಸವಾರ ಸಾವು

ಕುಶಾಲನಗರ, ಜೂ.23– ಸಮೀಪದ ಕೂಡ್ಲೂರು ಮುಖ್ಯ ರಸ್ತೆಯಲ್ಲಿ ಲಾರಿ ಹಾಗೂ ಬೈಕ್ ನಡುವೆ ಸಂಭವಿಸಿದ ಡಿಕ್ಕಿಯಿಂದ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಗುರುವಾರ ರಾತ್ರಿ ನಡೆದಿದೆ. ಹಾಸನ ಜಿಲ್ಲೆಯ ಅರಕಲಗೂಡು ನಿವಾಸಿ ಗಂಗಾಧರ ಮೃತ ವ್ಯಕ್ತಿ. ಕುಶಾಲನಗರದಲ್ಲಿ ವಿದ್ಯುತ್ ಕಂಬದ ಕೆಲಸ ಮಾಡುತ್ತಿದ್ದ ಗಂಗಾಧರ ಕೆಲಸ ಮುಗಿಸಿ ರೂಮ್‌ಗೆ ಬೈಕ್‌ನಲ್ಲಿ ತೆರಳುತ್ತಿರುವ ವೇಳೆ ಕೂಡಿಗೆ ಕಡೆಯಿಂದ ಕಾಫಿ ವರ್ಕ್ಸ್ ಕಡೆಗೆ ಬರುತ್ತಿದ್ದ 10 ವೀಲ್ಸ್ ಲಾರಿ ಡಿಕ್ಕಿ ಹೊಡೆದಿದೆ. ಬೈಕ್ ಸವಾರನ ಮೇಲೆಯೇ ಲಾರಿ ಹರಿದ ಪರಿಣಾಮ ಬೈಕ್ ಸವಾರನ ಅರ್ಧ ದೇಹವೇ ಸಂಪೂರ್ಣ ಚಿದ್ರವಾಗಿ ರಸ್ತೆ ಪೂರ್ತಿ ರಕ್ತ ಚೆಲ್ಲಿ, ಭೀಕರವಾಗಿತ್ತು.

ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.ಲಾರಿ ಚಾಲಕನನ್ನು ವಶಕ್ಕೆ ಪಡೆದಿದ್ದು, ಕುರಿತು ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ಅವಾಂತರ: ಗೃಹೋಪಯೋಗಿ ವಸ್ತುಗಳು ಭಸ್ಮ



ಮಡಿಕೇರಿ, ಜೂ.23– ವಿದ್ಯುತ್ ಅವಘಡ ದಿಂದಾಗಿ ಗೃಹೋಪಯೋಗಿ ವಸ್ತುಗಳು ಸುಟ್ಟು ಕರಕಲಾಗಿರುವ ಘಟನೆ ಕೂಡಿಗೆ ಸಮೀಪದ ಕಣಿವೆ ಗ್ರಾಮದಲ್ಲಿ ನಡೆದಿದೆ.


ಕಣಿವೆ ಗ್ರಾಮದ ನಿವಾಸಿ ಪೂರ್ಣಿಮ ಎಂಬುವರ ಮನೆಯಲ್ಲಿ ಗುರುವಾರ ರಾತ್ರಿ ಈ ಘಟನೆ ನಡೆದಿದ್ದು, ಮನೆಮಂದಿ ಅಪಾಯ ದಿಂದ ಪಾರಾಗಿದ್ದಾರೆ. ಮನೆಯಲ್ಲಿದ್ದ ಗೃಹೋಪಯೋಗಿ ವಸ್ತುಗಳೆಲ್ಲ ಸುಟ್ಟು ಕರಕಲಾಗಿದ್ದು, ಅಪಾರ ನಷ್ಟ ಸಂಭವಿಸಿದೆ. ಅಕ್ಕ ಪಕ್ಕದ ಮನೆಯವರು ಮತ್ತು ಅಗ್ನಿ ಶಾಮಕ ಠಾಣೆಯ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಬೆಂಕಿ ನಂದಿಸುವಲ್ಲಿ ಸಫಲರಾಗಿದ್ದಾರೆ. ವಿದ್ಯುತ್ ಅವಘಡಕ್ಕೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಅನಾಹುತ ದಿಂದ ಆಗಿರುವ ನಷ್ಟಕ್ಕೆ ಪರಿಹಾರ ನೀಡಬೇಕೆಂದು ಪೂರ್ಣಿಮ ಮನವಿ ಮಾಡಿದ್ದಾರೆ.

ಈ ಬಾರಿ ಭಾಗಮಂಡಲ, ಮಡಿಕೇರಿ, ವಿರಾಜಪೇಟೆಯಲ್ಲಿ ಭೂ ಕುಸಿತದ ಭೀತಿ

ವಿಪತ್ತು ನಿರ್ವಹಣಾ ಪ್ರಾಧಿಕಾರದ ಉಪಾಧ್ಯಕ್ಷ ಕೃಷ್ಣಭೈರೇಗೌಡ ಸುಳಿವು

ಕಟ್ಟೆಚ್ಚರ ವಹಿಸಲು ಅಧಿಕಾರಿಗಳಿಗೆ ಸೂಚನೆ





ಬೆಂಗಳೂರು, ಜೂ.23– ಈ ಬಾರಿ ಕೊಡಗು ಜಿಲ್ಲೆಯ ಮಡಿಕೇರಿ, ವಿರಾಜಪೇಟೆ ಸೇರಿದಂತೆ ರಾಜ್ಯದ ಕೆಲವೆಡೆ ಭೂ ಕುಸಿತ ಸಂಭವಿಸುವ ಸಾಧ್ಯತೆ ಇದೆ.

ವಿಪತ್ತು ನಿರ್ವಹಣಾ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ಕಂದಾಯ ಸಚಿವ ಕೃಷ್ಣಭೈರೇಗೌಡ ಈ ಸುಳಿವು ನೀಡಿದ್ದು, ಕಟ್ಟೆಚ್ಚರ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. 2018ರಲ್ಲಿ ಕೊಡಗು ಭಾಗದಲ್ಲಿ ಭೂ ಕುಸಿತ ಉಂಟಾಗಿ 21ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದು, ರಾಜ್ಯದಲ್ಲಿ ಇಂತಹ ಕಹಿ ಘಟನೆ ಮತ್ತೆ ಮರುಕಳಿಸಬಾರದು ಎಂದು ತಿಳಿಸಿದ ಅವರು, ಈ ಬಾರಿ ಕೂಡ ಮೂಡಿಗೆರೆ, ಸುಳ್ಯ, ಭಾಗಮಂಡಲ, ಮಡಿಕೇರಿ, ವಿರಾಜ ಪೇಟೆ ಮತ್ತು ಸಕಲೇಶಪುರ ಸೇರಿದಂತೆ ಹಲವು ಕಡೆ ಭೂ ಕುಸಿತ ಉಂಟಾಗುವ ಸಾಧ್ಯತೆ ಇರುವುದರಿಂದ ಅಧಿಕಾರಿಗಳು ಕಟ್ಟೆಚ್ಚರ ವಹಿಸಿ, ಇಂತಹ ಅನಾಹುತಗಳನ್ನು ತಡೆಯಬೇಕು ಎಂದರು.

ಬೆಂಗಳೂರು ನಗರದಲ್ಲಿ ಪ್ರತಿ ಮಳೆಗಾಲದಲ್ಲೂ ಪ್ರವಾಹದ ಪರಿಸ್ಥಿತಿ ಉಂಟಾಗಲಿದ್ದು, ಇದನ್ನು ತಡೆದು ಮಳೆ ನಿರ್ವಹಣೆ ಮಾಡುವ ಸಲುವಾಗಿ 250 ಕೋಟಿ ರೂ.ಗಳ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ ಎಂದು ಸಚಿವರು ಬೆಂಗಳೂರಿನ ನಾಯಂಡಹಳ್ಳಿ, ಹೆಬ್ಬಾಳ, ನಾಗವಾರ ಸೇರಿದಂತೆ ಹಲವು ಪ್ರದೇಶಗಳಲ್ಲಿ ಪ್ರವಾಹದ ಸ್ಥಿತಿ ತಲೆದೋರುವುದರಿಂದ ಅಧಿಕಾರಿಗಳು ಈಗಿನಿಂದಲೇ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ ಎಂದರು.

ಬೆಂಗಳೂರಿನ ಎಲ್ಲಾ ಕೆರೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಅಧಿಕಾರಿಗಳು ವರದಿ ಸಿದ್ಧಪಡಿಸಬೇಕು. ಆ ವರದಿ ಆಧಾರದ ಮೇಲೆ ಎಲ್ಲಾ ಕೆರೆಗಳನ್ನು ಅಭಿವೃದ್ಧಿಪಡಿಸಿ, ಬೆಂಗಳೂರಿನಲ್ಲಿ ಮಳೆಗಾಲದಲ್ಲಿ ತಲೆದೋರುವ ಪ್ರವಾಹ ಪರಿಸ್ಥಿತಿಯನ್ನು ನಿಯಂತ್ರಿಸಬಹುದು ಎಂದು ಇದೇ ಸಂದರ್ಭದಲ್ಲಿ ಅವರು ಸೂಚಿಸಿದರು.

ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಕೃಷ್ಣ ಭೈರೇಗೌಡರು ಹವಾಮಾನ ಇಲಾಖೆಯ ಮುನ್ಸೂಚನೆಗಳನ್ನು ಪರಿಶೀಲಿಸಿ ಅಧಿಕಾರಿಗಳಿಂದ ತುರ್ತು ಕ್ರಮದ ಬಗ್ಗೆ ಮಾಹಿತಿ ಪಡೆದರು.

ಜೂ.27, ನಾಡಪ್ರಭು ಕೆಂಪೇಗೌಡರ ಜಯಂತಿ



ಮಡಿಕೇರಿ, ಜೂ.23– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಒಕ್ಕಲಿಗರ ಸಂಘ ಮತ್ತು ಕೊಡಗು ಗೌಡ ಸಮಾಜಗಳ ಸಹಕಾರದೊಂದಿಗೆ ನಾಡಪ್ರಭು, ಆದರ್ಶ ಆಡಳಿತಗಾರ ಕೆಂಪೇಗೌಡರ ಜಯಂತಿಯು ಜೂ.27 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಕೊಡಗು ಗೌಡ ಸಮಾಜದಲ್ಲಿ ನಡೆಯಲಿದೆ.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು, ಶಾಸಕರಾದ ಡಾ.ಮಂಥರ್ ಗೌಡ, ಎ.ಎಸ್.ಪೊನ್ನಣ್ಣ, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಂ.ಪಿ. ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಸ್.ಎಂ.ಚಂಗಪ್ಪ, ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಆರ್.ಸೋಮಣ್ಣ, ಕೊಡಗು ಗೌಡ ಸಮಾಜದ ಅಧ್ಯಕ್ಷ ಪೇರಿಯನ ಜಯಾನಂದ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಪಂ ಸಿಇಓ ಡಾ.ಎಸ್. ಆಕಾಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಇತರರು ಪಾಲ್ಗೊಳ್ಳಲಿದ್ದಾರೆ. ವಕೀಲ ಕೆ.ಆರ್.ವಿದ್ಯಾಧರ ಅವರು ಉಪನ್ಯಾಸ ನೀಡಲಿದ್ದಾರೆ.

ಮಡಿಕೇರಿ ನೂತನ ಖಾಸಗಿ ಬಸ್ ನಿಲ್ದಾಣ ವೃತ್ತಕ್ಕೆ 'ಪಂದ್ಯಂಡ ಬೆಳ್ಳಪ್ಪ'ರ ಹೆಸರಿಡಲು ಮನವಿ



ಮಡಿಕೇರಿ, ಜೂ.23– ನಗರದ ನೂತನ ಖಾಸಗಿ ಬಸ್ ನಿಲ್ದಾಣದ ವೃತ್ತಕ್ಕೆ ಸ್ವಾತಂತ್ರ್ಯ ಹೋರಾಟಗಾರ 'ಪಂದ್ಯಂಡ ಬೆಳ್ಳಪ್ಪ' ಅವರ ಹೆಸರನ್ನು ಇಡಬೇಕೆಂದು ಅಲ್ಲಾರಂಡ ರಂಗ ಚಾವಡಿಯ ಅಧ್ಯಕ್ಷ ಅಲ್ಲಾರಂಡ ವಿಠಲ ನಂಜಪ್ಪ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಡಿಕೇರಿ ನಗರಸಭೆ ಖಾಸಗಿ ಬಸ್ ನಿಲ್ದಾಣದ ವೃತ್ತಕ್ಕೆ ಸ್ವಾಮಿ ವಿವೇಕಾನಂದರ ಹೆಸರಿಡಲು ಮುಂದಾಗಿ, ಜೂನ್ ಅಂತ್ಯದ ಒಳಗಾಗಿ ಆಕ್ಷೇಪಣೆಗಳನ್ನು ಆಹ್ವಾನಿಸಿದೆ. ಈ ಹಿನ್ನೆಲೆ ಸಾರ್ವಜನಿಕರ ಪರವಾಗಿ ವೃತ್ತಕ್ಕೆ ಪಂದ್ಯಂಡ ಬೆಳ್ಳಪ್ಪ ಅವರ ಹೆಸರನ್ನು ಇಡುವಂತೆ ಸೂಚಿಸಿ ಆಕ್ಷೇಪಣೆ ಸಲ್ಲಿಸಲಾಗಿದೆ. ಇದು ಯಾವುದೇ ಕಾರಣಕ್ಕೂ ಸ್ವಾಮಿ ವಿವೇಕಾನಂದರ ಇಡೀ ಜಗತ್ತೆ ಮಾನ್ಯ ಮಾಡಿರುವ ತತ್ತ್ವ ಸಿದ್ಧಾಂತಗಳ ವಿರುದ್ಧವಾಗಿ ಅಲ್ಲವೆಂದು ಸ್ಪಷ್ಟಪಡಿಸಿದರು.

ಕೊಡಗಿನಲ್ಲಿ ಕೊಡಗಿಗಾಗಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ದುಡಿದ ಮಹನೀಯರನ್ನು ಸ್ಮರಿಸುವುದು, ಅವರ ಚಿಂತನೆಗಳನ್ನು ಜನರಿಗೆ ಮುಟ್ಟಿಸುವುದು ಮತ್ತು ಆ ಮೂಲಕ ಯುವ ಸಮೂಹಕ್ಕೆ ಪ್ರೇರಣೆ ನೀಡುವ ಕಾರ್ಯ ನಡೆಯಬೇಕಾಗಿದೆ. ಈ ಹಿನ್ನೆಲೆ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಾದ ಪಂದ್ಯಂಡ ಬೆಳ್ಳಪ್ಪ ಅವರ ಹೆಸರನ್ನು ನೂತನ ಖಾಸಗಿ ಬಸ್ ನಿಲ್ದಾಣದ ವೃತ್ತಕ್ಕೆ ಇರಿಸಬೇಕು ಮತ್ತು ಅಲ್ಲಿ ಸ್ಥಾಪಿಸುವ ಅವರ ಪುತ್ಥಳಿಯ ಬಳಿ ಅವರ ಹೋರಾಟದ ಬದುಕು, ಸಾಧನೆಯ ಮಾಹಿತಿ ದೊರಕುವಂತೆ ಮಾಡಬೇಕೆಂದು ಒತ್ತಾಯಿಸಿದರು.

ಸ್ವಾತಂತ್ರ್ಯ ಚಳುವಳಿ ಸಂದರ್ಭ ರಾಷ್ಟ್ರ ನಾಯಕರೊಂದಿಗೆ ನಿರಂತರ ಸಂಪರ್ಕ ಹೊಂದಿದ್ದ ಪಂದ್ಯಂಡ ಬೆಳ್ಳಪ್ಪ ಅವರು, ಹಲವಾರು ಬಾರಿ ಕಾರಾಗೃಹ ವಾಸವನ್ನು ಅನುಭವಿಸಿದವರು, 1934ರಲ್ಲಿ ಮಹಾತ್ಮಾ ಗಾಂಧೀಜಿಯವರು ಕೊಡಗಿಗೆ ಆಗಮಿಸಲು ಕಾರಣರಾದ ಮಹನೀಯರು. ಜಿಲ್ಲೆಯಲ್ಲಿ ಶೋಷಿತ ಸಮುದಾಯಗಳ ಉದ್ಧಾರಕ್ಕಾಗಿ ಶ್ರಮಿಸಿದ ಪಂದ್ಯಂಡ ಬೆಳ್ಳಪ್ಪ ಅವರು, ಆ ದಿನಗಳಲ್ಲೆ ಶಿಕ್ಷಣದ ಮಹತ್ವವನ್ನು ಅರಿತು ಮಡಿಕೇರಿಯಲ್ಲಿ ಈಗಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಸ್ಥಾಪನೆಗೆ ಕಾರಣರಾದ ಮಹಾನ್ ವ್ಯಕ್ತಿ. ಇವರು ಸ್ವಾತಂತ್ರ್ಯ ಹೋರಾಟದಲ್ಲಿನ ಮಹತ್ತರ ಪಾತ್ರವನ್ನು ಗಮನಿಸಿ, ಸರ್ಕಾರ ನೀಡಿದ ಇಪ್ಪತ್ತು ಏಕರೆ ಜಾಗವನ್ನು ಸರ್ಕಾರಕ್ಕೆ ಮರಳಿಸಿದ ಧೀಮಂತ ವ್ಯಕ್ತಿ ಪಂದ್ಯಂಡ ಬೆಳ್ಳಪ್ಪ ಅವರಾಗಿದ್ದು, ಅವರ ಹೆಸರಿನ ವೃತ್ತ ಸ್ಥಾಪನೆಯಾಗಬೇಕೆನ್ನುವುದು ನಮ್ಮೆಲ್ಲರ ಅಪೇಕ್ಷೆ ಎಂದರು. ಗೋಷ್ಠಿಯಲ್ಲಿ ಸಮಾಜ ಸೇವಕ ಮಂಡೀರ ಸದಾ ಮುದ್ದಪ್ಪ ಉಪಸ್ಥಿತರಿದ್ದರು.

ಮಣಿಪುರದಲ್ಲಿ ಕ್ರೈಸ್ತ ಸಮುದಾಯದ ಮೇಲೆ ದೌರ್ಜನ್ಯ

ಜೂ.28ರಂದು ಮಡಿಕೇರಿಯಲ್ಲಿ ಶಾಂತಿಯುತ ಪ್ರತಿಭಟನೆ

ಮಡಿಕೇರಿ, ಜೂ.23– ಮಣಿಪುರ ರಾಜ್ಯದಲ್ಲಿ ಕ್ರೈಸ್ತ ಸಮುದಾಯದ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದೆ ಎಂದು ಆರೋಪಿಸಿರುವ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕ್ರಿಶ್ಚಿಯನ್ ಘಟಕ, ಕೇಂದ್ರ ಸರ್ಕಾರದ ವಿರುದ್ಧ ಜೂ.28 ರಂದು ಶಾಂತಿಯುತ ಪ್ರತಿಭಟನೆಯನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕ್ರಿಶ್ಚಿಯನ್ ಘಟಕದ ಪ್ರಮುಖರು ಕೇಂದ್ರ ಸರ್ಕಾರದ ನಿಷ್ಕ್ರೀಯ ಧೋರಣೆಯಿಂದ ಮಣಿಪುರದಲ್ಲಿ ಚರ್ಚ್‌ಗಳ ಮೇಲೆ ದಾಳಿಯಾಗುತ್ತಿದೆ ಮತ್ತು ಕ್ರೈಸ್ತರನ್ನು ಹಿಂಸಿಸಲಾಗುತ್ತಿದೆ ಎಂದು ಆರೋಪಿಸಿದರು. ಕೇಂದ್ರದ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ಮತ್ತು ದೌರ್ಜನ್ಯ ನಡೆಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ಕ್ರೈಸ್ತರಿಗೆ ಸೂಕ್ತ ರಕ್ಷಣೆ ನೀಡಬೇಕೆಂದು ಒತ್ತಾಯಿಸಿ ಕಪ್ಪು ಪಟ್ಟಿ ಧರಿಸಿ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸುವುದಾಗಿ ತಿಳಿಸಿದರು.

ಬುಧವಾರ ಬೆಳಗ್ಗೆ 10.30 ಗಂಟೆಗೆ ನಗರದ ಸಂತ ಮೈಕಲರ ಚರ್ಚ್ ಬಳಿಯಿಂದ ಜನರಲ್ ತಿಮ್ಮಯ್ಯ ವೃತ್ತ ಮತ್ತು ಮಂಗೇರಿರ ಮುತ್ತಣ್ಣ ವೃತ್ತದ ಮೂಲಕ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಲಿದೆ. ಧರ್ಮಗುರುಗಳು, ಧಾರ್ಮಿಕ ಮುಖಂಡರು ಹಾಗೂ ಸರ್ವ ಕ್ರೈಸ್ತ ಬಾಂಧವರು ಬೃಹತ್ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿ ದೌರ್ಜನ್ಯದ ವಿರುದ್ಧ ಕ್ರಮಕ್ಕೆ ಒತ್ತಾಯಿಸಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಜಾನ್ಸನ್ ಪಿಂಟೋ, ತೆರೇಸಾ ವಿಕ್ಟರ್, ಜೋಕಿಂ ರಾಡ್ರಿಗಸ್, ಅಗಸ್ಟಿನ್ ಜಯರಾಜ್, ಸುನೀಲ್ ಪತ್ರಾವೊ, ವಿ.ಎ.ಲಾರೆನ್ಸ್, ಫಿಲೋಮಿನಾ ಹಾಗೂ ಅಗಸ್ಟಿನ್ ಬೆನ್ನಿ ಉಪಸ್ಥಿತರಿದ್ದರು.

ಜೂ.26, ಜಾಥಾ

ಚಾಮರಾಜನಗರ, ಜೂ.23– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಅಂತಾರಾಷ್ಟ್ರೀಯ ಮಾದಕ ವಸ್ತು ಸೇವನೆ ಮತ್ತು ಕಳ್ಳ ಸಾಗಾಣಿಕೆ ವಿರೋಧಿ ದಿನಾಚರಣೆ ಅಂಗವಾಗಿ ಜಾಥಾ ಕಾರ್ಯಕ್ರಮವನ್ನು ಜೂ.26 ರಂದು ಬೆಳಗ್ಗೆ 10.30ಕ್ಕೆ ನಗರದ ಚಾಮರಾಜೇಶ್ವರ ದೇವಸ್ಥಾನದಿಂದ ಜಿಲ್ಲಾಡಳಿತ ಭವನದವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಿಖಿತ ಎಸ್.ಅನುರಾಧಗೆ ಪಿಹೆಚ್.ಡಿ ಪದವಿ



ಯಳಂದೂರು, ಜೂ.23– ಡಾ.ಎಂ.ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಪಟ್ಟಣದ ವೈ.ಎಂ.ಮಲ್ಲಿಕಾರ್ಜುನಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ಉಪನ್ಯಾಸಕಿ ಲಿಖಿತ ಎಸ್.ಅನುರಾಧ ಅವರು ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಆಂಗ್ಲ ಭಾಷೆಯಲ್ಲಿ 'ಎ ಸ್ಟಡಿ ಆಫ್ ಟೀಚರ್ಸ್ ಅಕೌಂಟೆಬಿಲಿಟಿ ಅಂಡ್ ಇಟ್ಸ್ ಇನ್‌ಫ್ಲೂಯೆನ್ಸ್ ಆನ್ ದೇರ್ ಪರ್ಫಾರ್ಮೆನ್ಸ್' ಎಂಬ ವಿಷಯದ ಬಗ್ಗೆ ಸಂಶೋಧನೆ ನಡೆಸಿ ಸಾದರ ಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಣೆ ತಿಳಿಸಿದೆ.

ನಾಳೆ ವಿದ್ಯುತ್ ವ್ಯತ್ಯಯ



ಚಾಮರಾಜನಗರ, ಜೂ.23– ಚೆಸ್ಕಾಂ ವತಿಯಿಂದ ಚಾಮರಾಜನಗರ ಉಪ ವಿಭಾಗ ವ್ಯಾಪ್ತಿಯಲ್ಲಿ 1ನೇ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ಜೂ.25 ರಂದು ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ಬದನಗುಪ್ಪೆ, ಪಣ್ಯದ ಹುಂಡಿ, ಬೆಂಡರವಾಡಿ, ಕೆಲ್ಲಂಬಳ್ಳಿ ಎನ್‌ಜೆವೈ, ಇಂಡಸ್ಟ್ರಿಯಲ್ ಏರಿಯಾ, ಕೆಇಡಿಪಿ 10 ಮತ್ತು 11, ಮುತ್ತಿಗೆ, ಹೆಗ್ಗೋಠಾರ ಹಾಗೂ ಕೆಐಎಡಿಬಿ ಇಂಡಸ್ಟ್ರೀಯಲ್ ಏರಿಯಾ ಮರಿಯಾಲ, ಬೇಡರಪುರ, ಕೆಲ್ಲಂಬಳ್ಳಿ, ಬಸವನಪುರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ದೌರ್ಜನ್ಯ ಸಂತ್ರಸ್ತರಿಗೆ ಕಾನೂನು ನೆರವು ಒದಗಿಸಿ

ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಸೂಚನೆ



ಚಾಮರಾಜನಗರ, ಜೂ.23– ದೌರ್ಜನ್ಯಕ್ಕೆ ಒಳಗಾದ ಪರಿಶಿಷ್ಟ ಜಾತಿ, ವರ್ಗದ ಸಂತ್ರಸ್ತರಿಗೆ ಅಗತ್ಯ ಕಾನೂನು ನೆರವು ಒದಗಿಸಬೇಕು ಎಂದು ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರಿಶಿಷ್ಟರ ಮೇಲಿನ ದೌರ್ಜನ್ಯಗಳ ಬಗ್ಗೆ ಸೂಕ್ತ ಕ್ರಮ ವಹಿಸಬೇಕು. ಈ ನಿಟ್ಟಿನಲ್ಲಿ ಯಾವುದೇ ವಿಳಂಬ ಧೋರಣೆ ಬೇಡ. ದೌರ್ಜನ್ಯ ಪ್ರಕರಣಗಳ ಇತ್ಯರ್ಥಕ್ಕೆ ಹಾಗೂ ಬಾಕಿ ಉಳಿದಿರುವ ಪ್ರಕರಣಗಳ ವಿರುದ್ಧ ಕ್ರಮ ವಹಿಸಲು ಹೆಚ್ಚು ಒತ್ತು ನೀಡಬೇಕು. ಪರಿಶಿಷ್ಟರ ಮೇಲೆ ಅಮಾನವೀಯ ಪ್ರಕರಣಗಳು ಮರುಕಳಿಸದಂತೆ ನೋಡಿಕೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ ನಡೆದಿರುವ ಸುಳ್ವಾಡಿ ಪ್ರಕರಣ ಗಂಭೀರ ಪ್ರಕರಣವಾಗಿದ್ದು, ಸಂತ್ರಸ್ತ ಕುಟುಂಬದವರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಪ್ರತಿ 3 ತಿಂಗಳಿಗೊಮ್ಮೆ ಆರೋಗ್ಯ ಇಲಾಖೆಯಿಂದ ಶಿಬಿರಗಳನ್ನು ಆಯೋಜಿಸಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಬೇಕು. ಸಂತ್ರಸ್ತರ ಆರೋಗ್ಯ ತಪಾಸಣೆಯನ್ನು ಕಟ್ಟುನಿಟ್ಟಾಗಿ ಕೈಗೊಳ್ಳಬೇಕು ಎಂದು ತಿಳಿಸಿದರು. ಕೊಳ್ಳೇಗಾಲ ತಾಲೂಕು ನರೀಪುರದಲ್ಲಿ ಪರಿಶಿಷ್ಟರಿಗೆ ನಿವೇಶನ ನೀಡಿದ್ದು, ಸೂಕ್ತ ದಾಖಲೆಗಳನ್ನು ತಾಲೂಕು ತಹಸೀಲ್ದಾರ್ ಅವರು ಒದಗಿಸಬೇಕು. ಸುಳ್ವಾಡಿ ಪ್ರಕರಣದಲ್ಲಿ ನೊಂದ ಕುಂಟುಂಬಗಳಿಗೆ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಯೋಜನೆಯಡಿ 2 ಎಕರೆ ಜಮೀನು ನೀಡಬೇಕು ಎಂದರು.

ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ಸದಸ್ಯ ಕೆಂಪನಪಾಳ್ಯ ಸಿದ್ದರಾಜು, ಆಸಿಫ್ ಉಲ್ಲಾ, ಗುಂಡ್ಲುಪೇಟೆ ಸಿದ್ದರಾಜು, ಎಎಸ್ಪಿ ಟಿ.ಜೆ.ಉದೇಶ್, ಉಪವಿಭಾಗಾಧಿಕಾರಿ ಗೀತಾ ಹುಡೇದ, ಜಿಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಲ್ಲಿಕಾರ್ಜುನ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ವಿಶ್ವೇಶ್ವರಯ್ಯ, ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಜೂ.26, ಬೇಗೂರಲ್ಲಿ ಬಸವ ಜಯಂತಿ



ಬೇಗೂರು, ಜೂ.23– ವಿಶ್ವಗುರು ಬಸವೇಶ್ವರ ಸೇವಾ ಸಮಿತಿಯಿಂದ ಗ್ರಾಮದಲ್ಲಿ 2ನೇ ವರ್ಷದ ಬಸವ ಜಯಂತಿ ಜೂ.26 ರಂದು ವಿಜೃಂಭಣೆಯಿಂದ ನಡೆಯಲಿದೆ.

ಅಂದು ಬೆಳಗ್ಗೆ 8 ಗಂಟೆಗೆ ಗ್ರಾಮದ ಶ್ರೀಬಂಡಿಗೇರೆ ಮಹದೇಶ್ವರಸ್ವಾಮಿ ದೇವಾಲಯದ ಆವರಣದಿಂದ ಶ್ರೀಬಸವೇಶ್ವರ ಭಾವಚಿತ್ರದ ಮೆರವಣಿಗೆ ವಿವಿಧ ಕಲಾ ತಂಡಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಲಿದೆ. ಸೋಮಹಳ್ಳಿ ಶಿಲಾ ಮಠಾಧ್ಯಕ್ಷ ಸಾನಿಧ್ಯ ವಹಿಸಲಿದ್ದು, ಮಾದಪಟ್ಟಣ ವಿರಕ್ತ ಮಠ ಹಾಗೂ ಶ್ರೀವಿಶ್ವ ಗುರು ಬಸವೇಶ್ವರ ಸೇವಾ ಸಮಿತಿ ಗೌರವಾಧ್ಯಕ್ಷ ಶ್ರೀತೋಂಟದಾರ್ಯಸ್ವಾಮಿ, ಶಿವಕುಮಾರಪುರ ವಿರಕ್ತ ಮಠದ ಶ್ರೀಇಮ್ಮಡಿ ಮಹಾಂತಸ್ವಾಮೀಜಿ, ಕಬ್ಬಹಳ್ಳಿ ಪಟ್ಟದ ಮಠದ ಶ್ರೀಗುರುಸಿದ್ದಸ್ವಾಮೀಜಿ, ಭೋಗಯ್ಯನಹುಂಡಿ ಗುರುಮಲ್ಲೇಶ್ವರ ದಾಸೋಹ ಭಿಕ್ಷದ ಮಠದ ಶ್ರೀನಂಜುಂಡಸ್ವಾಮಿ, ಕೊಡಗಾಪುರ ಮಠದ ಶ್ರೀಮಹದೇವಸ್ವಾಮಿ ಭಾಗವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್, ಮಾಜಿ ಸಚಿವೆ ಗೀತಾ, ಮಾಜಿ ಶಾಸಕ ಸಿ.ಎಸ್.ನಿರಂಜನ್, ವೀರಶೈವ ಮಹಾಸಭಾ ಜಿಲ್ಲಾ ಧ್ಯಕ್ಷ ನಂದೀಶ್, ಹೆಚ್.ಎಸ್.ನಂಜಪ್ಪ, ಮನು ಶ್ಯಾನುಭೋಗ್ ಉಪಸ್ಥಿತರಿರುವರು. ಮಧ್ಯಾಹ್ನ 1 ಗಂಟೆಗೆ ಗಂಗಾಧರೇಶ್ವರ ಕಲ್ಯಾಣ ಮಂಟಪದಲ್ಲಿ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕುಡಿಯುವ ನೀರಿನ ಪೈಪ್‌ಲೈನ್ ಸ್ಥಳಾಂತರಕ್ಕೆ ಕ್ರಮ: ಸಿ.ಪುಟ್ಟರಂಗಶೆಟ್ಟಿ



ಚಾಮರಾಜನಗರ, ಜೂ.23– ನಗರದ ಜಿಲ್ಲಾಡಳಿತ ಭವನದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿ ಹಾದುಹೋಗಿರುವ ರಾಜಕಾಲುವೆಯಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ತಡೆಯಾಗಿರುವ ಕಾವೇರಿ ಕುಡಿಯುವ ನೀರಿನ ಪೈಪ್‌ಲೈನ್ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ಶುಕ್ರವಾರ ಮಧ್ಯಾಹ್ನ ಅಧಿಕಾರಿಗಳೊಂದಿಗೆ ರಾಜಕಾಲುವೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಅವರು, ರಾಜ ಕಾಲುವೆಯಲ್ಲಿ ಕಾವೇರಿ ಕುಡಿಯುವ ನೀರು ಪೈಪ್‌ಲೈನ್ ಅಡ್ಡಲಾಗಿರುವ ಕಾರಣ ಕಾಲುವೆಯಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗದೆ ಜೋಡಿರಸ್ತೆ ಜಲಾವೃತವಾಗಿ ಜನತೆಗೆ ತುಂಬಾ ತೊಂದರೆ ಉಂಟಾಗಿರುವುದನ್ನು ಮನಗಂಡು ಕಾಲುವೆಯಲ್ಲಿ ನೀರು ಸರಾಗವಾಗಿ ಹರಿದು ಹೋಗಲು ತಡೆಯಾಗಿರುವ ಕಾವೇರಿ ಕುಡಿಯುವ ನೀರಿನ ಪೈಪ್‌ಲೈನ್ ಸ್ಥಳಾಂತರ ಮಾಡಲು ಶಾಸಕರ ಅನುದಾನದಲ್ಲಿ 11 ಲಕ್ಷ ರೂ. ಬಳಕೆ ಮಾಡಿಕೊಳ್ಳುವಂತೆ ಸ್ಥಳದಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭ ಪೌರಾಯುಕ್ತ ರಾಮದಾಸ್, ಹಿರಿಯ ಆರೋಗ್ಯ ನಿರೀಕ್ಷರಾದ ಮಂಜುನಾಥ್, ಸುಷ್ಮಾ, ಜೆಇ ಶಿವಶಂಕರಾಧ್ಯ ಇತರರು ಹಾಜರಿದ್ದರು.

ಸಾಲಕ್ಕಾಗಿ ಅರ್ಜಿ ಆಹ್ವಾನ


ಚಾಮರಾಜನಗರ, ಜೂ.23– ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2023–24ನೇ ಸಾಲಿನ ವಿದೇಶಿ ವಿದ್ಯಾಭ್ಯಾಸ OVERSEAS EDUCATION ಸಾಲ ಯೋಜನೆಯಡಿ ಸಾಲ ನೀಡಲಿದ್ದು, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಎನ್‌ಎಂಡಿಎಫ್‌ಸಿ ಮಾದರಿಯಲ್ಲಿ ವಿದೇಶದಲ್ಲಿ ವ್ಯಾಸಂಗ ಮಾಡಲು ಬಯಸುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಮಾನ್ಯತೆ ಪಡೆದಿರುವ ಯಾವುದೇ ವಿದೇಶ ವಿವಿಯಿಂದ, ಭಾರತ ದೇಶದ ಪ್ರತಿಷ್ಠಿತ ಐಐಟಿ, ಐಐಎಂಎಸ್, ಐಎಸ್‌ಸಿ ಸಂಸ್ಥೆಗಳಲ್ಲಿ ಪದವಿ, ಸ್ನಾತಕೊತ್ತರ ಪದವಿ ಮಾಡ ಬಯಸುವ ವಿದ್ಯಾರ್ಥಿಗಳಿಗೆ ವಿದೇಶಿ ವಿದ್ಯಾಭ್ಯಾಸ ಸಾಲ ಯೋಜನೆಯಡಿ ಸಾಲ ನೀಡಲಾಗುತ್ತದೆ.

ಅರ್ಜಿಯನ್ನು ವೆಬ್‌ಸೈಟ್ https://kmdconline.karnataka.gov.in ಆನ್‌ಲೈನ್ ಮೂಲಕ ಸಲ್ಲಿಸಬೇಕು. ನಂತರ ಅಗತ್ಯ ದಾಖಲಾತಿಗಳನ್ನು ನಗರದ ಜಿಲ್ಲಾಡಳಿತ ಭವನದಲ್ಲಿರುವ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ನಿಗಮದ ಜಿಲ್ಲಾ ಕಚೇರಿ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಜಾನಪದ ಕಲೆ, ಸಂಸ್ಕೃತಿ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ

ಗಡಿನಾಡು ಸಾಂಸ್ಕೃತಿಕ ಉತ್ಸವದಲ್ಲಿ ಶಾಸಕ ಎಂ.ಆರ್.ಮಂಜುನಾಥ್



ಹನೂರು, ಜೂ.23– ಜಾನಪದ ಕಲೆ ಮತ್ತು ಸಂಸ್ಕೃತಿ ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಶಾಸಕ ಎಂ.ಆರ್.ಮಂಜುನಾಥ್ ತಿಳಿಸಿದರು.

ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿ ನೆನಪು ಗಡಿನಾಡು ಸಾಂಸ್ಕೃತಿಕ ಉತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಗಡಿನಾಡು ಉತ್ಸವ ಈ ಪ್ರದೇಶದ ಅಭಿವೃದ್ಧಿಗೆ ಪೂರಕವಾಗಿದೆ. ಮಹದೇಶ್ವರ ಬೆಟ್ಟದಲ್ಲಿ ಜಾನಪದ ಕಲೆ ಹಾಸು ಹೊಕ್ಕಾಗಿದೆ. ಈ ಕಲೆಯನ್ನು ಉಳಿಸುವ ಮೂಲಕ ಮುಂದಿನ ಪೀಳಿಗೆಗೆ ಕೊಂಡೊಯ್ಯಲು ಎಲ್ಲರ ಸಹಕಾರ ಮುಖ್ಯ ಎಂದರು.

ಶಾಸಕನಾದ ಬಳಿಕ ಮೊದಲ ಬಾರಿಗೆ ಶ್ರೀಮಹದೇಶ್ವರನ ಸನ್ನಿಧಿಗೆ ಆಗಮಿಸಿದ್ದು, ಕ್ಷೇತ್ರದ ಅಭಿವೃದ್ಧಿ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲಾಗುವುದು. ಅಲ್ಲದೇ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ ಕಾಡಂಚಿನ ಗ್ರಾಮಗಳ ಅಭಿವೃದ್ಧಿಗೆ ವಿಶೇಷ ಯೋಜನೆ ಜಾರಿಗೊಳಿಸಲಾಗುವುದು ಎಂದರು.

ಗಡಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸೋಮಶೇಖರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಶರಣ ಸಂಸ್ಕೃತಿಯೊಂದಿಗೆ ಜಾನಪದ ಕಲೆ ಹಾಸು ಹೊಕ್ಕಾಗಿದೆ. 12ನೇ ಶತಮಾನದಲ್ಲಿ ಶರಣರು ಮೂಲ ಜಾನಪದ ಹಾಗೂ ಸಂಸ್ಕೃತಿ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಮಲೆ ಮಹದೇಶ್ವರರು ಈ ಭಾಗದಲ್ಲಿ ನೆಲೆಸುವ ಮೂಲಕ ಕಾಡು ಜನರಿಗೆ ಧಾರ್ಮಿಕ ಹಾಗೂ ಸಂಸ್ಕೃತಿ ಕಲಿಸುವ ಮೂಲಕ ಪವಾಡ ಪುರುಷರಾದರು. ಈ ನೆಲದಲ್ಲಿ ಇಂದು ಗಡಿನಾಡು ಉತ್ಸವ ನಡೆಯುತ್ತಿರುವುದು ಸಂತಸ ತಂದಿದೆ ಎಂದರು.

ಅನಕ್ಷರಸ್ಥ ಹೆಣ್ಣು ಮಗಳು ತನ್ನ ಮಗ ಯಾವ ರೀತಿ ಇರಬೇಕೆಂದು ಜಾನಪದದಲ್ಲಿ ಅರ್ಥೈಸಿದ್ದಾಳೆ. ಆದರೆ ಈಗ ಅದು ಬದಲಾಗಿ ಮಕ್ಕಳ ಮೇಲೆ ಒತ್ತಡ ಏರುವ ಸಂಸ್ಕೃತಿ ನಿರ್ಮಾಣವಾಗಿದೆ ಎಂದರು.

ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಕಲೆ ಮತ್ತು ಸಂಸ್ಕೃತಿ ನಡುವೆ ಅವಿನಾಭಾವ ಸಂಬಂಧವಿದೆ. ಗ್ರಾಮೀಣ ಪ್ರದೇಶದಲ್ಲಿ ಜಾನಪದ ಕಲೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಮಹದೇಶ್ವರರು ನೆಲೆಸಿರುವ ಈ ನಾಡು ಜಾನಪದ ಕಲೆಯ ಬೀಡಾಗಿದೆ. ತಪಶಕ್ತಿಯಿಂದ ಮಹದೇಶ್ವರರು ಜಾನಪದವನ್ನು ಹುಟ್ಟು ಹಾಕಿದರು. ಧಾರ್ಮಿಕ ಕ್ಷೇತ್ರ ಬೆಟ್ಟದಲ್ಲಿ ಕಲೆ ಮತ್ತು ಸಂಸ್ಕೃತಿ ಉಳಿಸುವ ಗಡಿನಾಡು ಉತ್ಸವ ಯಶಸ್ವಿಯಾಗಿ ನಡೆಯಲಿ ಎಂದರು.

ಸಾಲೂರು ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಎಸ್. ಕ್ಯಾತಾಯಿನಿ ದೇವಿ, ಗ್ರಾಪಂ ಅಧ್ಯಕ್ಷ ಎಸ್. ಕುಮಾರ್, ಶರಣ ಸಾಹಿತ್ಯ ಪರಿಷತ್ ರಾಜ್ಯ ಉಪಾಧ್ಯಕ್ಷ ಕೆ.ಪಿ.ಷಣ್ಮುಖಪ್ಪ, ಜಿಲ್ಲಾಧ್ಯಕ್ಷ ವಿ.ಮಲ್ಲಿಕಾರ್ಜುನಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಕೆ.ರವಿಕುಮಾರ್, ಕಾರ್ಯದರ್ಶಿ ಬಿ.ಎಸ್.ವಿನಯ್, ತಾಲೂಕು ಅಧ್ಯಕ್ಷ ಬಸವರಾಜ ದೊಡ್ಡಟ್ಟಿ, ಜೆಎಸ್‌ಎಸ್ ಸಂಪರ್ಕ ಅಧಿಕಾರಿ ಆರ್.ಎನ್.ಸ್ವಾಮಿ, ನಿರ್ದೇಶಕ ಮಹದೇವ ಪ್ರಸಾದ್ ಇತರರಿದ್ದರು.

ಮಾದಮ್ಮ ನಿಧನ



ಕೊಳ್ಳೇಗಾಲ, ಜೂ.23– ಪಟ್ಟಣದ ಆನಂದಜ್ಯೋತಿ ಕಾಲೋನಿ ನಿವಾಸಿ, ತಾಲೂಕು ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಮುರಳಿ ಅವರ ಅಜ್ಜಿ ಮಾದಮ್ಮ (96) ಶುಕ್ರವಾರ ನಿಧನರಾದರು. ಮೃತರು ಓರ್ವ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಶನಿವಾರ ಹೊಸ ಹಂಪಾಪುರ ಸಮೀಪದಲ್ಲಿರುವ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನೈಋತ್ಯ ರೈಲ್ವೆ ನೌಕರರ ಬಡಾವಣೆ ಚಾಮುಂಡೇಶ್ವರಿ ದೇಗುಲದಲ್ಲಿ ಆಷಾಢ ಶುಕ್ರವಾರ ಪೂಜೆ

ಮೈಸೂರು, ಜೂ. 23(ಸಿಎನ್)– ಈ ವರ್ಷದ ಮೊದಲನೇ ಆಷಾಢ ಶುಕ್ರವಾರ ಹಿನ್ನೆಲೆ ಮೈಸೂರಿನ ಚಾಮುಂಡೇಶ್ವರಿ



ನೈರುತ್ಯ ರೈಲ್ವೆ ನೌಕರರ ಬಡಾವಣೆಯಲ್ಲಿ, ನೂತನವಾಗಿ ನಿರ್ಮಾಣವಾಗಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ಆಷಾಢ ಪೂಜೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ನೂತನವಾಗಿ ನಿರ್ಮಾಣಗೊಂಡಿದ್ದ ಶ್ರೀ ಚಾಮುಂಡೇಶ್ವರಿ ದೇವಸ್ಥಾನವು ಕಳೆದ ಜೂ. 12ರಂದು ಲೋಕಾರ್ಪಣೆಗೊಂಡಿತ್ತು. ಇದೀಗ ಮೊದಲನೇ ಬಾರಿಗೆ ಮೊದಲ ಆಷಾಢ ಶುಕ್ರವಾರ ಪೂಜೆ ನೆರವೇರಿಸಲಾಗಿದೆ. ಪ್ರಧಾನ ಅರ್ಚಕರಾದ ಭಾರದ್ವಾಜ್ ನೇತೃತ್ವದಲ್ಲಿ ಬೆಳಗ್ಗೆಯಿಂದಲೇ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ಮಧ್ಯಾಹ್ನ ವೇಳೆಗೆ ಲಲಿತ ಸಹಸ್ರನಾಮಾರ್ಚನೆ, ಆಷಾಢ ಲಕ್ಷ್ಮಿ ಪೂಜಾ ಕೈಂಕರ್ಯಗಳನ್ನು ವಿಧಿ ವಿಧಾನಗಳೊಂದಿಗೆ ನೆರವೇರಿಸಿದರು. ಮಧ್ಯಾಹ್ನದ ಮಹಾಮಂಗಳಾರತಿ ಬಳಿಕ ಸಹಸ್ರಾರು ಭಕ್ತಾಧಿಗಳಿಗೆ ಅನ್ನಸಂತರ್ಪಣೆ ಮಾಡಲಾಯಿತು. ಈ ವೇಳೆ ಚಾಮುಂಡೇಶ್ವರಿ ಬಡಾವಣೆ ಹಾಗೂ ಸುತ್ತಮುತ್ತಲಿನ ಗ್ರಾಮದ ಭಕ್ತರು ಪಾಲ್ಗೊಂಡಿದ್ದರು.

ಮೂರನೇ ಪುಟದಿಂದ

ವಿಜೃಂಭಣೆಯ ಗಿರಿಜಾ ಕಲ್ಯಾಣ ಮಹೋತ್ಸವ

ಈ ಕಾಲಘಟ್ಟದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವವು ಶುದ್ಧ ಸಂಪ್ರದಾಯದಂತೆ ಶಾಸ್ತ್ರೋಕ್ತವಾಗಿ ನಡೆ ಯಲಿದ್ದು ಲಕ್ಷಾಂತರ ಜನ ಪಾಲ್ಗೊಂಡು ಭಕ್ತಿ ಪರವಶರಾಗಿ ಪುನೀತರಾಗುತ್ತಾರೆ. ಗಿರಿಜಾ ಕಲ್ಯಾಣೋತ್ಸವದ ಮೊದಲನೆಯ ದಿನವಾದ ಗುರುವಾರ ವರಪೂಜೆ ಕಾರ್ಯಕ್ರಮ. ಪ್ರಾರಂಭದಲ್ಲಿ ಅರಿಶಿನ ಕುಂಕುಮ ಹಾಗೂ ಎಣ್ಣೆಯನ್ನು ಮೆರವಣಿಗೆ ಮಾಡಿ ಇದೇ ಅರಿಶಿನ ಕುಂಕುಮವನ್ನು ರಥ ಬೀದಿಗಳಲ್ಲಿನ ಮನೆಯವರಿಗೆ ನೀಡಿ ಮದುವೆಗೆ ಆಹ್ವಾನಿಸುವುದು ಇಲ್ಲಿನ ವಿಶೇಷ ಸಂಪ್ರದಾಯ, ನಂತರ ವರಪೂಜೆ ಕಾರ್ಯಕ್ರಮವನ್ನು ಧಾರ್ಮಿಕ ವಿಧಿ ವಿಧಾನದಂತೆ ನಡೆಸಲಾಯಿತು.

ಎರಡನೆಯ ದಿನ ಪ್ರಮುಖ ಘಟ್ಟ ಧಾರಾ ಮಹೂರ್ತ ಕಾರ್ಯಕ್ರಮ ಸಂಜೆ 6.30 ರಿಂದ 7.30 ಗಂಟೆಯೊಳಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಶ್ರೀಕಂಠೇಶ್ವರ ಸ್ವಾಮಿ ಮತ್ತು ಪಾರ್ವತಿದೇವಿಯವರ ಕಲ್ಯಾಣವನ್ನು ದೇವಾಲಯದ ಆಗಮಿಕ ಧೀಕ್ಷಿತರಾದ ನಾಗಚಂದ್ರ ಧೀಕ್ಷಿತ್ ಅವರ ನೇತೃತ್ವದಲ್ಲಿ ನಡೆಸಲಾಯಿತು.

ಕಲ್ಯಾಣ ಮಹೋತ್ಸವದ ಅಂಗವಾಗಿ ದೇವಾಲಯದ ಗರ್ಭಗುಡಿಯಲ್ಲಿ ಬೆಳಿಗ್ಗೆ ಅನುಜ್ಞಾ ಪೂರ್ವಕ ಕನ್ನಡಿ ಕಳಸ ಹೊತ್ತು ಅಂಕುರಾರ್ಪಣಾ ಪೂರ್ವಕ ಕಪಿಲಾ ಸ್ನಾನಘಟ್ಟದಲ್ಲಿ ಗಂಗೆಪೂಜೆ, ನಂತರ ಮಂಗಳ ಸ್ನಾನಮಾಡಲಾಯಿತು. ನಂತರ ನಾಂದಿ ಗ್ರಹಯಜ್ಞ ಮಾಡಲಾಯಿತು. ಸಂಜೆ 5 ಗಂಟೆಗೆ ಶ್ರೀಕಂಠೇಶ್ವರಸ್ವಾಮಿಯವರ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇರಿಸಿ ದೇವಾಲಯದ ಸುತ್ತ ಮೆರವಣಿಗೆ ಮಾಡಿಸಿ ಕಾಶಿಯಾತ್ರೆಯನ್ನು ನೆರವೇರಿಸಲಾಯಿತು. ವಿಶೇಷವಾಗಿ ಉತ್ಸವಮೂರ್ತಿಗೆ ಮುತ್ತು, ಹವಳ, ವಜ್ರ, ವೈಢೂರ್ಯಗಳಿಂದ ಅಲಂಕರಿಸಲಾಗಿತ್ತು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾ ತಂಡಗಳಾದ ನಾದಸ್ವರ, ವೀರಗಾಸೆ, ಪೂಜಾಕುಣಿತ, ನಂದಿಧ್ವಜ, ತಂಡಗಳು ಮೆರವಣಿಗೆಗೆ ಮೆರಗು ತಂದವು.

ನಂತರ ಪಾರ್ವತಿ ಅಮ್ಮನವರು ಹಾಗೂ ಶ್ರೀಕಂಠೇಶ್ವರಸ್ವಾಮಿ ಅವರ ಉತ್ಸವಮೂರ್ತಿಯನ್ನು ಕಲ್ಯಾಣ ಮಂಟಪದಲ್ಲಿ ಇರಿಸಿ ಸಂಬಂಧಮಾಲಾ ನಿರೀಕ್ಷಣಾ ಪೂರ್ವಕ ಪೂಜಾ, ನಂತರ ಪಾರ್ವತಿದೇವಿಯವರನ್ನು ನಂಜುಂಡೇಶ್ವರನಿಗೆ ತಾಳಿಕಟ್ಟಿಸಿ ಧಾರೆ ಎರೆಯಲಾಯಿತು. ನಂತರ ದೇವರ ಮೂರ್ತಿಗಳನ್ನು ಹಸೆಮಣೆಗೇರಿಸಲಾ ಯಿತು. ನಂತರ ಅತಿಥಿಗಳಿಗೆ, ಮುತ್ತೈದೆಯರಿಗೆ ಗೌರಪೂರ್ವಕವಾಗಿ ಅಕ್ಕಿ, ತೆಂಗಿನಕಾಯಿ, ಬೇಳೆ, ಬೆಲ್ಲ, ಅರಿಶಿನ, ಕುಂಕುಮ ಹಾಗೂ ಬಳೆಯೊಂದಿಗಿನ ಬಾಗಿನವನ್ನು ನೀಡಲಾಯಿತು. ಈ ಮಂಗಳಕರ ಸೌಭಾಗ್ಯವನ್ನು ನೋಡಲೆಂದೇ ಸಾವಿರಾರು ಭಕ್ತರು ನೆರೆದಿದ್ದರಲ್ಲದೆ ತಮ್ಮ ಬೇಡಿಕೆಯನ್ನು ಈಡೇರಿಸುವಂತೆ ಹರಕೆ ಕಟ್ಟಿ ತಮ್ಮ ಭಕ್ತಿಯನ್ನು ಮೆರೆದರು. ಗಿರಿಜಾ ಕಲ್ಯಾಣೋತ್ಸವದ ಅಂಗವಾಗಿ ಪ್ರಸಾದ ವಿನಿಯೋಗ ಮಾಡಲಾಯಿತು. ಶ್ರೀಕಂಠೇಶ್ವರ ದೇವಾಲಯದಲ್ಲಿ ಈ ಎರಡು ದಿನಗಳ ಕಾಲ ಮಾತ್ರ ಗಿರಿಜಾ ಶಂಕರರನ್ನು ಬೇರ್ಪಡಿಸಲಾಗುತ್ತದೆ. ಧಾರೆಯೊಂದಿಗೆ ಮತ್ತೆ ಒಂದಾಗುವ ಶ್ರೀಕಂಠೇಶ್ವರ ದಂಪತಿಗಳಿಗೆ ಮೂರನೆಯ ದಿನ ಉರುಟಣೆ, ಉಯ್ಯಾಲೋತ್ಸವಗಳನ್ನು ನಡೆಸಿದರೆ, ನಾಲ್ಕನೆಯ ದಿನ ಪಾಕಿನಿ ಉತ್ಸವ ನಡೆಸಲಾಗುತ್ತದೆ. ಐದನೆಯ ದಿನ ನಾಗಬಲಿ, ಶೇಷಹೋಮ, ಗೃಹಪ್ರವೇಶ ನಡೆಸಲಾಗುತ್ತದೆ. ಆರನೆಯ ದಿನ ವಿವಾಹಮಂಟಪದ ಕಂಬಗಳಿಗೆ ಪೂಜೆ ನೆರವೇರಿಸಿ ತೆಪ್ಪೋತ್ಸವ ಹಾಗೂ ಓಕಳಿ ಉತ್ಸವ ನಡೆಸಲಾಗುತ್ತದೆ. ಏಳನೇ ದಿನ ಮತ್ತೆ ತೆಪ್ಪೋತ್ಸವದೊಂದಿಗೆ ಶ್ರೀಯವರ ಶಯನೋತ್ಸವವನ್ನೂ ನಡೆಸಿ ಈ ಗಿರಿಜಾ ಕಲ್ಯಾಣ ಮಹೋತ್ಸವಕ್ಕೆ ತೆರೆ ಎಳೆಯಲಾಗುತ್ತದೆ. ಈ ಕಾರ್ಯಕ್ರಮಕ್ಕೆ ಲಕ್ಷಾಂತರ ಜನರು ಸಾಕ್ಷಿಯಾಗುತ್ತಾರೆ.

ಭ್ರಷ್ಟಾಚಾರಕ್ಕೆ ಅಂತ್ಯ ಹಾಡ್ತೇವೆ...

ಉಳಿಸಿದೆ. ನಾವು ಇಂತಹ ಕೆಲಸ ಮಾಡುವುದಿಲ್ಲ. ಸಂಪನ್ಮೂಲಕ್ಕೆ ತಕ್ಕಂತೆ ಗುಣಮಟ್ಟದ ಅಭಿವೃದ್ಧಿ ಕಾರ್ಯ ಗಳನ್ನು ಕೈಗೆತ್ತಿಕೊಳ್ಳುತ್ತೇವೆ. ಇದರಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವಿರುವುದಿಲ್ಲ. ಇನ್ನು ಗೃಹಜ್ಯೋತಿ ಹೊರೆಯನ್ನು ಯಾರ ಮೇಲೂ ಹಾಕುವುದಿಲ್ಲ. ಇದೊಂದು ತಪ್ಪು ಅಭಿಪ್ರಾಯ ಎಂದು ಇದೇ ಸಂದರ್ಭದಲ್ಲಿ ಕೈಗಾರಿಕೋದ್ಯಮಿಗಳಿಗೆ ಮನವರಿಕೆ ಮಾಡಿಕೊಟ್ಟರು. ನಮ್ಮ ಸರ್ಕಾರ ವಿದ್ಯುತ್ ಶುಲ್ಕವನ್ನು ಏರಿಸುವ ನಿರ್ಧಾರ ಮಾಡಿಲ್ಲ. ಕೆಇಆರ್‌ಸಿಯು ಬೆಲೆ ಹೆಚ್ಚಳದ ನಿರ್ಧಾರವನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನವೇ ಕೈಗೊಂಡಿತ್ತು. ದರ ಹೆಚ್ಚಳದಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ನನಗೆ ಅರಿವಿದೆ. ಇದರ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ, ಪರಿಹಾರ ಕಂಡು ಹಿಡಿಯಲು ಕ್ರಮಕೈಗೊಳ್ಳುವ ಭರವಸೆ ನೀಡಿದ್ದಾರೆ. ಹಿಂದಿನ ಸರ್ಕಾರ 11 ಸಾವಿರ ಕೋಟಿ ರೂ.ಗಳ ಮೊತ್ತವನ್ನು ವಿದ್ಯುತ್ ಪ್ರಸರಣ ನಿಗಮಗಳಿಗೆ ಬಾಕಿ ಉಳಿಸಿದೆ. ಅವರು ಉಳಿಸಿ ಹೋದ ಹೊರೆಯನ್ನು ನಾವು ಭರಿಸಬೇಕಿದೆ. ಕೆಇಆರ್‌ಸಿಗೆ ಮರುಪರಿಶೀಲನಾ ಅರ್ಜಿ ಹಾಕಿ ದರ ಪರಿಷ್ಕರಣೆಗೆ ನೀವು ಮನವಿ ಮಾಡಿ ಎಂದು ಉದ್ಯಮಿದಾರರಿಗೆ ಇದೇ ವೇಳೆ ಮುಖ್ಯಮಂತ್ರಿಗಳು ಸಲಹೆ ನೀಡಿದರು.

ಪುತ್ರಿಯೊಂದಿಗೆ ದಂಪತಿ ಆತ್ಮಹತ್ಯೆ

ಪ್ರತ್ಯೇಕವಾಗಿ ಅದೇ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ಪಿತ್ರಾರ್ಜಿತ ಆಸ್ತಿಯಲ್ಲಿ ತಮಗೂ ಸಮಪಾಲು ಬೇಕು ಎಂದು ಮಹದೇವಸ್ವಾಮಿ ಸಹೋದರಿಯರಾದ ಮಂಜುಳಾ ಮತ್ತು ಮಹದೇವಮ್ಮ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ ಎಂದು ಹೇಳಲಾಗಿದ್ದು, ದೇವೀರಮ್ಮ ಅವರು ಪುತ್ರಿಯರಿಗೆ ಸಹಕರಿಸುತ್ತಿದ್ದರು ಎನ್ನಲಾಗಿದೆ.

ಗ್ರಾಮಸ್ಥರು ಹೇಳುವ ಪ್ರಕಾರ ಮಹದೇವಸ್ವಾಮಿ 5 ಎಕರೆ ತೋಟ ಹಾಗೂ ಮನೆ ತಾನಿಟ್ಟುಕೊಂಡು, 2 ಎಕರೆ ಹೊಲವನ್ನು ಸಹೋದರಿಯರಿಗೆ ನೀಡಲು ಒಪ್ಪಿದ್ದರೆಂದು ಹೇಳಲಾಗಿದ್ದು, ತೋಟದಲ್ಲೂ ತಮಗೆ ಪಾಲು ಬರಬೇಕು ಎಂದು ಸಹೋದರಿಯರು ಪಟ್ಟು ಹಿಡಿದಿದ್ದಾರೆ. ಈ ಸಂಬಂಧ ನ್ಯಾಯಾಲಯದಲ್ಲಿ ಮಹದೇವಸ್ವಾಮಿ ಸಹೋದರಿಯರ ಪರವಾಗಿ ತೀರ್ಪು ಬಂದಿದೆ ಎನ್ನಲಾಗಿದ್ದು, ಇದರಿಂದ ಬೇಸತ್ತು, ಮಹದೇವಸ್ವಾಮಿ, ಪತ್ನಿ ಹಾಗೂ ಪುತ್ರಿಯೊಂದಿಗೆ ಸಾಮೂಹಿಕವಾಗಿ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಹೇಳಲಾಗಿದೆ. ಆದರೆ ಆಸ್ತಿ ವಿಚಾರವಾಗಿ ನ್ಯಾಯಾಲಯದಲ್ಲಿ ಕೇಸ್ ನಡೆಯುತ್ತಿರುವುದನ್ನು ದೃಢಪಡಿಸಿರುವ ಪೊಲೀಸರು ಕೇಸ್‌ನ ತೀರ್ಪಿನ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದಿದ್ದಾರೆ.

ವಿಚಾರ ತಿಳಿಯುತ್ತಿದ್ದಂತೆಯೇ ಜಿಲ್ಲಾ ಎಸ್ಪಿ ಪದ್ಮಿನಿ ಸಾಹು, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಚಾಮರಾಜನಗರ ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಚಿಕ್ಕರಂಗಶೆಟ್ಟಿ, ಸಬ್ ಇನ್ಸ್‌ಪೆಕ್ಟರ್ ಮಾದೇಶ್ ಹಾಗೂ ಸಿಬ್ಬಂದಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಡೆತ್‌ನೋಟ್‌ನಲ್ಲಿ ಹೆಸರಿಸಿರುವ ಐವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಪತ್ನಿ ಹಾಗೂ ಪುತ್ರಿಯೊಂದಿಗೆ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡ ಮಹದೇವಸ್ವಾಮಿಯವರ ಮತ್ತೋರ್ವ ಪುತ್ರಿ ಸಹನಾ(17) ಚಾಮರಾಜನಗರ ಪಾಲಿಟೆಕ್ನಿಕ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದು, ಕಳೆದ ರಾತ್ರಿ ಆಕೆ ಕರಿನಂಜಪುರದಲ್ಲಿರುವ ತಾತನ (ತಾಯಿ ಸವಿತಾಳ ತಂದೆ) ಮನೆಯಲ್ಲಿ ವಾಸ್ತವ್ಯ ಹೂಡಿದ್ದರಿಂದ ಆಕೆ ಪ್ರಾಣ ಉಳಿಸಿಕೊಂಡಿದ್ದಾಳೆ ಎಂದು ಹೇಳಲಾಗಿದೆ.

'ಅನ್ನಭಾಗ್ಯ' ಜಾರಿ ಮಾಡ್ತೇವೆ

ಎಂದು ಸತೀಶ್ ಜಾರಕಿಹೊಳಿ ಅಭಯ ನೀಡಿದರು. ಬಿಜೆಪಿ ಸರ್ಕಾರದಲ್ಲಿ ಅನುಮೋದನೆಗೊಂಡು, ಚಾಲನೆಗೊಂಡಿದ್ದ ಅಭಿವೃದ್ಧಿ ಯೋಜನೆಗಳ ಕಾಮಗಾರಿಗಳನ್ನು ನೂತನ ಕಾಂಗ್ರೆಸ್ ಸರ್ಕಾರ ತಡೆಹಿಡಿದಿರುವ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ಕೆಲವು ದೂರುಗಳು ಬಂದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ. ಪರಿಶೀಲಿಸಿ, ಯೋಜನೆಗಳನ್ನು ಪುನಾರಂಭಿಸಲು ಸರ್ಕಾರ ಬದ್ಧವಾಗಿದೆ ಎಂದರು.

ಹೆದ್ದಾರಿ ವೈಜ್ಞಾನಿಕ ಸುಧಾರಣೆ: ಮೈಸೂರು–ಬೆಂಗಳೂರು ಹೆದ್ದಾರಿ ಸಾವಿನ ರಸ್ತೆಯಾಗುತ್ತಿರುವುದರ ಬಗ್ಗೆ ನನಗೂ ಮಾಹಿತಿ ಇದೆ. ಈ ಕುರಿತು ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಚರ್ಚಿಸಿ, ಎಲ್ಲೆಲ್ಲಿ ತೊಂದರೆ ಇದೆ ಎಂಬುದನ್ನು ಪರಿಶೀಲಿಸಿ ರಸ್ತೆಯನ್ನು ವೈಜ್ಞಾನಿಕವಾಗಿ ಸುಧಾರಿಸಿ ಅಪಘಾತಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಇದೇ ಸಂದರ್ಭದಲ್ಲಿ ನುಡಿದರು. ಎಕ್ಸ್‌ಪ್ರೆಸ್ ವೇ ಟೋಲ್ ಸಂಗ್ರಹ ಸಹ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಬರುವುದರಿಂದ ಟೋಲ್ ದರ ಇಳಿಸುವ ಬಗ್ಗೆ ರಾಜ್ಯ ಸರ್ಕಾರ ಮನವಿ ಮಾಡಲಿದೆ ಎಂದು ಅವರು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು. ಬೆಂಗಳೂರಿನಿಂದ ರಸ್ತೆ ಮೂಲಕ ಮೈಸೂರಿಗೆ ಆಗಮಿಸಿದ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ದಿ ಏಟ್ರಿಯಾ ಹೋಟೆಲ್ ಬಳಿ ಕಾಂಗ್ರೆಸ್ ಮುಖಂಡರು ಆತ್ಮೀಯವಾಗಿ ಬರಮಾಡಿಕೊಂಡರು. ಡಾ. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ ಸಚಿವರು, ಕುವೆಂಪುನಗರದ ನವಿಲು ರಸ್ತೆಯ 11ನೇ ಕ್ರಾಸ್‌ನಲ್ಲಿರುವ ಸಾಹಿತಿ ದೇವನೂರು ಮಹದೇವ ಅವರ ನಿವಾಸಕ್ಕೆ ಭೇಟಿ ನೀಡಿ, ಅವರ ಕುಶಲೋಪರಿ ವಿಚಾರಿಸಿದರು.

ಆಷಾಢ ಮಾಸದ ಮೊದಲ ಶುಕ್ರವಾರ

ಉಚಿತ ಬಸ್ ಸೇವೆಗೆ ಉತ್ತಮ ಪ್ರತಿಕ್ರಿಯೆ

● ಜಿಲ್ಲಾಡಳಿತದಿಂದ ಲಲಿತಮಹಲ್ ಮೈದಾನದಿಂದ ಉಚಿತ ಬಸ್ ಸಂಚಾರ ● ನಾಡಿನ ವಿವಿಧೆಡೆಯಿಂದ ಖಾಸಗಿ ವಾಹನಗಳಲ್ಲಿ ಬಂದ ಭಕ್ತರು ● ವಾಹನ ನಿಲುಗಡೆ ಮಾಡಿ ಉಚಿತ ಬಸ್‌ನಲ್ಲಿ ಪ್ರಯಾಣ ● ಬೆಟ್ಟದ ಸುತ್ತಲೂ ಪೊಲೀಸರ ಏಳು ಸುತ್ತಿನ ಕೋಟೆ





ಮೈಸೂರು,ಜೂ.23 (ಎಂಟಿವೈ)– ಶಕ್ತಿದೇವತೆ ಆರಾಧನೆಯ ಮಾಸ, ಆಷಾಢ ಮಾಸದ ಮೊದಲ ಶುಕ್ರವಾರದಂದು ನಾಡದೇವಿಯ ದರ್ಶನ ಪಡೆಯಲು ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು, ಲಲಿತಮಹಲ್ ಮೈದಾನದಲ್ಲಿ ವಾಹನ ನಿಲುಗಡೆ ಮಾಡಿ ಜಿಲ್ಲಾಡಳಿತದ ವತಿಯಿಂದ ವ್ಯವಸ್ಥೆ ಮಾಡಿದ್ದ ಉಚಿತ ಬಸ್‌ನಲ್ಲಿ ಪ್ರಯಾಣಿಸಿ ಸಂಭ್ರಮಿಸಿದರು.

ಕಳೆದ ಕೆಲವು ವರ್ಷಗಳಿಂದ ಆಷಾಢ ಮಾಸದ ಶುಕ್ರವಾರದಂದು ಚಾಮುಂಡಿ ಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶ ನಿರ್ಬಂಧಿಸಲಾಗುತ್ತಿದ್ದು, ಈ ಬಾರಿಯೂ ಕಟ್ಟುನಿಟ್ಟಾಗಿ ಖಾಸಗಿ ವಾಹನಗಳ ಪ್ರವೇಶ ನಿರಾಕರಿಸಲಾಗಿತ್ತು. ಲಲಿತಮಹಲ್ ಪಕ್ಕದ ಮೈದಾನದಲ್ಲಿ ರಾಜ್ಯದ ವಿವಿಧೆಡೆಯಿಂದ ಖಾಸಗಿ ವಾಹನಗಳಲ್ಲಿ ಬಂದ ಭಕ್ತರ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿತ್ತು. ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ಪ್ರತ್ಯೇಕ ಸ್ಥಳಾವಕಾಶ ಮಾಡಲಾಗಿತ್ತು. ಮುಂಜಾನೆ 3 ಗಂಟೆಯಿಂದಲೇ ಲಲಿತಮಹಲ್ ಮೈದಾನಕ್ಕೆ ಬಂದ ಭಕ್ತರು ಸಾರಿಗೆ ಸಂಸ್ಥೆಯ ಉಚಿತ ಬಸ್‌ನಲ್ಲಿ ಬೆಟ್ಟಕ್ಕೆ ಪ್ರಯಾಣಿಸಿದರು.

ಜಿಲ್ಲಾಡಳಿತ ಹಾಗೂ ಚಾಮುಂಡಿ ಬೆಟ್ಟದ ದೇವಾಲಯಗಳ ಆಡಳಿತ ಮಂಡಳಿ ವತಿಯಿಂದ ಲಲಿತಮಹಲ್ ಮೈದಾನದಿಂದ ಭಕ್ತರನ್ನು ಉಚಿತವಾಗಿ ಕರೆದೊಯ್ಯಲು 40 ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಮುಂಜಾನೆ 4.30ರಿಂದ ಬೆಟ್ಟಕ್ಕೆ ಭಕ್ತರನ್ನು ಕರೆದೊಯ್ಯುವ ಉಚಿತ ಸೇವೆ ಆರಂಭಿಸಿದ್ದವು. ಬೆಳಗ್ಗೆಯಿಂದ ಉಚಿತ ಬಸ್‌ನಲ್ಲಿ ಪ್ರಯಾಣಿಸುವ ಭಕ್ತರ ಸಂಖ್ಯೆ ಕಡಿಮೆ ಇತ್ತು. ಆನಂತರ ಭಕ್ತರ ಸಂಖ್ಯೆ ಹೆಚ್ಚಾಯಿತು.

ಕಣ್ಗಾವಲು: ಲಲಿತಮಹಲ್ ಮೈದಾನದಲ್ಲಿ ಉಚಿತ ಬಸ್‌ನಲ್ಲಿ ಪ್ರಯಾಣಿಸುವ ಭಕ್ತರು ವಾಹನ ನಿಲ್ಲಿಸಿದ್ದ ವೇಳೆ ಕಳ್ಳರು ಕೈಚಳಕ ತೋರಬಹುದೆಂಬ ಕಾರಣದಿಂದ ಹಾಗೂ ಬಸ್ ಹತ್ತಲು ಸರದಿ ಸಾಲಿನಲ್ಲಿ ನಿಂತಿದ್ದಾಗ ಜೇಬುಗಳ್ಳರ ಹಾವಳಿಗೆ ಬ್ರೇಕ್ ಹಾಕಲು ಮಫ್ತಿಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಪಾರ್ಕಿಂಗ್ ಸ್ಥಳ, ಬಸ್ ಹತ್ತುವ ಸ್ಥಳ ಸೇರಿದಂತೆ ಆಯ್ದ ಸ್ಥಳದಲ್ಲಿ 15ಕ್ಕೂ ಹೆಚ್ಚು ಸಿಸಿ ಕ್ಯಾಮರ ಅಳವಡಿಸಲಾಗಿತ್ತು. ಸ್ಥಳದಲ್ಲೇ ದೃಶ್ಯಾವಳಿ ವೀಕ್ಷಣೆಗೂ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು. ಇದರಿಂದ ಬೆಳಗ್ಗಿನಿಂದ ಸಂಜೆವರೆಗೂ ಲಲಿತಮಹಲ್ ಮೈದಾನದಲ್ಲಿ ಸುಲಲಿತ ವಾಗಿ ಉಚಿತ ಬಸ್ ಪ್ರಯಾಣ ನೆರವೇರಿತು.

ಒಮ್ಮೆ ರಶ್, ಇನ್ನೊಮ್ಮೆ ಖಾಲಿ

ಬೆಳಗ್ಗಿನಿಂದ ಸಂಜೆಯವರೆಗೆ ಲಲಿತ ಮಹಲ್ ಮೈದಾನದಿಂದ ಭಕ್ತರನ್ನು ತುಂಬಿಕೊಂಡು ಹೋಗಿದ್ದ ಸಾರಿಗೆ ಬಸ್‌ಗಳು, ಬೆಟ್ಟದಿಂದ ಕೆಳಗಿಳಿಯುವಾಗ ಬೆರಳೆಣಿಕೆಯಷ್ಟು ಸಂಖ್ಯೆಯ ಭಕ್ತರನ್ನು ಕರೆತಂದವು. ಸಂಜೆ 4 ಗಂಟೆ ನಂತರ ಬೆಟ್ಟದಿಂದ ಕೆಳಗಿಳಿಯುವವರ ಸಂಖ್ಯೆ ಹೆಚ್ಚಾಗಿತ್ತು. ಇದರಿಂದ ಉಚಿತ ಬಸ್‌ಗಳು ಕೆಲವೊಮ್ಮೆ ಖಾಲಿ ಸಂಚಾರ ನಡೆಸಿದರೆ, ಮತ್ತೆ ಕೆಲವೊಮ್ಮೆ ಭಕ್ತರಿಂದ ತುಂಬಿ ತುಳುಕುತ್ತಿದ್ದವು.

ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯ: ಲಲಿತಮಹಲ್ ಮೈದಾನದಲ್ಲಿ ಬೆಟ್ಟಕ್ಕೆ ತೆರಳಲು ಆಗಮಿಸುವ ಭಕ್ತರಿಗಾಗಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕುಡಿಯುವ ನೀರು ಹಾಗೂ ತಾತ್ಕಾಲಿಕ ಶೌಚಾಲಯದ ವ್ಯವಸ್ಥೆ ಮಾಡಲಾಗಿತ್ತು.

ಮಹಿಳಾ ಭಕ್ತರು: ಈ ಬಾರಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ 'ಶಕ್ತಿ' ಯೋಜನೆಯ ಉಪಯೋಗ ಪಡೆದು ವಿವಿಧೆಡೆಯಿಂದ ಸರ್ಕಾರಿ ಬಸ್‌ಗಳಲ್ಲೇ ಮಹಿಳಾ ಪ್ರಯಾಣಿಕರು ಚಾಮುಂಡಿ ಬೆಟ್ಟಕ್ಕೆ ಆಗಮಿಸುತ್ತಾರೆಂಬ ನಿರೀಕ್ಷೆಯಿತ್ತು. ಆದರೆ, ಬೆಂಗಳೂರು, ತುಮಕೂರು, ಶಿವಮೊಗ್ಗ, ಹಾಸನ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಕುಟುಂಬದ ಸದಸ್ಯರೊಂದಿಗೆ ಖಾಸಗಿ ವಾಹನಗಳಲ್ಲೇ ಸಾಕಷ್ಟು ಮಹಿಳಾ ಭಕ್ತರು ಲಲಿತಮಹಲ್ ಮೈದಾನಕ್ಕೆ ಆಗಮಿಸಿ, ಆ ನಂತರವಷ್ಟೇ ಉಚಿತ ಬಸ್‌ನಲ್ಲಿ ಬೆಟ್ಟಕ್ಕೆ ಪ್ರಯಾಣಿಸುತ್ತಿದ್ದ ದೃಶ್ಯ ಕಂಡುಬಂದಿತು.

ಏಳು ಸುತ್ತಿನ ಕೋಟೆ: ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ವಿವಿಧೆಡೆಯಿಂದ ಖಾಸಗಿ ವಾಹನಗಳಲ್ಲಿ ಆಗಮಿಸುತ್ತಿದ್ದ ಭಕ್ತರು ಹಾಗೂ ಪ್ರವಾಸಿಗರನ್ನು ಬೆಟ್ಟಕ್ಕೆ ನುಸುಳುವುದನ್ನ ತಡೆಗಟ್ಟಲು ಪೊಲೀಸರು ಏಳುಸುತ್ತಿನ ಕೋಟೆಯನ್ನೇ ನಿರ್ಮಿಸಿದ್ದರು. ಕುರುಬಾರಹಳ್ಳಿಯ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಚಾಮುಂಡಿಬೆಟ್ಟದ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿ ಬೆಟ್ಟದತ್ತ ತೆರಳುವ ಖಾಸಗಿ ವಾಹನಗಳನ್ನು ತಡೆಯುವ ಪ್ರಯತ್ನ ಮಾಡುತ್ತಿದ್ದರು.

ಜೆಸಿ, ಕೆಸಿ ಬಡಾವಣೆಗೆಂದು ಹೇಳಿ ಬ್ಯಾರಿಕೇಡ್ ದಾಟಿ ಮುಂದೆ ಹೋಗುತ್ತಿದ್ದ ವಾಹನ ಸವಾರರನ್ನು ತಾವರೆಕಟ್ಟೆ ಗೇಟ್ ಬಳಿ ತಡೆಯಲು ಮತ್ತೊಂದು ಸುತ್ತಿನ ಭದ್ರತೆಯನ್ನು ನಿಯೋಜಿಸಲಾಗಿತ್ತು. ನಂದಿ ರಸ್ತೆ, ಉತ್ತನಹಳ್ಳಿ ರಸ್ತೆ, ಲಲಿತಮಹಲ್ ರಸ್ತೆಯಲ್ಲೂ ಪೊಲೀಸರ ಭದ್ರತೆಯನ್ನು ಏರ್ಪಡಿಸಲಾಗಿತ್ತು. ಅನಗತ್ಯವಾಗಿ ಖಾಸಗಿ ವಾಹನಗಳ ಪ್ರವೇಶ ತಡೆಯಲು ಪೊಲೀಸರು ಹರಸಾಹಸ ಪಡುವಂತಾಯಿತು.

ಆಷಾಢ ಶುಕ್ರವಾರದಂದು ಪರಿಸರ ಸಂರಕ್ಷಣೆ 'ಸೇವೆ'

● ವಿವಿಧ ಸಂಸ್ಥೆಗಳ ಸ್ವಯಂ ಸೇವಕರಿಂದ ಪರಿಸರ ಕಾಳಜಿ ● ಬೆಟ್ಟಕ್ಕೆ ತೆರಳುವ ಮುನ್ನವೇ ಭಕ್ತರಿಂದ ಪ್ಲಾಸ್ಟಿಕ್ ಕವರ್ ಕಸಿದುಕೊಂಡರು





ಮೈಸೂರು,ಜೂ.23(ಎಂಟಿವೈ)– ಪ್ಲಾಸ್ಟಿಕ್ ಮುಕ್ತ ಚಾಮುಂಡಿಬೆಟ್ಟ ಮಾಡುವ ನಿಟ್ಟಿನಲ್ಲಿ ಅರಣ್ಯ ಇಲಾಖೆ, ಜಿಲ್ಲಾಡಳಿತ ಹಾಗೂ ಪರಿಸರ ಪ್ರೇಮಿಗಳು ಶುಕ್ರವಾರ ಚಾಮುಂಡಿಬೆಟ್ಟಕ್ಕೆ ಆಗಮಿಸುವ ಭಕ್ತರಿಂದ ಪ್ಲಾಸ್ಟಿಕ್ ಸಂಗ್ರಹಿಸಿ ಪರಿಸರ ಜಾಗೃತಿ ಮೆರೆದರು.

ಆಷಾಢ ಮಾಸದ ಶುಕ್ರವಾರ ವಿಶೇಷ ಪೂಜಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧೆಡೆಯಿಂದ ಅಪಾರ ಸಂಖ್ಯೆಯಲ್ಲಿ ಬೆಟ್ಟಕ್ಕೆ ಬರುವ ಭಕ್ತರು ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್, ಪೇಪರ್‌ಗಳನ್ನು ಎಲ್ಲೆಂದರಲ್ಲಿ ಬಿಸಾಡುವ ಮೂಲಕ ಬೆಟ್ಟದ ಪರಿಸರವನ್ನು ಹಾಳು ಮಾಡುವುದನ್ನು ಮನಗಂಡು ಭಕ್ತರಿಂದ ಬೆಟ್ಟದ ತಪ್ಪಲಿನಲ್ಲಿಯೇ ಪ್ಲಾಸ್ಟಿಕ್ ಸಂಗ್ರಹಕ್ಕೆ ವಿಶೇಷ ಅಭಿಯಾನ ನಡೆಸಲಾಯಿತು.

ವಿಶೇಷ ಕಾಳಜಿಯುಳ್ಳ ವಿವಿಧ ಸಂಸ್ಥೆಗಳ ಸ್ವಯಂಸೇವಕರು ಬೆಟ್ಟಕ್ಕೆ ಬರುವ ಭಕ್ತರು ತರುತ್ತಿದ್ದ ಪ್ಲಾಸ್ಟಿಕ್ ಕವರ್‌ಗಳನ್ನು ಪಡೆದು, ಬೆಟ್ಟದ ಪರಿಸರ ಸಂರಕ್ಷಣೆಗೆ ಸೇವೆ ಸಲ್ಲಿಸಿದರು.

ಚಾಮುಂಡಿಬೆಟ್ಟ ಉಳಿಸಿ ಸಮಿತಿ, ಪರಿಸರ ಬಳಗ, ಅಮೃತಾನಂದಮಯಿ ಸಂಸ್ಥೆ, ಅರಿವಿನ ಮನೆ ಮಹಿಳಾ ಬಳಗ, ಚಿರಾಗ್, ಕ್ಲೀನ್ ಮೈಸೂರು ಫೌಂಡೇಷನ್, ನಂಜನಗೂಡಿನ ಇನ್ನರ್ ವ್ಹೀಲ್ ಕ್ಲಬ್, ಜೆಎಸ್‌ಎಸ್ ಸಂಸ್ಥೆಯ ಎನ್‌ಎಸ್‌ಎಸ್ ಘಟಕ, ಸಾಮಾಜಿಕ ನ್ಯಾಯಕ್ ವೇದಿಕೆ, ಸೋದರಿ ನಿವೇದಿತ ಪ್ರತಿಷ್ಠಾನ, ವಿದ್ಯಾ ಸ್ಪಂದನ, ವಿಪ್ರೋ, ಯೂತ್ ಫಾರ್ ಸೇವಾ, ಯುವ ಬ್ರಿಗೇಡ್, ಏಕಲ್ ಗ್ರಾಮೋಥಾನ್ ಫೌಂಡೇಷನ್, ಆಸ್ಕ್ ಮೈಸೂರು ಸಂಸ್ಥೆಯ ಸದಸ್ಯರು ಪಾಲ್ಗೊಂಡಿದ್ದರು. 130ಕ್ಕೂ ಹೆಚ್ಚು ಸ್ವಯಂ ಸೇವಕರು ಮೆಟ್ಟಿಲು, ಪಿಂಜರಾಪೋಲ್, ಬೆಟ್ಟದ ಮೇಲೆ, ಬೆಟ್ಟದ ಪಾದ, ಗೋಪುರ, ನಂದಿ, ಲಲಿತಮಹಲ್ ಮೈದಾನದಲ್ಲಿ ಪ್ಲಾಸ್ಟಿಕ್ ಸಂಗ್ರಹ ಅಭಿಯಾನದಲ್ಲಿ ಪಾಲ್ಗೊಂಡರು.

ಬೆಟ್ಟಕ್ಕೆ ಬರುತ್ತಿದ್ದ ಭಕ್ತರು ಪ್ಲಾಸ್ಟಿಕ್ ಕವರ್‌ನಲ್ಲಿ ತರುತ್ತಿದ್ದ ಪೂಜಾಸಾಮಗ್ರಿಗಳನ್ನು ಪೇಪರ್ ಕವರ್‌ಗೆ ಹಾಕಿ, ಪ್ಲಾಸ್ಟಿಕ್ ಕವರ್ ಹಿಂಪಡೆಯುತ್ತಿದ್ದರು. ಅಲ್ಲದೆ, ಕರ್ಪೂರ, ಅರಿಶಿನ, ಕುಂಕುಮ ಹಾಗೂ ಗಂಧದ ಕಡ್ಡಿ ಪೊಟ್ಟಣಕ್ಕೂ ಸುತ್ತಿದ್ದ ಪ್ಲಾಸ್ಟಿಕ್ ಕವರ್ ಅನ್ನು ಸಂಗ್ರಹಿಸುತ್ತಿದ್ದರು.

ಮೆಟ್ಟಿಲು ಬಳಿ ಸ್ವಯಂಸೇವಕರು ಪ್ಲಾಸ್ಟಿಕ್ ಕವರ್‌ನಲ್ಲಿದ್ದ ಪೂಜಾ ಸಾಮಗ್ರಿಗಳನ್ನು ಅಡಿಕೆ ತಟ್ಟೆಗೆ ಹಾಕಿ ಕಳುಹಿಸುತ್ತಿದ್ದರು. ಕ್ಲೀನ್ ಮೈಸೂರು ಫೌಂಡೇಷನ್ ವತಿಯಿಂದ 400ಕ್ಕೂ ಹೆಚ್ಚು ಪೇಪರ್ ಕವರ್‌ಗಳನ್ನು ಭಕ್ತರಿಗೆ ಉಚಿತವಾಗಿ ಹಂಚಲಾಯಿತು.

ಮುಂಗಾರು ಹಂಗಾಮಿ ಬೆಳೆ ವಿಮೆ ಮಾಡಿಸಲು ಅವಕಾಶ

ಮೈಸೂರು, ಜೂ.23(ಜಿಎ)–ಜಿಲ್ಲೆಯ 19 ಬೆಳೆಗಳಿಗೆ ರೈತರು ಮುಂಗಾರು ಹಂಗಾಮಿ ಬೆಳೆ ವಿಮೆ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ– ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಕರ್ನಾಟಕ ಸರ್ಕಾರದ ವತಿಯಿಂದ ಜಾರಿಗೊಳಿಸಲಾಗುತ್ತಿದ್ದು, ಈ ಸಂಬಂಧ ಜಿಲ್ಲೆಯ 19 ಬೆಳೆಗಳಿಗೆ ರೈತರು ಬೆಳೆ ವಿಮೆ ಮಾಡಿಸಬಹುದಾಗಿದೆ.

ಬೆಳೆಗಳು: ಎಳ್ಳು, ಸೂರ್ಯಕಾಂತಿ, ಉದ್ದು, ಹೆಸರು, ಅಲಸಂದೆ, ನೆಲಗಡಲೆ, ಎಲೆಕೋಸು, ಆಲೂಗಡ್ಡೆ, ಟೊಮ್ಯಾಟೋ, ಜೋಳ, ಹತ್ತಿ, ಮುಸುಕಿನ ಜೋಳ, ತೊಗರಿ, ಅರಿಶಿಣ, ರಾಗಿ ಮಳೆಯಾಶ್ರಿತ, ರಾಗಿ ನೀರಾವರಿ, ಭತ್ತ ಮತ್ತು ಹುರುಳಿ ಸೇರಿದಂತೆ 19 ಬೆಳೆಗಳನ್ನು ವಿಮೆಗೆ ನೋಂದಾಯಿಸಬಹುದಾಗಿದ್ದು, ಪ್ರತ್ಯೇಕ ಬೆಳೆಗೆ ಕಡೆಯ ದಿನಾಂಕ ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ರೈತರು ಹತ್ತಿರದ ರೈತ ಸಂಪರ್ಕ ಕೇಂದ್ರ, ಬ್ಯಾಂಕ್ ಅಥವಾ ನಾಗರೀಕ ಸೇವಾ ಕೇಂದ್ರಗಳನ್ನು ಸಂಪರ್ಕಿಸಿ ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ನಾನಾ ಹರಕೆ ಹೊತ್ತ ಮಹಿಳೆಯರು, ಭಕ್ತರಿಂದ ಬೆಟ್ಟ ಹತ್ತುವ ಸೇವೆ

ಪ್ರತಿಯೊಂದು ಮೆಟ್ಟಿಲಿಗೂ ಅರಿಶಿನ ಕುಂಕುಮ ಹಚ್ಚಿ ಪೂಜೆ



ಮೈಸೂರುಜೂ.23(ಎಂಟಿವೈ)– ಆಷಾಢ ಮಾಸದ ಮೊದಲ ಶುಕ್ರವಾರ ವಿವಿಧ ಹರಕೆ ಹೊತ್ತ ಮಹಿಳೆಯರು, ಯುವತಿಯರು ಮುಂಜಾನೆಯಿಂದಲೇ ಮೆಟ್ಟಿಲು ಮೂಲಕ ಚಾಮುಂಡಿಬೆಟ್ಟ ಹತ್ತಿ ಭಕ್ತಿ ಪ್ರದರ್ಶಿಸಿದರು. ಪ್ರತಿವರ್ಷದಂತೆ ಈ ಬಾರಿಯೂ ಮೆಟ್ಟಿಲು ಹತ್ತಿದ ಮುತ್ತೈದೆಯರ ಸಂಖ್ಯೆ ಹೆಚ್ಚಾಗಿತ್ತು. ವಿವಾಹ ನಿರೀಕ್ಷೆಯಲ್ಲಿರುವ ಯುವತಿಯರು ಮೆಟ್ಟಿಲು ಏರಿ ಹರಕೆ ತೀರಿಸಿದರು. ಬೆಟ್ಟದ ತಪ್ಪಲಿಗೆ ವಿವಿಧ ವಾಹನಗಳಲ್ಲಿ ಆಗಮಿಸಿದ ಹರಕೆ ಹೊತ್ತವರು, ಪಾದಕ್ಕೆ ಪೂಜೆ ಸಲ್ಲಿಸಿ ಮೆಟ್ಟಿಲು ಹತ್ತಲಾರಂಭಿಸಿದರು. ಪ್ರತಿಯೊಂದು ಮೆಟ್ಟಿಲಿಗೂ ಅರಿಶಿನ–ಕುಂಕುಮ ಹಚ್ಚಿ, ಗಂಧದ ಕಡ್ಡಿ ಬೆಳಗಿ ಕರ್ಪೂರ ಹಚ್ಚಿ, ಪೂಜೆ ಸಲ್ಲಿಸಿ, ಪ್ರಾರ್ಥನೆಯೊಂದಿಗೆ ಬೆಟ್ಟ ಹತ್ತಿದರು. 1008 ಮೆಟ್ಟಿಲುಗಳಿಗೂ ಪೂಜೆ ಮಾಡುತ್ತಲೇ ಬೆಟ್ಟ ಹತ್ತಿದ ಮಹಿಳೆಯರು ದೇವಿಯ ದರ್ಶನ ಪಡೆದು ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದರು.

ಕುಂಕುಮ ರಾಶಿ: ಮೆಟ್ಟಿಲುಗಳ ಮೂಲಕ ನೂರಾರು ಮಹಿಳಾ ಭಕ್ತರು ಬೆಟ್ಟ ಹತ್ತಿ ಪ್ರತಿಯೊಂದು ಮೆಟ್ಟಿಲುಗಳ ಮೇಲೂ ಅರಿಶಿನ–ಕುಂಕುಮ ಹಾಕಿದ್ದರಿಂದ ಜಡಿ ಮಳೆಗೆ ಪೇಸ್ಟ್‌ನಂತಾಗಿ ಕೆಲವೆಡೆ ಭಕ್ತರು ಜಾರುವಂತಾಗಿತ್ತು. ಬೆಟ್ಟ ಹತ್ತಿದ ಮಹಿಳಾ ಭಕ್ತರು ಕೊನೆ ಮೆಟ್ಟಿಲಿನ ಪಾದದ ಬಳಿ ತಾವು ತಂದಿದ್ದ ಅರಿಶಿನ–ಕುಂಕುಮವನ್ನು ಸುರಿದು ಹರಕೆ ತೀರಿಸಿದ ಸಂಭ್ರಮದಲ್ಲಿದ್ದರು. ಇದರಿಂದ ಬೆಟ್ಟದ ಮೇಲಿನ ಮೆಟ್ಟಿಲಿನ ಮೇಲೆ ಕುಂಕುಮದ ರಾಶಿಯೇ ಕಂಡು ಬಂದಿತು.

ಜೂ.27 ರಂದು ಪಿಂಚಣಿ ಅದಾಲತ್

ಮೈಸೂರು,ಜೂ.23– ಮೈಸೂರು ವಿಭಾಗ ಅಂಚೆ ಇಲಾಖೆಯ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಜೂ.27 ರಂದು ಬೆಳಗ್ಗೆ 11 ಗಂಟೆಗೆ ಪಿಂಚಣಿ ಅದಾಲತ್ ಏರ್ಪಡಿಸಲಾಗಿದೆ. ಅಹವಾಲುಗಳೇನಾದರೂ ಇದ್ದಲ್ಲಿ ಜೂ.25 ರೊಳಗೆ ಕಚೇರಿಗೆ ಸಲ್ಲಿಸಲು ಅವಕಾಶವಿರುತ್ತದೆ. ಇಚ್ಛೆಯುಳ್ಳ ಪಿಂಚಣಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ಅದಾಲತ್‌ನಲ್ಲಿ ಭಾಗವಹಿಸಬಹುದು ಎಂದು ಹಿರಿಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟ್ಯಾಕ್ಸಿ ಚಾಲಕನ ಬೆದರಿಸಿ ಕಾರು ಅಪಹರಣ

ಮೈಸೂರು, ಜೂ.23–ಬಾಡಿಗೆಗೆ ಕರೆದುಕೊಂಡು ಹೋಗಿ ಆಟೋಚಾಲಕರ ಮೇಲೆ ಹಲ್ಲೆ ನಡೆಸಿ, ಸುಲಿಗೆ ಮಾಡಿ ಆಟೋವನ್ನು ಅಪಹರಿಸಿಕೊಂಡು ಹೋಗುವ ಘಟನೆಗಳು ಮಾಸುವ ಮುನ್ನವೇ ಟ್ಯಾಕ್ಸಿ ಚಾಲಕನನ್ನು ಬಾಡಿಗೆಗೆ ಕರೆದೊಯ್ದು ಹೆದರಿಸಿ, ಟ್ಯಾಕ್ಸಿಯನ್ನೇ ಅಪಹರಿಸಿರುವ ಪ್ರಕರಣ ವರದಿಯಾಗಿದೆ.

ಮೈಸೂರಿನ ಕೆಸರೆ ಎರಡನೇ ಹಂತದ ನಿವಾಸಿ ಅಪ್ಸರ್ ಪಾಷ(55) ಟ್ಯಾಕ್ಸಿ ಮತ್ತು ಹಣ ಕಳೆದುಕೊಂಡವರಾಗಿದ್ದು, ಸ್ವಂತ ಟ್ಯಾಕ್ಸಿ (ಕೆಎ 09 ಎ 6738) ಹೊಂದಿರುವ ಇವರು ಜೂ.19ರಂದು ರಾತ್ರಿ 10 ಗಂಟೆ ಸುಮಾರಿನಲ್ಲಿ ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದ ಮುಂಭಾಗವಿರುವ ಟ್ಯಾಕ್ಸಿ ಸ್ಟ್ಯಾಂಡ್‌ನಲ್ಲಿ ಬಾಡಿಗೆಗಾಗಿ ಕಾಯುತ್ತಿರುವಾಗ ಬಂದ ಇಬ್ಬರು ವ್ಯಕ್ತಿಗಳು ಹುಲ್ಲಹಳ್ಳಿಗೆ ತೆರಳಬೇಕೆಂದು ಸಾವಿರ ರೂ. ಬಾಡಿಗೆ ಮಾತನಾಡಿಕೊಂಡು ಕರೆದೊಯ್ದಿದ್ದಾರೆ.

ಉದ್ಬೂರು ಮಾರ್ಗವಾಗಿ ತೆರಳಿದ ಟ್ಯಾಕ್ಸಿ ನಂಜನಗೂಡು ತಾಲೂಕು ಅಹಲ್ಯಾ ಗೇಟ್ ಬಳಿ ಹೋಗುತ್ತಿದ್ದಾಗ ಮೂತ್ರ ವಿಸರ್ಜನೆಗಾಗಿ ಟ್ಯಾಕ್ಸಿ ನಿಲ್ಲಿಸುವಂತೆ ಹೇಳಿದ ಖದೀಮರು, ಟ್ಯಾಕ್ಸಿ ನಿಲ್ಲುತ್ತಿದ್ದಂತೆಯೇ ಅಪ್ಸರ್ ಪಾಷ ಅವರಿಗೆ ಚಾಕು ತೋರಿಸಿ ಅವರ ಬಳಿ ಇದ್ದ ಮೊಬೈಲ್, ವಾಚ್, 500 ರೂ. ನಗದು ಕಸಿದುಕೊಂಡು ಟ್ಯಾಕ್ಸಿಯೊಂದಿಗೆ ಹುಲ್ಲಹಳ್ಳಿ ಕಡೆ ಪರಾರಿಯಾಗಿದ್ದಾರೆ.

ನಂತರ ಆ ಮಾರ್ಗವಾಗಿ ಬಂದ ಟಾಟಾ ಏಸ್ ಸರಕು ವಾಹನದಲ್ಲಿ ಮೈಸೂರಿನ ಎನ್‌ಐಇ ಕಾಲೇಜು ಬಳಿಗೆ ಬಂದ ಅಪ್ಸರ್ ಪಾಷ, ಅಲ್ಲಿಂದ ದೂರವಾಣಿ ಮೂಲಕ ಸ್ನೇಹಿತ ಸಿರಾಜ್ ಎಂಬುವರಿಗೆ ವಿಷಯ ತಿಳಿಸಿದ ನಂತರ ನಜರ್‌ಬಾದ್ ಠಾಣೆ ಪೊಲೀಸರಿಗೆ ಮಾಹಿತಿ ನೀಡಲಾಗಿ ಪೊಲೀಸರು ಅಪ್ಸರ್ ಪಾಷಾರನ್ನು ಕರೆದುಕೊಂಡು ಅಹಲ್ಯಾ, ಮಾರ್ಬಳ್ಳಿ ಮುಂತಾದ ಪ್ರದೇಶಗಳಲ್ಲಿ ಹುಡುಕಿದರಾದರೂ, ಟ್ಯಾಕ್ಸಿ ಪತ್ತೆಯಾಗಿಲ್ಲ. ಈ ಸಂಬಂಧ ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ದರ ಏರಿಕೆ: ಜೆಡಿಎಸ್ ಪ್ರತಿಭಟನೆ



ಮೈಸೂರು, ಜೂ.23(ಜಿಎ)– ರಾಜ್ಯ ಸರ್ಕಾರ ಅವೈಜ್ಞಾನಿಕವಾಗಿ ವಿದ್ಯುತ್ ಬಿಲ್ ನೀಡುತ್ತಿರುವುದು ಹಾಗೂ ದರ ಏರಿಕೆ ಮಾಡಿರುವುದನ್ನು ವಿರೋಧಿಸಿ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ನಗರ ಮಾತೃಮಂಡಳಿ ವೃತ್ತದಲ್ಲಿರುವ ವಿವಿ ಮೊಹಲ್ಲಾ ಸೆಸ್ಕ್ ವಿಭಾಗ ಕಚೇರಿ ಮುಂಭಾಗದಲ್ಲಿ ಶುಕ್ರವಾರ ಪ್ರತಿಭಟಿಸಿದರು.

ಈ ವೇಳೆ ಪ್ರತಿಭಟನಾಕಾರರು ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ಉಚಿತ ವಿದ್ಯುತ್ ಭರವಸೆ ನೀಡಿ, ವಿದ್ಯುತ್ ದರ ದುಪ್ಪಟ್ಟು ಮಾಡಿದೆ. ಇದು ರಾಜ್ಯದ ಜನತೆಗೆ ಮಾಡಿರುವ ಮಹಾದ್ರೋಹವಾಗಿದೆ. ಕೊರೊನಾ ನಂತರ ನಿಧಾನವಾಗಿ ಜೀವನವನ್ನು ಸುಧಾರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ದರ ಏರಿಕೆ ಶಾಕ್ ನೀಡಲಾಗಿದೆ. ಇದು ಬಡವರು, ಸಾಮಾನ್ಯ ವರ್ಗದವರು, ರೈತರು, ಕೂಲಿ ಕಾರ್ಮಿಕರು ಹಾಗೂ ಕೈಗಾರಿಕೆಗಳಿಗೆ ಮಾಡಿರುವ ಅನ್ಯಾಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಕೂಡಲೇ ದರ ಏರಿಕೆ ವಾಪಸ್ ಪಡೆದು ವಿದ್ಯುತ್ ಬಿಲ್ ಮನ್ನಾ ಮಾಡಿ ಬಡವರನ್ನು ಉಳಿಸಬೇಕು. ಹಾಗೆಯೇ, ಈ ಹಿಂದೆ ಸೋಲಾರ್ ಅಳವಡಿಸಿದರೆ ನೀಡುತ್ತಿದ್ದ ಸಬ್ಸಿಡಿ ರದ್ದುಪಡಿಸಿರುವುದು ಖಂಡನೀಯ. ಸೋಲಾರ್ ಸಬ್ಸಿಡಿ ನೀಡಬೇಕು ಎಂದು ಒತ್ತಾಯಿಸಿದರು.

ನಗರ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ನೇತೃತ್ವ ವಹಿಸಿದ್ದರು. ಜೆಡಿಎಸ್ ನಗರ ಪ್ರಧಾನ ಕಾರ್ಯದರ್ಶಿ ಮುದ್ದುರಾಜ್, ಮುಖಂಡರಾದ ಸತೀಶ್, ಕೃಷ್ಣಾಚಾರ್, ಲಕ್ಷ್ಮೀ, ಹೇಮಾವತಿ, ರಘು, ರಾಜು, ಹನುಮೇಗೌಡ, ಮಹದೇವ್, ಅರುಣ್ ಮುಂತಾದವರು ಭಾಗಿಯಾಗಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
50X80 South Face Opp. Park 4th Stage 2nd Phase Vijayanagar 500 Mtrs from Ring Road Vijayanagar Mysore
9620026084

ಬೇಕಾಗಿದ್ದಾರೆ
ಕಾರ್ ಡ್ರೈವರ್
ವಯಸ್ಸು : 50 ವರ್ಷಗಳ ಮೇಲ್ಪಟ್ಟವರು
ವೇತನ : 10,000/–
ವಸತಿ, ಊಟ ಉಚಿತ
8618025721

ಹೊಸಮನೆ
20x30 ಮನೆ ದಟ್ಟಗಳ್ಳಿ 20x30 ಡ್ಯೂಪ್ಲೆಕ್ಸ್ ಒಲ್ ಟೀಕ್ ಗ್ರಾನೈಟ್, 3 ಬೆಡ್ ರೂಂ. ಇಟಾಲಿಯನ್ ಕಿಚನ್ ಸೈಟ್ ಹಳೆಮನೆ–ಹೊಸಮನೆ
9945042875

SITE FOR SALE
Muda Approved & DTCP Athmananda Sagar Paramananda Sagara Nithyananda Sagara & Kuberananda Sagara Price 8/- lakhs TO 50/- lakhs 30x40, 60x40 & 50x80
JK 8951144240

ಕಳೆದು ಹೋಗಿದೆ
ಎಂ.ಆರ್. ರಾಘವೇಂದ್ರ ರವರಿಗೆ ಸೇರಿದ ದಿನಾಂಕ 02.02.1988ರ ಹಿಂದಿನ ನಗರಾಭಿವೃದ್ಧಿ ಪ್ರಾಧಿಕಾರ ಮಂಜೂರು ನೀಡಿರುವ ಮೂಲ ಮಂಜೂರಾತಿ ಪತ್ರದ ಸಂಖ್ಯೆ ಓ.ಪ್ರಿ.ಎಸ್. 5/97.88. ಒಂದು ವಾರದ ಹಿಂದೆ ಬಿಳಿದ್ದ ಅಂದೋಲನ ವೃತ್ತದ ಬಯ್ಯಪ್ಪನವರ ಪತ್ರವು ಕಳೆದು ಹೋಗಿರುತ್ತದೆ. ಪತ್ತೆ ಸಿಕ್ಕಿದ್ದಲ್ಲಿ ಕೂಡಲೇ ಸಂಪರ್ಕಿಸಿ :
ಮೊ. 98867 64658

ಮನೆ ಬಾಡಿಗೆಗೆ ಇದೆ
172, Nadanahalli Ragi Mill Street Rajashekar Hospital Behind, Solar, Gyeser, 3 Bed room, North Face, All Facilities
7975023201,7815812948

ಕುಡಿತದ ಚಟದಿಂದ ಮುಕ್ತರಾಗಬೇಕೆ?
ಮೈಸೂರಿನ ಚೈತನ್ಯ ಫೌಂಡೇಷನ್ ವತಿಯಿಂದ ಜೂ.24 ರಿಂದ 21 ದಿನಗಳ ಕಾಲ ಉಚಿತ ಕುಡಿತ ಮತ್ತು ಮಾದಕ ವಸ್ತುಗಳ ಚಟ ಬಿಡಿಸುವ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಊಟ, ವಸತಿ, ಚಿಕಿತ್ಸಾ ಸೌಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗೆ
9164469570
6361744190

ಹೊಸ ಮನೆ ಮಾರಾಟಕ್ಕಿದೆ
2BHK, 30x40
ಮುಡಾ ಅಪ್ರೂವ್ಡ್, ಸೆಂಟ್ ಜೋಸೆಫ್ ಶಾಲೆಯ ಹತ್ತಿರ, ಇಲವಾಲ, ಮೈಸೂರು
8217851695

NEW APARTMENT FOR SALE/RENT
2BHK North Face Kuvempunagar,
9480606154
9448324232

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಹೊಸಮನೆ ಮಾರಾಟಕ್ಕಿದೆ
20X30, N/F ನೆಲ ಮಹಡಿ ಮತ್ತು ಮೊದಲನೇ ಮಹಡಿ, ಸಾತಗಳ್ಳಿ ಬಿ ಜೋನ್, 72 ಲಕ್ಷ, ನೆಗೋಷಿಯೇಬಲ್
9535184616

100% TEAK WOOD FACTORY FINISH DOORS
@ DEPOT RATES

10 YEARS WARRANTY
www.ssbuildmart.com
9901291267
9845426862

ಫ್ರಿಡ್ಜ್, ವಾಷಿಂಗ್ ಮಷಿನ್, ಮೈಕ್ರೋ ಓವನ್, LCD, LED TVs Doorstep Service
Mob: 9886226672

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM 10yrs WARRANTY
CALL 99012 91267 98454 26862

Required
Machnical or Fitter ITI Holder with 3-4 Years Experience Work Place - BPCL Mysore
9845011816

ರೈಲಿನಲ್ಲಿ ಕಾಶಿಯಾತ್ರೆ
10/08/2023 & 5/9/2023 ರಿಂದ ರೈಲಿನಲ್ಲಿ 10 ದಿನಗಳ ಪ್ರವಾಸ, ಸ್ಥಳಗಳು: ಕಾಶಿ, ಸಾರನಾಥ, ಅಯೋಧ್ಯ, ಅಲಹಾಬಾದ್, ಸೀತಾಮಡಿ, ಗಯಾ, ಬುದ್ಧಗಯಾ, ಇತ್ಯಾದಿ. ಊಟ, ರೂಂ, ಟ್ರೈನ್ ಟಿಕೆಟ್, ಬಸ್ ಎಲ್ಲಾ ಸೇರಿರುತ್ತೆ. ಒಂದು ಸೀಟಿಗೆ ರೂ.11000 ಸಂಪರ್ಕಿಸಿ: ವಾರ್ಷಲ್ ಟೂರ್ಸ್ & ಟ್ರಾವೆಲ್ಸ್ ನಜರ್‌ಬಾದ್, ಮೈಸೂರು
9342118682,9449128682

JMS COACHING CENTRE
Tuitions Offered for 8th, 9th & 10th Std.
Students (Science & Maths)
Venue: Kanaka Pragna Montessori School, #788/158, 12th Cross, Ramanuja Road, Mysore
Contact
9845329866

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ: ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1) ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
2) ಶಿಶ್ಯರಣ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು
9739816440

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

HOUSE FOR SALE
3 BHK New Duplex House, MUDA, Fully Furnished, (20x30), N/F Door at Dattagalli, Near Triveni Supermarket
Price - 79 Lakhs
Contact Owner, Brokers Welcome
6361295132

ವಧು ಬೇಕಾಗಿದ್ದಾರೆ
ಬೆಂಗಳೂರಿನಲ್ಲಿರುವ 49 ವಯಸ್ಸಿನ MMCಯ ಉನ್ನತ ವೇತನ ಇರುವ ವಿಚ್ಛೇದಿತ ಬ್ರಾಹ್ಮಣ ವರನಿಗೆ ವಧು ಬೇಕಾಗಿದ್ದಾರೆ.
9844408895
9538267942

ಬೇಕಾಗಿದ್ದಾರೆ
ಟ್ರಾಕ್ಟರ್ ಶೋರೂಂಗೆ ಫೀಲ್ಡ್ ಆಫೀಸರ್‌ಗಳು ಬೇಕಾಗಿದ್ದಾರೆ. (ಪುರುಷರಿಗೆ ಮಾತ್ರ)
ಸ್ಥಳ : ಗುಂಡ್ಲುಪೇಟೆ, ಚಾಮರಾಜನಗರ, ಕೊಳ್ಳೇಗಾಲ, ಹನೂರು
9606053535

ಉಚಿತ ತರಬೇತಿ
ಇಂದೇ ಉಚಿತ ಹೊಲಿಗೆ ಯಂತ್ರ ಪಡೆಯಿರಿ. 3 ತಿಂಗಳ ಹೊಲಿಗೆ ತರಬೇತಿಯನ್ನು ಉಚಿತವಾಗಿ ಪಡೆಯಿರಿ, ತರಬೇತಿ ನಂತರ ಸರ್ಟಿಫಿಕೇಟ್ ಕೊಡಲಾಗುವುದು, ಕೇವಲ 25 ಸೀಟುಗಳು ಲಭ್ಯ Bajaj Easy EMI ಸೌಲಭ್ಯದೊಂದಿಗೆ. ಸಂಪರ್ಕಿಸಿ:
ಗಾನವಿ ಇಂಟರ್‌ನ್ಯಾಷನಲ್
22/1 ಚಂದ್ರಗುಪ್ತ ರಸ್ತೆ, ಸುಬ್ಬರಾಯನ ಕೆರೆ ಬಸ್ ಸ್ಟ್ಯಾಂಡ್ ಹತ್ತಿರ, ಮೈಸೂರು
Contact: 9620476665, 9900406665, 9620486665

ಬೇಕಾಗಿದ್ದಾರೆ/ WANTED
ಮೈಸೂರ್ ನಲ್ಲಿ KD ರೋಡ್ ನಲ್ಲಿ ಇರುವ ಹುಡುಗರು ಸಪ್ಲಾಯರ್ ರೆಸ್ಟೋರೆಂಟ್‌ಗೆ, ಅನುಭವವುಳ್ಳ (1) ಸಪ್ಲೈಯರ್ (SUPPLIER), ವೇಟರ್ (WAITER), (2) Assistant Cook, (3) ಕೌಂಟರ್ ಪಾರ್ಸೆಲ್ PARCEL (4) ತಂದೂರ್, ಚೈನೀಸ್ ಮತ್ತು ನಾರ್ತ್ ಇಂಡಿಯನ್ ಶೆಫ್‌ಗಳು (ಚೆಫ್) ಬೇಕಾಗಿದ್ದಾರೆ. ಆಕರ್ಷಕ ಸಂಬಳ ಹಾಗು ಉತ್ತಮ ಸೌಲಭ್ಯಗಳನ್ನು ನೀಡಲಾಗುತ್ತದೆ
7899028086

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

ಹೋಲ್‌ಸೇಲ್ ದರದಲ್ಲಿ
ಜೀವಂತ ನಾಟಿ ಕೋಳಿ ಕೆಜಿ. ರೂ. 260, ರೂ. 350, ರೂ. 580

ಗೌಡ್ರು ನಾಟಿಕೋಳಿ ಅಂಗಡಿ
ನಂ. 198/1, ಪೀಟರ್ ಕ್ರಾಸ್ ಮೇನ್ ರೋಡ್, ದೊಡ್ಡ ತಾಯಿ ಕಲ್ಯಾಣ ಮಂಟಪ ಹಿಂದೆ, ಎಸ್.ಆರ್. ಬೊಮ್ಮನ್ನ, ಮೈಸೂರು–570 007
9448048576, 9632378020

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

FOR SALE
BUY & SELL SITE, HOUSE, LAND
1) 20x30, 30x40, 40x60 sites in H.D. Kote Road & Bogadi Road.
2) 30x40 sites Srinagar attach (JP Nagar)
3) Commercial 25 guntas land Near Narasipura toll.
4) 20x30, 30x40 house, RK Nagar, Dattagalli, Kuvempunagar.
9538690359, 9035990359

ತಕ್ಷಣ ಸಂಪರ್ಕಿಸಿ
ಹೆಸರಾಂತ MNC ಕಂಪನಿಗಳಲ್ಲಿ Cashier, Billing, Data Entry, Customer Support, Sales Manager, Team Leader, Back Office, Quality, Checker, Line Incharge, Machine Operator, Helpers, ಇತ್ಯಾದಿ ಕೆಲಸಗಳಿಗೆ 7th, 10th, PUC, ITI, Diploma (Any Grade) Any Degree Pass/Fail, MBA, M.Com, MSW, ಆದರಿಂದ ವಿವಿಧ ಅರ್ಹತೆ ಯುಳ್ಳವರು ಬೇಕಾಗಿದ್ದಾರೆ. ಸಂಬಳ 14,000 ರಿಂದ 36,000/-(ESI+PF+OT)ಯೊಂದಿಗೆ
9739857142,9164052361

LEARN
* Typing Skill
* MS Word (adv)
* MS Excel (adv)
* MS Power Point
* E-mail Ethics
* Google Form
* Google Meet
Just in 15 Days @ 500/- only & Earn Min 8000/- monthly
9620198701

Site for sale in Mysuru
4 km from Bogadi Ring Road, 7 km to University of Mysore, Bogadi Road, near Maratikyathana Halli & Trendz Apartment. 80% Bank loan available, approved layout. Measurement: 30x35, just Rs. 22,00,000/- only.
Contact:
Mob: 8971918088

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

ನಿವೇಶನ ಮಾರಾಟಕ್ಕಿದೆ
ಸರ್ದಾರ್ ವಲ್ಲಭಭಾಯ್ ಪಟೇಲ್ ನಗರದಸಮೀಪದಲ್ಲಿ ಇರುವ ಕೊಳ್ಳೇಗಾಲ ಲೇಔಟಿನ ನಿವೇಶನ ಸಂಖ್ಯೆ322 (30*40)ಮಾರಾಟಕ್ಕಿದೆ.
+91 9880916816

ಉದ್ಯೋಗ ಅವಕಾಶ
ಬಂದ ವಿಧವೆ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ 15200/- to 86000/-
9740733021
9535028750

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, Kuvempunagar, Mysuru
9611028523 9343142258

ಬೇಕಾಗಿದ್ದಾರೆ
ಫರ್ನಿಶಿಂಗ್ ಅಂಗಡಿಗೆ ಹುಡುಗರು ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
Akbar Road Near Ashoka Road
40 ವರ್ಷ ಒಳಪಟ್ಟವರು
9916459786

ST.PAUL ENGLISH SCHOOL
Bannimantapa, Mysore
WALK IN INTERVIEW ON Monday, 26th June 2023 between 10.30am to 3.30pm
Wanted Teachers
Qualified, Experience with Command in English
1. DEd Teachers for Primary and Higher Primary
2. Nursery Teacher
7349732300 / 9243526260
Admission are open from LKG to 10th Standard

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಉತ್ತಮವಾದ ಸಂಬಳ ಪಡೆಯಿರಿ 35 ರಿಂದ 48 ರವರೆಗೆ ಮೇಟಗಳ್ಳಿ, ಬೇಲವಾಡಿ, ಜೆ.ಪಿ.ನಗರ, ಬೋಗಾದಿ ಹಾಗೂ ಮೈಸೂರಿನ ಸುತ್ತ ಮುತ್ತ ಇರುವ ಪ್ರದೇಶಗಳಿಗೆ
0821-4852002
9538886328

SITES FOR SALE
MUDA APPROVED SEREIN VILLAS 30X40, 30X50
NEAR RAINBOW SCHOOL MARTIKYATHANALLI BOGADI ROAD, MYSORE
9448054390

ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (Cold Pressed) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ. ಶ್ರೀ ಕಾಮಧೇನು ಬಯೋ–ನೀಮ್ #203, ಬನ್ನಿಮಂಟಪ ಬಡಾವಣೆ, ಮೈಸೂರು–570 015
Mob: 80888-87802

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160

We are Hiring Urgently
* Any qualification. * Language needed for: Hindi, Kannada, Tamil, Telugu * Any one language needed. * Freshers can even available.
* Location nearby: Vontikoppal, K.D. Road, Mysuru-570 002.
* For more details contact his No.
6362907236, 6360839679

ಬೇಕಾಗಿದ್ದಾರೆ
ಶ್ರೀ ಛಾಯಾದೇವಿ ದತ್ತು ಕೇಂದ್ರ ಮೈಸೂರು ಇಲ್ಲಿ ಚಿಕ್ಕ ಚಿಕ್ಕ ಮಕ್ಕಳನ್ನು ಸಂಸ್ಥೆಯಲ್ಲಿ ಉಳಿದುಕೊಂಡು ನೋಡಿಕೊಳ್ಳುವವರು ಕೆಲಸಕ್ಕೆ ಬೇಕಾಗಿದ್ದಾರೆ ಉಚಿತ ವಸತಿ ಮತ್ತು ಉಟದ ವ್ಯವಸ್ಥೆ ಇರುತ್ತದೆ
8618770716

ಬೇಕಾಗಿದ್ದಾರೆ
ಕಸ್ಟಮರ್ ರಿಲೇಷನ್ಶಿಪ್ ಮ್ಯಾನೇಜರ್/ ಎಕ್ಸಿಕ್ಯೂಟಿವ್, ಬ್ಯುಸಿನೆಸ್ ಡೆವಲಪ್ಮೆಂಟ್ ಎಕ್ಸಿಕ್ಯೂಟಿವ್/ಬ್ಯುಸಿನೆಸ್ ಡೆವಲಪ್ಮೆಂಟ್ ಮ್ಯಾನೇಜರ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ (ಪಾರ್ಟ್ ಟೈಮ್ ಹಾಗೂ ಫುಲ್ ಟೈಮ್) ವಯಸ್ಸು : 40ರ ಒಳಗೆ
8310098788, 6361439167

ಶ್ರೀ ರಾಘವೇಂದ್ರ ಕೊಳ್ಳೇಗಾಲ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮಹಾ ಮಾಂತ್ರಿಕ ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ಗಂಡನೊಂದಿಗೆ ಕಿರುಕುಳ, ದುಷ್ಟಶಕ್ತಿ, ಶತ್ರುಕಾಟ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ಇನ್ನೂ ಹಲವಾರು ಸಮಸ್ಯೆಗಳಿಗೆ ಪರಿಹಾರ ಮಾಡಲಾಗುವುದು.

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಕಾಶ್ ಪೊದುವಾಳ್
ಮೊ: 9731839596
ಜನ್ಮ ಕುಂಡಲಿಯ ಪರಿಶೀಲನೆ ಮೂಲಕ ಸ್ತ್ರೀ ಪುರುಷ ವಶೀಕರಣ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ಮಾಟಮಂತ್ರ, ಶತ್ರುಬಾಧೆ, ವ್ಯಾಪಾರ, ಆರೋಗ್ಯ, ಉದ್ಯೋಗ ಇತ್ಯಾದಿ ಸಮಸ್ಯೆಗಳಿಗೆ ಪರಿಹಾರ. ವಿಳಾಸ: ನಂ.68, ಸತ್ಯ ಮಾರ್ಗ ಗಿರಿಜಾ ಸ್ಕೂಲ್ ಹಿಂಭಾಗ, ಮೈಸೂರು.

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮಹಾ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಆರಾಧಕರು. ದಾಂಪತ್ಯ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ, ಮಾಟ ಮಂತ್ರ ಇತ್ಯಾದಿ ಸಮಸ್ಯೆಗಳಿಗೆ ಪರಿಹಾರ. ಕೌಂಟರ್ ಹತ್ತಿರ (ರಿಲಾಯನ್ಸ್ ಮಾರ್ಟ್) (ಕೆ.ಎಸ್.ಆರ್.ಟಿ.ಸಿ) ಸಬರ್ಬನ್ ಬಸ್ ಸ್ಟ್ಯಾಂಡ್, ಮೈಸೂರು-1

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು
INDIAN FAMOUS ASTROLOGER
Mob: 9036984793
ಪಂಡಿತ್ ಕೆ.ಎಸ್. ಪಟ್ಟೇರ್ (ಕೇರಳ)
ಇವರು ಕೇರಳದ ಕುಟ್ಟಿಚಾತನ್ ಕೊಳ್ಳೇಗಾಲದ ಕಾಳಿ ಪೂಜೆಯಿಂದ ಸ್ತ್ರೀ ಪುರುಷ ವಶೀಕರಣ, ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುಬಾಧೆ ಇತ್ಯಾದಿ ಸಮಸ್ಯೆಗಳಿಗೆ ಪರಿಹಾರ. ಪೂಜಾ ಸ್ಥಳ ಭಗತ್ ಸಿಂಗ್ ಸರ್ಕಲ್, ಮೈಸೂರು–570006

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

HOUSE FOR SALE
Newly built 30x40 House for Sale in Vijayanagar 4th Stage, 2nd Phase, MUDA 3 BHK House for Sale in Vijayanagar 4th Stage 2nd Phase Near NPS School For More Details Contact:
9880089750

ಮುಡಾ ಖಾತಾ ಸೈಟ್ ಸೇಲ್
30x40 ಈಸ್ಟ್ ಫೇಸಿಂಗ್ ದಡದಕಲ್ಲಳ್ಳಿ, ಜ್ಞಾನಭಾರತಿ ಲೇಔಟ್
ಬೆಲೆ : 25 ಲಕ್ಷ
ಡೈರೆಕ್ಟ್ ಓನರ್
9342123373

ಬ್ಯುಸಿನೆಸ್ ಪ್ಲಾನ್
ಬ್ಯುಸಿನೆಸ್ ಪ್ಲಾನ್ ನಿಮ್ಮದು. ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50–50. ಈ ರೀತಿ ಬ್ಯುಸಿನೆಸ್ ಪ್ಲಾನ್ ಇರುವವರು ಕೂಡಲೇ ಸಂಪರ್ಕಿಸಿ
9901080314

ಕಳೆದಿದೆ
ಪದ್ಮಾವತಿ, 323, 3ನೇ ಕ್ರಾಸ್, ವಿದ್ಯಾನಗರ, ಮೈಸೂರು, ದಿನಾಂಕ 21–6–2023 ರಂದು ಸಿದ್ಧಾರ್ಥ ಬಡಾವಣೆಯ ಸ್ಥಳದಲ್ಲಿ ಪ್ರಯಾಣ ಮಾಡುವಾಗ ಶ್ರೀನಿವಾಸ ಶೆಟ್ಟಿಯವರ ಬಾಬ್ತು ನಂ. 103, ಸಾತಗಳ್ಳಿಯ ಮನೆ ದಾಖಲೆಗಳಿಗಿರುವ ಟೈಟಲ್ ಡೀಡ್, ಕಂದಾಯ ರಸೀದಿ, ಆಧಾರು ಮನೆ ಯೋಜನೆಯ ದಾಖಲಾತಿ ಪತ್ರಗಳ ಮೂಲ ದಾಖಲಾತಿಗಳು ಕಳೆದುಹೋಗಿವೆ. ಸಿಕ್ಕಿದವರು ಸಂಪರ್ಕಿಸಿ:
Mob: 9741109606

Leo Security Services
Security require urgently, near Yelwal, Jayalakshmipuram, Bannimantap.
Contact:
9972910382, 8951212305

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಸೌತ್ ಇಂಡಿಯನ್ ಭಟ್ರು, ನಾರ್ತ್ ಇಂಡಿಯನ್ ಭಟ್ರು, ರುಬ್ಬುವವರು, ಪಾತ್ರೆ ತೊಳೆಯುವವರು, ಹೆಲ್ಪರ್‌ಗಳು.
Mob: 8088337564

ತಕ್ಷಣ ಬೇಕಾಗಿದ್ದಾರೆ
1) ಡೆಲಿವರಿ ಸೂಪರ್‌ವೈಸರ್
ಸ್ಥಳ: ನಾಗಮಂಗಲ
2) ಡೆಲಿವರಿ ಹುಡುಗರು ಸ್ಥಳ: ದಟ್ಟಗಳ್ಳಿ, ಮೈಸೂರು, ಹಾಸನ, ರಾಮನಗರ,
ಸಂಬಳ: 14,000 ರಿಂದ 20,000 +ESI+PF+Incentive
9741836111
9060438484

SITE FOR SALE
Sri Sai Chamundeshwari Layout Near Chikkahalli Mysore-T.Narasipura Main Road, 30x40 S/F
6364501692

WANTED
English Medium
LADY TEACHERS
for a School at Gundlupet
* Any Degree with or without Montessori to teach Kindergarten
* BA/MA English with B.Ed very good salary+TA
Fluency in English is must.
9731897495

ಮೈಸೂರು ಲ್ಯಾಂಡ್ ಮಾರ್ಟ್
ಹಳೆ ಕೆಸರೆ, ಸಾತಗಳ್ಳಿ ಮತ್ತು ಬನ್ನೂರು ರೋಡ್ ಸುತ್ತಮುತ್ತ
30x40 & 40x60
ನಿವೇಶನಗಳು ಲಭ್ಯವಿದೆ
ಸಂಪರ್ಕಿಸಿ
7483656875

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ: 9741806990
ವಶೀಕರಣ, ಪ್ರೇಮ ವಿವಾಹ, ದಾಂಪತ್ಯ ಸಮಸ್ಯೆ, ಸಂತಾನ, ಮಾಟ ಮಂತ್ರ, ಶತ್ರುಬಾಧೆ, ವ್ಯಾಪಾರ, ಆರೋಗ್ಯ ಇತ್ಯಾದಿ ಸಮಸ್ಯೆಗಳಿಗೆ 3 ದಿನಗಳಲ್ಲಿ ಶಾಶ್ವತ ಪರಿಹಾರ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ದಾಂಪತ್ಯ ಸಮಸ್ಯೆ, ಸ್ತ್ರೀ ಪುರುಷ ವಶೀಕರಣ, ಪ್ರೇಮ ವಿವಾಹ, ಮಾಟ ಮಂತ್ರ ಇತ್ಯಾದಿ ಸಮಸ್ಯೆಗಳಿಗೆ 3 ದಿನಗಳಲ್ಲಿ ಶಾಶ್ವತ ಪರಿಹಾರ ಮಾಡಿಕೊಡಲಾಗುವುದು.

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ & ವಿಜಯನಗರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: 13500/- + 8hrs 16000/-
9620667819
9880727819

ಹೊಸ ಮನೆ ಮಾರಾಟಕ್ಕಿದೆ
2BHK, 30x40
ಮುಡಾ ಅಪ್ರೂವ್ಡ್, ಸೆಂಟ್ ಜೋಸೆಫ್ ಶಾಲೆಯ ಹತ್ತಿರ, ಇಲವಾಲ, ಮೈಸೂರು
8217851695

ಬೇಕಾಗಿದ್ದಾರೆ
Data Entry ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
15th Cross ರಾಮಾನುಜ ರಸ್ತೆ, ಅಗ್ರಹಾರ
Timing : 9 tm to 6pm
8762009829

ಮನೆ ಬಾಡಿಗೆಗೆ ಇದೆ
1BHK (G.F) ಔಟ್ ಹೌಸ್, ಅಕ್ಷಯಭಂಡಾರದ ಹತ್ತಿರ, ನ್ಯೂ ಕಾಂತರಾಜೇ ಅರಸ್ ರಸ್ತೆ, ಕುವೆಂಪುನಗರ ಮೈಸೂರು, ಸಸ್ಯಾಹಾರಿಗಳಿಗೆ ಮಾತ್ರ, (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
7760923685

ಜಮೀನು ಮಾರಾಟಕ್ಕಿದೆ
1.5 ಎಕರೆ ಫಾರ್ಮ್ ಹೌಸ್ ಮತ್ತು ಲೇಔಟ್ ಸೂಕ್ತವಾಗಿದೆ. ಪೂರ್ಣ ಅಥವಾ ಭಾಗಶಃ ಸಹ ಖರೀದಿಸಬಹುದು. ರಿಂಗ್ ರೋಡ್‌ನಿಂದ 1.7 ಕಿ.ಮೀ (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9972572465
8884431722, 9945251832

ಮಾರಾಟಕ್ಕಿದೆ
LAB ನಾಯಿಮರಿ ಮಾರಾಟಕ್ಕಿದೆ 2 ತಿಂಗಳ, ಸುಂದರ ಕಪ್ಪು ಹೆಣ್ಣುಮರಿ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
9353291954

Attn. ಸುವರ್ಣಾವಕಾಶ
ಪ್ರತಿಷ್ಠಿತರಿಗಳು ಶೂನ್ಯ ಬಂಡವಾಳ, ಮನೆ / ಕಛೇರಿಯಿಂದಲೇ ಕೆಲಸ ನಿಮ್ಮ ಸಮಯಕ್ಕೆ ತಕ್ಕಂತೆ ಕೆಲಸ ಪಿ.ಎಫ್ ಹಾಗೂ ವೈದ್ಯಕೀಯ ಲಾಭ ವಿಶೇಷ ಪ್ರಯಾಣ 30 ವರ್ಷ ಮೇಲ್ಪಟ್ಟವರು ಹಾಗೂ ಎಸ್.ಎಸ್.ಎಲ್.ಸಿ ಪಾಸಾಗಿರಬೇಕು.
9449152797
8660764095

ಮಾರಾಟಕ್ಕಿದೆ
1400 ಅಡಿಯುಳ್ಳ ಹೊಸ ಮನೆ ಮಾರಾಟಕ್ಕಿದೆ ಶ್ರೀರಾಂಪುರ ರಿಂಗ್ ರೋಡ್ ಹಾಗೂ ಸೈಟುಗಳು ಮಾರಾಟಕ್ಕಿವೆ ಶ್ರೀನಗರ ಹಿಂಭಾಗ ಮೈಸೂರು
8050345574

ಹೋಂ ನರ್ಸಿಂಗ್ ಕೆಲಸ
ಯುವಕ, ಯುವತಿಯರು, ಮಹಿಳೆಯರು ವಿಧವೆ, ವಿಚ್ಛೇದಿತೆಯರು, 12hr & 24hr ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ ಅನುಭವ ಅವಶ್ಯಕತೆ ಇಲ್ಲ, ಅಗ್ರಹಾರ:
9035113222

ವಿಮಾನದಲ್ಲಿ ಚಾರ್‌ಧಾಮ್ ಯಾತ್ರೆ
22/09/2023 ರಿಂದ 12 ದಿನಗಳು ಪ್ರವಾಸ ಸ್ಥಳಗಳು: ಡೆಲ್ಲಿ, ಹರಿದ್ವಾರ್, ಋಷಿಕೇಶ್, ಗಂಗೋತ್ರಿ, ಯಮುನೋತ್ರಿ, ಉತ್ತರಕಾಶಿ, ರುದ್ರಪ್ರಯಾಗ, ಕೇದಾರ್‌ನಾಥ್, ಬದರಿನಾಥ್, ಇತ್ಯಾದಿ. ಊಟ, ರೂಂ, ವಿಮಾನ ಟಿಕೆಟ್, ಬಸ್ ಎಲ್ಲಾ ಸೇರಿರುತ್ತೆ. ಒಂದು ಸೀಟಿಗೆ ರೂ.44000 ಸಂಪರ್ಕಿಸಿ: ವಾರ್ಷಲ್ ಟೂರ್ಸ್ & ಟ್ರಾವೆಲ್ಸ್ ನಜರ್‌ಬಾದ್, ಮೈಸೂರು
9342118682,9449128682

SITE FOR SALE
40x60 W/F Opposite to Park Hunsur Road, Chikkahalli 500 Metr, From Main Road Infosys City
9342114717

S.K. CONSTRUCTION
ಹೊಸ ಮನೆ ಕಟ್ಟಬೇಕೆ, ಚಿಂತೆ ಬೇಡ Enginiaring Plan, 3D Elivation ಸಹಿತ ನಿಮ್ಮ ಕೈಗೆ ಎಟಕುವ ಬೆಲೆಯಲ್ಲಿ ಉತ್ತಮ ಗುಣಮಟ್ಟದಲ್ಲಿ Construction ಮಾಡಿ ಕೊಡುತ್ತೇವೆ.
9620528490

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ವ್ಯವಹರಿಸಬೇಕಾಗುತ್ತದೆ. ಇದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಕಾರ್ಯಕರ್ತರಿಗೆ ತೊಂದರೆ ಆದರೆ ಕೈಕಟ್ಟಿ ಕೂರಲ್ಲ

ಕೃತಜ್ಞತಾ ಸಭೆಯಲ್ಲಿ ಶಾಸಕ ಡಿ.ರವಿಶಂಕರ್‌ಗೆ ಮಾಜಿ ಸಚಿವ ಸಾರಾ ಮಹೇಶ್ ಪರೋಕ್ಷ ಎಚ್ಚರಿಕೆ



- ಏನಾದರೂ ಅಹಿತಕರ ಘಟನೆ ನಡೆದರೆ ನನ್ನ ಇನ್ನೊಂದು ಮುಖ ತೋರಿಸುವೆ
- ಸಿದ್ದರಾಮಯ್ಯನವರೇ ನಿಮ್ಮ ತರ ಸೋತಿದ್ದರೆ ನಾನು ರಾಜಕೀಯ ನಿವೃತ್ತಿ ಪಡೆಯುತ್ತಿದ್ದೆ

ಕೆ.ಆರ್.ನಗರ, ಜೂ.23– ಶಾಸಕ ಸ್ಥಾನ ಜನರು ಕೊಟ್ಟ ಭಿಕ್ಷೆ. ಜನರಿಗೆ ನೋವಾಗದಂತೆ ನಡೆದುಕೊಳ್ಳಬೇಕು. ಏನಾದರೂ ಅಧಿಕಾರ ದರ್ಪದಿಂದ ನನ್ನ ಕಾರ್ಯಕರ್ತರು ಮತ್ತು ಮತದಾರರಿಗೆ ತೊಂದರೆ ನೀಡಿದ್ದೇ ಆದಲ್ಲಿ ಕೈಕಟ್ಟಿ ಕೂರುವ ವ್ಯಕ್ತಿ ನಾನಲ್ಲ ಎಂದು ಶಾಸಕ ಡಿ.ರವಿಶಂಕರ್ ಅವರಿಗೆ ಮಾಜಿ ಸಚಿವ ಸಾ.ರಾ. ಮಹೇಶ್ ಪರೋಕ್ಷವಾಗಿ ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ರಾಜಕುಮಾರ ಬಾನಂಗಲದಲ್ಲಿ ಜೆಡಿಎಸ್ ಕಾರ್ಯಕರ್ತರಿಗೆ ಮತ್ತು ಮತದಾರರಿಗೆ ಏರ್ಪಡಿಸಿದ್ದ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಅವರು, ನಾನು ರಾಜಕಾರಣಿ ಅಲ್ಲ. ವಿದ್ಯಾರ್ಥಿ ಜೀವನದಿಂದಲೂ ಹೋರಾಟ ಮಾಡುತ್ತಾ ಬಂದಿದ್ದೇನೆ. ಇಲ್ಲಿಯ ತನಕ ನನ್ನ ಒಂದು ಮುಖವನ್ನು ನೋಡಿದ್ದೀರಿ. ತಾಲೂಕಿನಲ್ಲಿ ಏನಾದರೂ ಅಹಿತಕರ ಘಟನೆ ನಡೆದಿದ್ದೇ ಆದಲ್ಲಿ ನನ್ನ ಎರಡನೇ ಮುಖವನ್ನು ನೋಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡ ಸಾರಾ ನನ್ನ ಪಾಪದ ಕೊಡ ತುಂಬಿದೆ ಎಂದು ಹೇಳುವ ಸಿದ್ಧರಾಮಯ್ಯನವರೇ ಮುಖ್ಯಮಂತ್ರಿಯಾಗಿ 40,000 ಮತಗಳ ಅಂತರದಲ್ಲಿ ಸೋತ ನೀವು ಯಾವ ಪಾಪ ಮಾಡಿದ್ದೀರಿ. ಬಹಿರಂಗವಾಗಿ ಹೇಳಿ. ನಿಮ್ಮ ಸ್ಥಾನದಲ್ಲಿ ನಾನೇನಾದರೂ ಇದ್ದರೆ ರಾಜಕೀಯ ಜೀವನದಿಂದಲೇ ನಿವೃತ್ತಿ ಹೊಂದುತ್ತಿದ್ದೆ ಆದರೆ ಮಾನ ಮರ್ಯಾದೆ, ಗೌರವವಿಲ್ಲದ ನೀವು ಕರ್ನಾಟಕ ಜನತೆಗೆ ನೀಡಿದ ಆಶ್ವಾಸನೆಯನ್ನು ಈಡೇರಿಸಲಾರದ ನೀವು ಬೇರೆ ಯಾರನ್ನಾದರೂ ಟೀಕಿಸುವ ಮೊದಲು ಎಚ್ಚರಿಕೆಯಿಂದ ಮಾತನಾಡಿ ಎಂದು ವಾಗ್ದಾಳಿ ನಡೆಸಿದರು.

19 ವರ್ಷಗಳ ರಾಜಕೀಯ ಜೀವನದಲ್ಲಿ ಈ ತಾಲೂಕಿನ ಜನಸೇವೆಗಾಗಿ ಐವತ್ತು ಕೋಟಿ ರೂ. ಸಾಲಗಾರನಾಗಿದ್ದೇನೆ. ಪ್ರತಿ ಸೋಮವಾರ, ಶುಕ್ರವಾರ ಈ ತಾಲೂಕಿನ ಸಾವಿರಕ್ಕೂ ಹೆಚ್ಚು ಜನರಿಗಾಗಿ ಬೆಳಗ್ಗೆಯಿಂದ ಸಾಯಂ ಕಾಲದವರೆಗೆ ಅವರ ಸೇವೆ ಮಾಡಿದ್ದೇನೆ. ತಾಲೂಕಿನಲ್ಲಿ ಆಂಬುಲೆನ್ಸ್ ಸೇರಿದಂತೆ ಹತ್ತು ಹಲವು ಯೋಜನೆ ಗಳನ್ನು ಜಾರಿಗೆ ತಂದು ರಾಜ್ಯಕ್ಕೆ ಮಾದರಿಯಾಗಿದ್ದೇನೆ. ಇಡೀ ರಾಜ್ಯದಲ್ಲಿಯೇ ಅತಿ ಹೆಚ್ಚು ಅನುದಾನ ತಂದು ಎರಡು ತಾಲೂಕಿನ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದು ತಿಳಿಸಿದರು.

ತಾಲೂಕಿನ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಹಾಗೂ ಮತದಾರರು ಆತಂಕ ಪಡುವ ಅಗತ್ಯವಿಲ್ಲ. ನಾನಿರುವ ತನಕ ಜೆಡಿಎಸ್ ಪಕ್ಷದಲ್ಲಿದ್ದು, ನನ್ನ ನಾಯಕರಾದ ಎಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ರಾಜಕೀಯ ಮಾಡುತ್ತೇನೆ. ಕೆ.ಆರ್. ನಗರ ತಾಲೂಕಿನಲ್ಲಿಯೂ ನನ್ನ ನೇತೃತ್ವದಲ್ಲಿಯೇ ಮುಂದಿನ ಎಲ್ಲಾ ಚುನಾವಣೆಗಳು ನಡೆಯುತ್ತವೆ ಎಂದು ಭರವಸೆ ನೀಡಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಮಾಜಿ ಸಚಿವ ಸಾ.ರಾ. ಮಹೇಶ್ ಅವರು ಯಾವುದೇ ಕಾರಣಕ್ಕೂ ರಾಜಕೀಯದಿಂದ ದೂರ ಸರಿಯಬಾರದು. ಈ ವೇದಿಕೆಯ ಮೂಲಕ ಘೋಷಣೆ ಮಾಡಬೇಕು. ಅಲ್ಲಿಯ ತನಕ ನೆರೆದಿರುವ ಜನರು ಸ್ಥಳ ಬಿಟ್ಟು ಕದಲುವುದಿಲ್ಲ ಎಂದು ಮಾಜಿ ಶಾಸಕ ಸಾರಾ ಮಹೇಶ್ ಅವರನ್ನು ಒತ್ತಾಯಿಸಿದರು.

ಈಗಾಗಲೇ ಮಾಜಿ ಪ್ರಧಾನಮಂತ್ರಿ ಎಚ್.ಡಿ. ದೇವೇಗೌಡರು, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ರಾಜ್ಯದ ಎಲ್ಲಾ ಜೆಡಿಎಸ್ ನಾಯಕರು ಸೇರಿ ಸಾರಾ ಮಹೇಶ್ ಅವರು ರಾಜಕೀಯವನ್ನು ಕೆಆರ್‌ನಗರ ತಾಲೂಕಿನಿಂದಲೇ ಮಾಡುವಂತೆ ತಿಳಿಸಿದ್ದಾರೆ. ಅದರಂತೆ ಕೆ.ಆರ್.ನಗರ ತಾಲೂಕಿನ ತಾಯಂದಿರು ಮತ್ತು ಅಣ್ಣ–ತಮ್ಮಂದಿರು ಸಹ ಕಣ್ಣೀರು ಸುರಿಸಿ ಕೈ ಮುಗಿದು ತಮ್ಮ ನಿಲುವನ್ನು ಬದಲಾಯಿಸುವಂತೆ ಒತ್ತಾಯಿಸುತ್ತಿರುವುದರಿಂದ ಸಾರಾ ಮಹೇಶ್ ಅವರ ನಿಲುವನ್ನು ಬದಲಾಯಿಸಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಜಿಪಂ ಉಪಾಧ್ಯಕ್ಷ ಎ.ಎಸ್. ಚನ್ನಬಸಪ್ಪ, ರಾಜ್ಯ ಜೆಡಿಎಸ್ ಕಾರ್ಯದರ್ಶಿ ಚಂದ್ರಶೇಖರ್ ಕೆ.ಆರ್. ನಗರ ತಾಲೂಕು ಜೆಡಿಎಸ್ ಅಧ್ಯಕ್ಷ ಹಂಪಾಪುರ ಕುಮಾರ್, ಪುರಸಭಾ ಸದಸ್ಯರಾದ ಉಮೇಶ್, ಕೆ .ಎಲ್. ಜಗದೀಶ್, ಮಂಜುಳಾ ಚಿಕ್ಕವೀರ, ಕೆಪಿ ಪ್ರಭುಶಂಕರ್, ತೋಂಟದಾರ್ಯ, ಸಂತೋಷ್ ಗೌಡ, ಹರದನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಂದಿನಿ ರಮೇಶ್ .ಎಸ್, ವಕ್ತಾರ ಕೆ.ಎಲ್. ರಮೇಶ್, ಗುತ್ತಿಗೆದಾರ ಕಿಶೋರ್, ವಕೀಲ ತಿಮ್ಮಪ್ಪ, ಎಂ.ಟಿ. ಕುಮಾರ್, ಜೆಡಿಎಸ್ ಟೌನ್ ಕಾರ್ಯದರ್ಶಿ ರುದ್ರೇಶ್, ಹೋಟೆಲ್ ಮಹದೇವ್, ಹರ್ಷಿತ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಚಾಮುಂಡೇಶ್ವರಿ ದೇವಾಲಯದಲ್ಲಿ ಆಷಾಢ ಶುಕ್ರವಾರದ ವಿಶೇಷ ಪೂಜೆ



ಹೆಚ್.ಡಿ.ಕೋಟೆ, ಜೂ.23– ಪಟ್ಟಣದಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಮೊದಲನೇ ಆಷಾಢ ಶುಕ್ರವಾರದ ಪ್ರಯುಕ್ತ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಆಷಾಢ ಮಾಸದ ಈ ಶುಭದಿನದಂದು ತಾಯಿ ಚಾಮುಂಡೇಶ್ವರಿಗೆ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ಮಹಾ ಮಂಗಳಾರತಿ, ವಿಶೇಷವಾಗಿ ವಿವಿಧ ಪೂಜೆಗಳನ್ನು ಮಾಡುವುದರ ಮೂಲಕ ಭಕ್ತಾದಿಗಳಿಗೆ ಪ್ರಸಾದ ವಿನಿಮಯ ಮಾಡಲಾಯಿತು. ತಾಯಿ ಚಾಮುಂಡೇಶ್ವರಿಯನ್ನು ವಿಶೇಷವಾಗಿ ವಿವಿಧಹೂಗಳಿಂದ ಅಲಂಕರಿಸಲಾಗಿತ್ತು.

ದೇವಾಲಯದಲ್ಲಿ ನೆರೆದಿದ್ದ ಭಕ್ತಾದಿಗಳು ತಾಯಿಗೆ ತುಪ್ಪದ ದೀಪ ಬೆಳಗಿ ಶ್ಲೋಕಗಳನ್ನು ಹೇಳುವುದರ ಮೂಲಕ ಚಾಮುಂಡೇಶ್ವರಿ ದರ್ಶನ ಪಡೆದು ಪುನೀತರಾದರು.

ವಿದ್ಯಾಸಂಸ್ಥೆಯಲ್ಲಿ ನಗದು, ಬ್ಯಾಟರಿ ಕಳವು

ಮಲ್ಕುಂಡಿ: ಸಮೀಪದ ಹುರ ಗ್ರಾಮದ ಗಾಯತ್ರಿ ವಿದ್ಯಾಸಂಸ್ಥೆಯಲ್ಲಿ ಬೀಗ ಮುರಿದು ಶಾಲೆಯಲ್ಲಿದ್ದ 3 ಕಂಪ್ಯೂಟರ್ ಬ್ಯಾಟರಿ, 25 ಸಾವಿರ ನಗದು ಕಳವು ಮಾಡಿರುವ ಘಟನೆ ಗುರುವಾರ ರಾತ್ರಿ ಸಂಭವಿಸಿದೆ. ಕಳ್ಳತನದ ವೇಳೆ ಸಿಸಿ ಕ್ಯಾಮರಾವನ್ನು ಒಡೆದು ಹಾಕಿದ್ದಾರೆ. ವಿಷಯ ತಿಳಿದು ಹುಲ್ಲಹಳ್ಳಿ ಠಾಣೆಯ ಪಿಎಸ್‌ಐ ರಮೇಶ ಕರಕಿಕಟ್ಟಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.



ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮಹಿಳೆಯರ ಕಾರುಬಾರು

ಶಾಲಾ–ಕಾಲೇಜು ವಿದ್ಯಾರ್ಥಿಗಳ ಪರಿಸ್ಥಿತಿ ಅಯೋಮಯ



ತಿ.ನರಸೀಪುರ, ಜೂ.23–ರಾಜ್ಯ ಸರ್ಕಾರದ ಶಕ್ತಿ ಯೋಜನೆ ಮಹಿಳೆಯರಿಗೆ ವರದಾನವಾದರೆ, ಶಾಲಾ ಮಕ್ಕಳು ಮತ್ತು ಜನಸಾಮಾನ್ಯರಿಗೆ ತೀವ್ರ ತೊಂದರೆ ಎದುರಿಸುವಂತಾಗಿದೆ.

ರಾಜ್ಯ ಸರ್ಕಾರ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತವಾಗಿ ರಾಜ್ಯಾದ್ಯಂತ ಓಡಾಡಲು ಶಕ್ತಿ ಯೋಜನೆಯಡಿ ಅವಕಾಶ ಕಲ್ಪಿಸಿಕೊಟ್ಟಿರುವುದು ಮಹಿಳೆಯರು, ಮಧ್ಯಮ ವರ್ಗದವರು, ಗಾರ್ಮೆಂಟ್ಸ್ ಮಹಿಳೆಯರು ಹಾಗೂ ದುಡಿವ ಮಹಿಳೆಯರಿಗೆ ಅನುಕೂಲವಾಗಿದೆಯಾದರೂ ಸರ್ಕಾರದ ಯೋಜನೆಯಿಂದ ಶಾಲಾ ಮಕ್ಕಳು ತೊಂದರೆಗೆ ಸಿಲುಕಿರುವುದು ಕಂಡು ಬಂದಿದೆ.

ಸರ್ಕಾರ ಯೋಜನೆ ಜಾರಿಗೆ ತರುವ ಮೊದಲೇ ಬಸ್‌ಗಳಲ್ಲಿ ಪುರುಷರಿಗೆ ಶೇ.50 ರಷ್ಟು ಆಸನ ಮೀಸಲು ನೀಡಬೇಕೆಂಬ ಆದೇಶ ನೀಡಿದೆಯಾದರೂ ಸರ್ಕಾರದ ಆದೇಶ ಪಾಲನೆ ಮಾಡುವ ಅವಕಾಶವೇ ಸಿಗುತ್ತಿಲ್ಲ. ಬಸ್ ನಿಲ್ದಾಣಗಳಲ್ಲಿ ಮಹಿಳೆಯರು ಗುಂಪುಗುಂಪಾಗಿ ಕಾಯುತ್ತಾ ನಿಂತಿರುವ ದೃಶ್ಯ ಎಲ್ಲೆಡೆ ಕಂಡುಬರುತ್ತಿದೆ. ಬಸ್‌ಗಳು ನಿಲ್ದಾಣಕ್ಕೆ ಬರುತ್ತಿದ್ದಂತೆ ಸೀಟ್‌ಗಾಗಿ ಮಹಿಳೆಯರು ಮುಗಿ ಬೀಳುತ್ತಿದ್ದು, ಪುರುಷರಿಗೆ ಪ್ರಯಾಣಕ್ಕೆ ಅವಕಾಶವೇ ಇಲ್ಲದಂತ ಪರಿಸ್ಥಿತಿ ನಿರ್ಮಾಣವಾಗಿದೆ.

ಮಹಿಳೆಯರ ನೂಕು ನುಗ್ಗಲಿನಲ್ಲಿ ಪುರುಷರು ಬಸ್ ಹತ್ತಿ ಜಾಗ ಗಿಟ್ಟಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನೂಕು ನುಗ್ಗಲಿನಲ್ಲಿ ಪುರುಷರು ಹೋದರೆ ಬೇರೆಯದೇ ರೀತಿಯ ಗಲಾಟೆಗಳು ನಡೆಯುತ್ತಿವೆ.ಇದಿಷ್ಟೇ ಅಲ್ಲದೇ ಬೆಳಗ್ಗಿನ ಸಮಯವೇ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬಸ್ ನಿಲ್ದಾಣಕ್ಕೆ ದೌಡಾಯಿಸಿ ಬರುತ್ತಿರುವುದರಿಂದ ಶಾಲಾ ಕಾಲೇಜಿಗೆ ಹೋಗುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ತೀವ್ರವಾದ ತೊಂದರೆ ಎದುರಾಗಿದೆ.

ತಳ್ಳಾಟ, ನೂಕಾಟ, ಬಸ್ ಹತ್ತಲು ಪರದಾಟ!: ಉಚಿತ ಬಸ್ ಪ್ರಯಾಣಕ್ಕೆ ಮಹಿಳೆಯರು ಮುಗಿ ಬೀಳುತ್ತಿರುವುದರಿಂದ ಪಟ್ಟಣದ ಸರ್ಕಾರಿ ಬಸ್ ನಿಲ್ದಾಣ ಸದಾ ಕಾಲ ಮಹಿಳೆಯರಿಂದ ತುಂಬಿ ತುಳುಕುತ್ತಿದೆ. ಶಾಲಾ ಮಕ್ಕಳು, ಸರ್ಕಾರಿ ನೌಕರರು ಶಾಲೆ ಹಾಗು ಸರ್ಕಾರಿ ಕಚೇರಿಗೆ ತೆರಳಲು ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸಾರಿಗೆ ಇಲಾಖೆ ಬೆಳಗ್ಗೆ ಹಾಗೂ ಸಂಜೆ ವೇಳೆ ಹೆಚ್ಚುವರಿ ಬಸ್‌ಗಳನ್ನು ನಿಯೋಜಿಸಬೇಕೆಂಬುದು ಪ್ರಯಾಣಿಕರ ಬೇಡಿಕೆಯಾಗಿದೆ.

ಪಾಸ್‌ಗೆ ಮನ್ನಣೆ ನೀಡುತ್ತಿಲ್ಲ: ಕೆಎಸ್‌ಆರ್‌ಟಿಸಿಯ ಕೆಲವು ಬಸ್‌ಗಳಲ್ಲಿ ವಿದ್ಯಾರ್ಥಿಗಳ ಬಸ್ ಪಾಸ್‌ಗೆ ಮನ್ನಣೆ ನೀಡಲಾಗುತ್ತಿಲ್ಲವಾದ್ದರಿಂದ ವಿದ್ಯಾರ್ಥಿಗಳು ಶಾಲಾ ಸಮಯಕ್ಕೆ ಸರಿಯಾಗಿ ತಲುಪಲು ಸಾಧ್ಯವಾಗದೇ ತೊಂದರೆ ಎದುರಿಸುವಂತಾಗಿದೆ. ಜೊತೆಗೆ ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿ ಬಸ್ ಹತ್ತಲು ಬರುತ್ತಿರುವುದರಿಂದ ವಿದ್ಯಾರ್ಥಿಗಳು ತೀವ್ರವಾದ ಸಂಕಷ್ಟ ಎದುರಿಸುವಂತಾಗಿದೆ. ಹಾಗಾಗಿ ಶಾಲಾ ಸಮಯಕ್ಕೆ ಹೆಚ್ಚುವರಿ ಬಸ್ ಸೌಕರ್ಯ ಕಲ್ಪಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಡಬೇಕಿದೆ.

ಘಟನೆ ನಡೆದ 36 ಗಂಟೆಯೊಳಗೆ ಹುಣಸೂರು ಜೋಡಿ ಕೊಲೆ ಭೇದಿಸಿದ ಪೊಲೀಸರು

ಒಬ್ಬನ ಬಂಧನ, ಮತ್ತಿಬ್ಬರಿಗಾಗಿ ಶೋಧ



ಅಭಿಷೇಕ್

ಹುಣಸೂರು, ಜೂ.23–ಹುಣಸೂರು ಪಟ್ಟಣದಲ್ಲಿ ನಡೆದಿದ್ದ ಜೋಡಿ ಕೊಲೆ ಪ್ರಕರಣವನ್ನು ಭೇದಿಸುವಲ್ಲಿ ಹುಣಸೂರು ಟೌನ್ ಪೊಲೀಸರು ಯಶಸ್ವಿಯಾಗಿದ್ದು, ಕೊಲೆ ಆರೋಪಿಯನ್ನು ಬಂಧಿಸಿದ್ದಾರೆ. ತಲೆಮರೆಸಿಕೊಂಡಿರುವ ಮತ್ತಿಬ್ಬರು ಆರೋಪಿಗಳ ಪತ್ತೆಗೆ ಮುಂದಾಗಿದ್ದಾರೆ.

ಪಟ್ಟಣದ ಸರಸ್ವತಿಪುರಂ ವಾಸಿ ಮಾದಯ್ಯ ಎಂಬುವರ ಪುತ್ರ ಅಭಿಷೇಕ್(23) ಬಂಧಿತ ಕೊಲೆ ಆರೋಪಿಯಾಗಿದ್ದು, ಈತ ಈ ಹಿಂದೆ ಕಳ್ಳತನ, ಸುಲಿಗೆ ಸೇರಿದಂತೆ ಇನ್ನಿತರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದನೆಂಬುದು ವಿಚಾರಣೆಯಿಂದ ತಿಳಿದು ಬಂದಿದೆ.

ಪಟ್ಟಣದ ಪರಸಯ್ಯನ ಛತ್ರದ ಬಳಿಯಿರುವ ಎಸ್.ಎಸ್. ಸಾ ಮಿಲ್‌ನಲ್ಲಿ ವಾಚ್‌ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದ ವೆಂಕಟೇಶ್(70) ಹಾಗೂ ವಾರಸುದಾರರಿಲ್ಲದ ಷಣ್ಮುಖ ರಾವ್ ಅಲಿಯಸ್ ಕೋಳಿ (72) ಎಂಬುವರನ್ನು ದುಷ್ಕರ್ಮಿಗಳ್ಯಾರೋ ಕಬ್ಬಿಣದ ಆಯುಧದಿಂದ ಬಲವಾಗಿ ಹೊಡೆದು ಹತ್ಯೆಗೈದಿದ್ದರು. ಈ ಸಂಬಂಧ ಸಾ ಮಿಲ್ ಮಾಲೀಕರಾದ ಅಲೀಂ ಉಲ್ಲಾ ಷರೀಫ್ ಅವರು ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡ ಸರ್ಕಲ್ ಇನ್ಸ್‌ಪೆಕ್ಟರ್ ಎಸ್.ಎಂ. ದೇವೇಂದ್ರ ಅವರು, ತಮ್ಮ ತಂಡದೊಂದಿಗೆ ಕಾರ್ಯ ಪ್ರವೃತ್ತರಾಗಿ ಘಟನಾ ಸ್ಥಳದಲ್ಲಿ ದೊರೆತ ಸಿಸಿ ಟಿವಿ ಫುಟೇಜ್ ಮತ್ತು ಮಾಹಿತಿ ಆಧರಿಸಿ ತಲೆಮರೆಸಿಕೊಂಡಿದ್ದ ಆರೋಪಿ ಅಭಿಷೇಕ್‌ನನ್ನು ಘಟನೆ ನಡೆದ 36 ಗಂಟೆಗಳಲ್ಲಿ ಬಂಧಿಸಿದ್ದಾರೆ.

ಆರೋಪಿ ಅಭಿಷೇಕ್‌ನನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಲಾಗಿ, ತನಗೆ ಖರ್ಚಿಗಾಗಿ ಹಣ ಇರದಿದ್ದ ಕಾರಣ ಹಣಕ್ಕಾಗಿ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದು, ಕೊಲೆಗೆ ಸಹಕಾರ ನೀಡಿದ್ದ ಮತ್ತಿಬ್ಬರ ಹೆಸರನ್ನು ಬಹಿರಂಗಪಡಿಸಿದ್ದಾನೆ. ಈ ಮಾಹಿತಿ ಆಧರಿಸಿ ಪೊಲೀಸರು ಇನ್ನಿಬ್ಬರು ಆರೋಪಿಗಳ ಸೆರೆಗೆ ಕಾರ್ಯಾಚರಣೆ ಕೈಗೊಂಡಿದ್ದಾರೆ.

ಆರೋಪಿ ಅಭಿಷೇಕ್ 2021ರಿಂದ ಪಟ್ಟಣದಲ್ಲಿ ಸುಲಿಗೆ, ಕಳ್ಳತನ ಮತ್ತು ಬೈಕ್ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಸೀಮಾ ಲಾಟ್ಕರ್ ಅವರ ಮಾರ್ಗದರ್ಶನದಲ್ಲಿ, ಅಡಿಷನಲ್ ಎಸ್ಪಿ ಡಾ. ನಂದಿನಿ, ನೇತೃತ್ವದಲ್ಲಿ ಹುಣಸೂರು ಡಿವೈಎಸ್ಪಿ ಎಂ.ಕೆ.ಮಹೇಶ್ ನಿರ್ದೇಶನದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಎಸ್.ಎಂ. ದೇವೇಂದ್ರ, ಸಿಬ್ಬಂದಿಗಳಾದ ಹೆಚ್.ಎನ್. ಅರುಣ್, ಯೋಗೇಶ್, ಆರ್.ಪ್ರಭಾಕರ್, ರಾಜೇಗೌಡ, ಜಿ.ಕೆ.ಮಂಜುನಾಥ, ಅನಿಲ್ ಕುಮಾರ್, ಎಸ್.ಎ.ಮನೋಹರ, ಡಿ.ಎ.ಇರ್ಫಾನ್ ಅವರು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಪತ್ತೆ ಕಾರ್ಯದ ತಂಡವನ್ನು ಪೊಲೀಸ್ ಅಧೀಕ್ಷಕರು ಶ್ಲಾಘಿಸಿದ್ದಾರೆ.

ವಿಜೃಂಭಣೆಯ ಕಂಡಾಯ ಉತ್ಸವ, ದಾಸೋಹ



ತಿ.ನರಸೀಪುರ ಜೂ.23– ಆಷಾಢ ಮಾಸದ ಮೊದಲನೇ ಶುಕ್ರವಾರ ಪಟ್ಟಣದ ನಾಯಕರ ಬೀದಿಯಲ್ಲಿ ಐದನೇ ವರ್ಷದ ಕಂಡಾಯ ಉತ್ಸವ ಹಾಗೂ ದಾಸೋಹ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ನಾಯಕರ ಬೀದಿ ಸೇರಿದಂತೆ ವಿಶ್ವಕರ್ಮ ಬೀದಿ ಹಾಗೂ ತೇರಿನ ಬೀದಿಗಳಲ್ಲಿ ಕಂಡಾಯ ಉತ್ಸವದ ಹಿನ್ನೆಲೆಯಲ್ಲಿ ಹಬ್ಬದ ಸಂಭ್ರಮ ಕಂಡುಬಂದಿತು. ವಿವಿಧ ಹೂವು, ತೋರಣಗಳಿಂದ ಅಲಂಕರಿಸಿದ ಕಂಡಾಯಗಳಿಗೆ ಬೆಳಗ್ಗೆ ಕಾವೇರಿ ನದಿಯಲ್ಲಿ ಪೂಜೆ ಸಲ್ಲಿಸಿ,ಹೂವು ಹೊಂಬಾಳೆ ಕಳಸಗಳನ್ನು ತಂದು ಮೆರವಣಿಗೆ ಮಾಡಲಾಯಿತು. ನಂತರ ನಿಗದಿತ ಸ್ಥಳದಲ್ಲಿ ಪ್ರತಿಷ್ಠಾಪಿಸಿ ಸಾರ್ವಜನಿಕರ ದರ್ಶನ ಹಾಗೂ ಪೂಜೆಗೆ ಅನುವು ಮಾಡಿಕೊಡಲಾಯಿತು. ಉತ್ಸವದ ಬಳಿಕ ಸಾವಿರಾರು ಜನರಿಗೆ ದಾಸೋಹವನ್ನು ಏರ್ಪಡಿಸಲಾಗಿತ್ತು. ಟೌನ್ ನಾಯಕ ಸಮಾಜದ ಯಜಮಾನರು ಹಾಗೂ ವಿನಾಯಕ ಗೆಳೆಯರ ಸ್ನೇಹಿತರ ಬಳಗ ಉಸ್ತವವನ್ನು ಯಶಸ್ವಿಯಾಗಿ ನಡೆಸಿದರು.

ನಂ.ಗೂಡು ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ನಿಗದಿ



ನಂಜನಗೂಡು, ಜೂ.23– ನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ನೇತೃತ್ವದಲ್ಲಿ ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ಗ್ರಾಮ ಪಂಚಾಯ್ತಿ 2ನೇ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳಿಗೆ ಮೀಸಲಾತಿ ನಿಗದಿಪಡಿಸಲಾಯಿತು.

ರಾಂಪುರ: ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್ಟಿ), **ಮರಳೂರು:** ಅಧ್ಯಕ್ಷ (ಎಸ್ಟಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ತಾಂಡವಪುರ:** ಅಧ್ಯಕ್ಷ (ಕ್ಯಾಟಗರಿ–ಎ), ಉಪಾಧ್ಯಕ್ಷ (ಸಾಮಾನ್ಯ), **ಕೆಂಪಿಸಿದ್ದನ ಹುಂಡಿ:** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್ಸಿ ಮಹಿಳೆ), **ಹುಳಿಮಾವು:** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಕ್ಯಾಟಗರಿ–ಎ ಮಹಿಳೆ), **ಹದಿನಾರು:** ಅಧ್ಯಕ್ಷ (ಎಸ್ಸಿ ಮಹಿಳೆ), ಉಪಾಧ್ಯಕ್ಷ(ಕ್ಯಾಟಗರಿ–ಎ), **ಹೊಸಕೋಟೆ** ಅಧ್ಯಕ್ಷ(ಎಸ್ಸಿ), ಉಪಾಧ್ಯಕ್ಷ(ಸಾಮಾನ್ಯ ಮಹಿಳೆ), **ತುಮ್ಮನೇರಳೆ:** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್ಸಿ ಮಹಿಳೆ), **ತಾಯೂರು:** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್ಸಿ), **ಸುತ್ತೂರು:** ಅಧ್ಯಕ್ಷ (ಎಸ್ಸಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ಬಿಳಿಗೆರೆ:** ಗ್ರಾಪಂ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ನಗರ್ಲೆ:** ಅಧ್ಯಕ್ಷ (ಎಸ್ಸಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ಮಲ್ಲೂಪುರ:** ಅಧ್ಯಕ್ಷ(ಎಸ್ಸಿ ಮಹಿಳೆ), ಉಪಾಧ್ಯಕ್ಷ(ಸಾಮಾನ್ಯ). **ತಗಡೂರು:** ಅಧ್ಯಕ್ಷ(ಕ್ಯಾಟಗರಿ–ಎ), ಉಪಾಧ್ಯಕ್ಷ (ಸಾಮಾನ್ಯ), **ಕಾರ್ಯ:** ಅಧ್ಯಕ್ಷ(ಎಸ್ಟಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ದಾಸನೂರು:** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್ಟಿ), **ಕೋಣನೂರು:** ಅಧ್ಯಕ್ಷ (ಎಸ್ಸಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ದೇವನೂರು:** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್ಸಿ ಮಹಿಳೆ), **ದೊಡ್ಡಕೌಲಂದೆ :** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್ಸಿ), **ನೇರಳೆ:** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ಹೆಮ್ಮರಗಾಲ:** ಅಧ್ಯಕ್ಷ (ಎಸ್ಟಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ಕೂಡ್ಲಾಪುರ:** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್ಟಿ ಮಹಿಳೆ), **ಹೆಡತಲೆ:** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್ಸಿ ಮಹಿಳೆ), **ಬದನವಾಳು:** ಅಧ್ಯಕ್ಷ (ಎಸ್ಸಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ಹೊರಳವಾಡಿ:** ಅಧ್ಯಕ್ಷ (ಎಸ್ಸಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ದೇಮರಸನಹಳ್ಳಿ:** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್ಸಿ), **ಕಳಲೆ :** ಅಧ್ಯಕ್ಷ (ಎಸ್ಟಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ಸಿಂಧುವಳ್ಳಿ:** ಅಧ್ಯಕ್ಷ (ಎಸ್ಟಿ), ಉಪಾಧ್ಯಕ್ಷ (ಸಾಮಾನ್ಯ), **ಕಸುವಿನಹಳ್ಳಿ:** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ(ಎಸ್ಟಿ ಮಹಿಳೆ), **ನವಿಲೂರು:** ಅಧ್ಯಕ್ಷ (ಎಸ್ಸಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ದೇವಿರಮ್ಮನಹಳ್ಳಿ:** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್ಸಿ), **ದೇಬೂರು:** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ(ಎಸ್ಟಿ), **ಹೆಗ್ಗಡಹಳ್ಳಿ:** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ(ಎಸ್ಟಿ ಮಹಿಳೆ), **ಶಿರಮಳ್ಳಿ :** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್ಟಿ ಮಹಿಳೆ), **ಹುಲ್ಲಹಳ್ಳಿ:** ಅಧ್ಯಕ್ಷ (ಎಸ್ಟಿ ಮಹಿಳೆ), ಉಪಾಧ್ಯಕ್ಷ(ಸಾಮಾನ್ಯ), **ಕುರಿಹುಂಡಿ:** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್ಟಿ), **ಹರದನಹಳ್ಳಿ:** ಅಧ್ಯಕ್ಷ (ಎಸ್ಸಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ನೆಲ್ಲಿತಾಳಪುರ:** ಅಧ್ಯಕ್ಷ(ಎಸ್ಟಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ದುಗ್ಗಹಳ್ಳಿ:** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ಹಗಿನವಾಳು:** ಅಧ್ಯಕ್ಷ(ಎಸ್ಸಿ ಮಹಿಳೆ), ಉಪಾಧ್ಯಕ್ಷ(ಸಾಮಾನ್ಯ), **ಹಲ್ಲರೆ:** ಅಧ್ಯಕ್ಷ (ಎಸ್ಸಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ಹುರಾ:** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ(ಎಸ್ಸಿ), **ಹಾಡ್ಯ:** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್ಟಿ ಮಹಿಳೆ), **ದೇವರಾಯಶೆಟ್ಟಿ:** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ(ಎಸ್ಟಿ), **ಹೆಡಿಯಾಲ:** ಅಧ್ಯಕ್ಷ (ಎಸ್ಟಿ ಮಹಿಳೆ), ಉಪಾಧ್ಯಕ್ಷ(ಸಾಮಾನ್ಯ).

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಮಾತನಾಡಿ, ನಂಜನಗೂಡು ತಾಲೂಕಿನ 45 ಗ್ರಾಪಂಗಳ ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿಯನ್ನು ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ಎನ್.ಐ.ಸಿ. ಸಾಫ್ಟ್‌ವೇರ್ ಉಪಯೋಗಿಸಿಕೊಂಡು ಪ್ರಕ್ರಿಯೆಯನ್ನು ನಡೆಸಲಾಗಿದೆ. ಅಲ್ಲದೆ 45 ಗ್ರಾಪಂ ಪೈಕಿ ಎಸ್ಸಿ ವರ್ಗಕ್ಕೆ 12, ಎಎಸ್ಟಿ ವರ್ಗಕ್ಕೆ 8, ಕ್ಯಾಟಗರಿ ಎ 2 ಸ್ಥಾನ, ಸಾಮಾನ್ಯ ವರ್ಗಕ್ಕೆ 23 ಸ್ಥಾನಗಳನ್ನು ನಿಗದಿಪಡಿಸಲಾಗಿದೆ. ಅಂತೆಯೇ ಶೇ.50ರಷ್ಟು ಸ್ಥಾನಗಳನ್ನು ಆಯಾ ವರ್ಗದ ಮಹಿಳೆಯರಿಗೂ ನಿಗದಿಪಡಿಸಲಾಗಿದೆ ಸದಸ್ಯರಿಗೆ ಈ ಮೀಸಲಾತಿ ಒಪ್ಪಿಗೆಯಾಗದೆ ಇದ್ದಲ್ಲಿ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವ ಅವಕಾಶವೂ ಇದೆ ಎಂದರು.

ಆಯಾಯ ಗ್ರಾಪಂಗಳ ಸದಸ್ಯರ ಸಂಖ್ಯೆಗೆ ಅನುಗುಣವಾಗಿ 2010ರ ನಂತರ ಎಸ್ಸಿ, ಎಸ್ಟಿ ವರ್ಗಕ್ಕೆ ಸ್ಥಾನ ಸಿಗದ ಕಾರಣ ಹೊಸಕೋಟೆ, ಹಗಿನವಾಳು ಮಲ್ಲೂಪುರ ಗ್ರಾಪಂಗಳಿಗೆ ಲಾಟರಿ ಮೂಲಕ ಮೀಸಲಾತಿಯನ್ನು ಆಯ್ಕೆಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಆಯುಕ್ತೆ ರೂಪ, ತಹಶೀಲ್ದಾರ್ ಶಿವಕುಮಾರ್, ಆರ್.ಐ. ಪ್ರಕಾಶ್, ಚುನಾವಣಾಧಿಕಾರಿ ಮಹದೇವ ಪ್ರಸಾದ್, ಕಂದಾಯ ಇಲಾಖೆಯ ಸಿಬ್ಬಂದಿ ಇದ್ದರು.

ಪುಟ್ಟೀರಾಚಾರ್ ನಿಧನ



ಸರಗೂರು, ಜೂ.23– ತಾಲೂಪಿನ ತುಂಬಸೋಗೆ ಗ್ರಾಮದ ಪುಟ್ಟೀರಾಚಾರ್(79) ಗುರುವಾರ ರಾತ್ರಿ ನಿಧನರಾಗಿದ್ದಾರೆ.

ಮೃತರು ಮೂವರು ಪುತ್ರಿಯರು, ಓರ್ವ ಪುತ್ರ, ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ತುಂಬಸೋಗೆ ಗ್ರಾಮದ ಕಪಿಲಾ ನದಿಯ ದಡದಲ್ಲಿ ಶುಕ್ರವಾರ ನಡೆಸಲಾಯಿತು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 10ರಲ್ಲಿ